ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

Saturday, the 28th June, 1980/Ashada 7, 1902 S.E.

The House met in the Assembly Chamber, Vidhana Soudha, at Nine of the Clock.

[MR. SPEAKER (SRI P. VENKATARAMANA) in the Chair.]

Private Members Resolution

MR. SPEAKER.—Now we shall take up further discussion on the Resolution moved by Sri P. Ramdev on 8th August 1978.

"To provide all essential civic amenities to the people liveing in the slum areas of Bangalore City since several years"

SRI S. R. Bommai.—Will speak

† ಶ್ರೀ ಎಸ್. ಆರ್. ಬೊಮ್ಮಾಯಿ (ಹುಬ್ಬಳ್ಳಿ ಗ್ರಾಮಾಂತರ).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀ ಪಿ. ರಾಮದೇವ್ ಅವರು ತಂದಿರುವ ನಿರ್ಣಯವು ಬಹಳ ಮಹತ್ವವಾಗಿದ್ದು ಅದರ ಬಗ್ಗೆ ಎಲ್ಲರೂ ಆದ್ಯ ಗಮನ ಕೊಡಬೇಕಾಗಿದೆ. ಕೊಳಚೆ ಪ್ರದೇಶಗಳ ಪರಿಸ್ಥಿತಿ ಕೇವಲ ಬೆಂಗಳೂರು ನಗರಕ್ಕೆ ಸೀಮಿತವಾಗಿರದೆ ರಾಜ್ಯದ ಅನೇಕ ನಗರಗಳಲ್ಲಿ ಇಂತಹ ಕೊಳಚೆ ಪ್ರದೇಶಗಳು ಬೆಳಗಾಗುವುದರೊಳಗೆ ಹುಟ್ಟುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಬೆಂಗಳೂರು ನಗರದಲ್ಲಂತೂ ಕಳೆದ ಮೂರು-ನಾಲ್ಕು ವರ್ಷಗಳಿಂದ ಎಲ್ಲಿ ನೋಡಿದರಲ್ಲಿ ಕೊಳಚೆ ಪ್ರದೇಶಗಳು ಹುಟ್ಟುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಅನೇಕ ನಗರಸಭೆ ಜಾಗಗಳಲ್ಲಿ, ಸರ್ಕಾರಿ ಜಾಗಗಳಲ್ಲಿ ಮತ್ತು ಖಾಸಗಿ ಜಾಗಗಳಲ್ಲಿ ಯಾವುದೇ ರೀತಿಯ ಅಪ್ಪಣೆ ಪಡೆಯದ ಮನೆಗಳನ್ನು ಮನಬಂದಂತೆ ಕಟ್ಟುತ್ತಿರುವುದನ್ನು ನಾವು ನೋಡಿದ್ದೇವೆ. ನಾನು ಬೆಂಗಳೂರು ನಗರ ಶಾಸಕರ ಜೊತೆಗೆ ಸುಮಾರು ಮೂವತ್ತು ನಲವತ್ತು ಕೊಳಚೆ ಪ್ರದೇಶಗಳಿಗೆ ಭೇಟಿ ಕೊಟ್ಟಿದ್ದೇನೆ ಅಲ್ಲೆಲ್ಲ ನೋಡಿದಾಗ, ಯಾರೋ ಕೆಲವರು ಯೋಜನಾಬದ್ಧವಾಗಿ ಬಡವರಿಂದ ಹಣ ದೋಚಿ ಹೀಗೆ ಗುಡಿಸಲುಗಳನ್ನು ಅಥವಾ ಮನೆಗಳನ್ನು ಕಟ್ಟುವುದಕ್ಕೆ ಅವಕಾಶ ಮಾಡಿಕೊಡುವುದನ್ನು ವ್ಯವಸ್ಥೆ ಮಾಡುತ್ತಿರುವುದು ಕಂಡುಬರುತ್ತದೆ. ಅಲ್ಲಿನ ವಾಸಿಗಳನ್ನು ಕೇಳಿದಾಗ, ಈ ಜಾಗವನ್ನು ನಮಗೇ ಖಾಯಂ ಆಗಿ ಕೊಡುತ್ತಾರಂತೆ, ನಗರಸಭೆಯವರು ಇಲ್ಲಿಗೆಲ್ಲ ನಲ್ಲಿ, ದೀಪ ಮತ್ತು ರಸ್ತೆಯ ವ್ಯವಸ್ಥೆ ಮಾಡುತ್ತಾರಂತೆ ಎಂದು ಸ್ಪಷ್ಟವಾಗಿ ಹೇಳುತ್ತಾರೆ. ಇದರ ಹಿನ್ನೆಲೆ ನೋಡಿದಾಗ ಬಡಜನರಿಗೆ ತಪ್ಪು ತಿಳುವಳಿಕೆ ಕೊಟ್ಟು ಮತ್ತು ಆಸೆಗಳನ್ನು ತೋರಿಸಿ ಅವರಿಂದ ಹಣ ದೋಚುವ ಪ್ರಯತ್ನಗಳು ಗೋಚರವಾಗುತ್ತವೆ ಈ ಬಗ್ಗೆ ಅನೇಕ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ಆದುದರಿಂದ, ನಾನೂ ಕೂಡ ಇದರ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಸರ್ಕಾರ ಇದನ್ನು ತಡೆಗಟ್ಟಲು ಕೂಡಲೇ ಕ್ರಮ ತೆಗೆದುಕೊಳ್ಳಬೇಕು, ಮುಂದೆ ಇಂತಹ ಕೊಳಚೆ ಪ್ರದೇಶಗಳು ಹುಟ್ಟದಂತೆ ನೋಡಿಕೊಳ್ಳಬೇಕು. ಪ್ರಾಸಂಗಿಕವಾಗಿ ಹೇಳುವುದಾದರೆ ಹುಬ್ಬಳ್ಳಿಯಲ್ಲೂ ಸಹ ಇಂತಹ ನೂರು ಕೊಳಚೆ ಪ್ರದೇಶಗಳಿವೆ, ಮೊದಲು ಸರ್ಕಾರದವರು ಗುರುತುಪಡಿಸಿದ್ದ ಕೊಳಚೆ ಪ್ರದೇಶಗಳು ೬೨ ಇದ್ದರೆ ಇಂದು ಅದಕ್ಕಿಂತಲೂ ಹೆಚ್ಚು ಇದೆ. ಅಲ್ಲಿನ ನಗರಸಭೆಯವರು ಲೇಔಟೊಂದನ್ನು ತಯಾರು ಮಾಡಿ ಅದನ್ನು ಜನರಿಗೆ ಹಂಚಬೇಕೆಂದಿದ್ದಾಗ ಕೆಲವರು ಹೋಗಿ ಅಲ್ಲಿ ಗುಡಿಸಲು ಹಾಕಿಕೊಂಡು ಕುಳಿತರು. ಗುಡಿಸಲುಗಳನ್ನು ಕಟ್ಟಲು ಉಪಯೋಗಿಸಿದ್ದ ಜೋಳದ ದಂಟಿನ ಬೆಲೆ ಒಂದೇ ರಾತ್ರಿಯಲ್ಲಿ ನೂರು ಪಟ್ಟಿನಷ್ಟು ಜಾಸ್ತಿಯಾಯಿತು. ಹೀಗೆ ಸಿದ್ಧರೂಢಾಶ್ರಮದ ಹಿಂದೆ

ನಿರ್ಮಿಸುತ್ತಿದ್ದ ಸಾವಿರಾರು ಮನೆಗಳನ್ನು ಮುನಿಸಿಪಲ್ ಅಧಿಕಾರಿಗಳು ತಡೆಯಲಿಲ್ಲ. ಪೋಲೀಸ್ ಅಧಿಕಾರಿಗಳೂ ನಿಲ್ಲಿಸಲಿಲ್ಲ. ಆದರೆ ಇದರಿಂದ ಸಾರ್ವಜನಿಕರ ಪ್ರತಿನಿಧಿಗಳಾದ ನಮಗೆ ಬಹಳ ಕಷ್ಟ. ಚುನಾವಣೆ ಮುಂದೆ ಇದ್ದುದರಿಂದ ನಾವು ಏನನ್ನೂ ಹೇಳುವುದಕ್ಕೆ ಸಾಧ್ಯವಿರಲಿಲ್ಲ. ನನ್ನ ಕಣ್ಣೆದುರಿಗೇ ಸಾವಿರಾರು ಜನ ಮನೆಗಳನ್ನು ಕಟ್ಟುತ್ತಿದ್ದಾರೆ. ಅವರ ನಾಯಕರು ಅಲ್ಲಿ ಮನೆ ಕಟ್ಟುತ್ತಿರುವ ಒಬ್ಬೊಬ್ಬನಿಂದ 20-25 ರೂಪಾಯಿಗಳನ್ನು ತೆಗೆದುಕೊಂಡು ಒಂದು ರೂಪಾಯಿಗೆ ರಶೀದಿ ಕೊಡುತ್ತಿದ್ದರು. ಹೀಗೆ ಸಾವಿರಾರು ಜನರಿಂದ ಹಣ ವಸೂಲು ಮಾಡಿದರು ಮತ್ತು ಗುಡಿಸಲುಗಳು ಮೇಲೆ ಬಂದವು. ಚುನಾವಣೆಯಾದಮೇಲೆ ಮುನಿಸಿಪಲ್ ಕಮಿಷನರ್ ಮತ್ತು ಪೋಲೀಸ್ ಅಧಿಕಾರಿಗಳು ಬಂದು ಆ ಗುಡಿಸಲುಗಳನ್ನೆಲ್ಲ ಕಿತ್ತುಹಾಕಿಸಿದರು. ಮತ್ತೆ ಕೆಲವರನ್ನು ಜೈಲಿಗೂ ಕಳುಹಿಸಿದರು. ಮನೆ ಕಟ್ಟಿದ ಮೇಲೆ ಅದನ್ನು ಕೀಳತಕ್ಕದ್ದು ಅಧಿಕಾರಿಗಳಿಗೂ ಕಷ್ಟದ ಕೆಲಸ, ಸಾರ್ವಜನಿಕರ ಪ್ರತಿನಿಧಿಗಳಾದ ನಮಗೂ ಕಷ್ಟದ ಕೆಲಸ. ಗುಡಿಸಲುಗಳನ್ನು ಕಳೆದುಕೊಂಡವರಲ್ಲಿ ಕೆಲವರು ನಗರ ಸಭೆ ಮತ್ತು ತಹಶೀಲ್ದಾರರ ಕಛೇರಿ ಮುಂದೆ ಸತ್ಯಾಗ್ರಹ ಮಾಡಿದರು. ಕೊನೆಗೆ ಒಂದು ರೀತಿ ಎಲ್ಲರನ್ನು ಒಪ್ಪಿಸಿ ಅವನ್ನೆಲ್ಲ ಸಂಚಲಿಕ್ಕೆ ವ್ಯವಸ್ಥೆ ಮಾಡಿದ್ದೇವೆ. ಇದನ್ನು ಏಕೆ ನಾನು ಹೇಳುತ್ತಿದ್ದೇನೆಂದರೆ, ಈ ಕೊಳಚೆ ಪ್ರದೇಶಗಳನ್ನು ಅವು ಹುಟ್ಟುವುದಕ್ಕೆ ಮೊದಲೇ ನಗರಸಭೆ ಅಥವಾ ಅದಕ್ಕೆ ಸಂಬಂಧಿಸಿದ ಅಧಿಕಾರಿಗಳು ಎಚ್ಚರ ತೆಗೆದುಕೊಂಡರೆ ಅವುಗಳ ನಿರ್ಮಾಣವನ್ನು ನಿಲ್ಲಿಸಬಹುದು. ಆದುದರಿಂದ, ಸರ್ಕಾರ ಈ ಬಗ್ಗೆ ಆವಶ್ಯವಿದ್ದರೆ ಕಾನೂನನ್ನು ತಿದ್ದುಪಡಿ ಮಾಡಿ, ಆಜ್ಞೆಗಳನ್ನು ಹೊರಡಿಸಿ ಇನ್ನು ಮುಂದೆ ನಗರಸಭೆ ಅಧಿಕಾರಿಗಳು ಹೊಸ ಕೊಳಚೆ ಪ್ರದೇಶಗಳು ನಿರ್ಮಾಣವಾಗದಂತೆ ನೋಡಿಕೊಳ್ಳಬೇಕೆಂದು ತಿಳಿಸಬೇಕು. ಅದನ್ನು ಮಾಡದೆ ಹೋದರೆ ಕೊಳಚೆ ಪ್ರದೇಶಗಳ ಸಮಸ್ಯೆ ಎಂದಿಗೂ ಬಗೆಹರಿಯುವುದಿಲ್ಲ. ಸಮಸ್ಯೆಗಳು ಒಂದಾದ ಮೇಲೊಂದರಂತೆ ಉದ್ಭವವಾಗುತ್ತಾ ಇರುತ್ತವೆ. ಬೆಂಗಳೂರು ನಗರದಲ್ಲಿ ಹೆಚ್ಚು ಕೊಳಚೆ ಪ್ರದೇಶಗಳಿವೆ. ಅಂತೆಯೇ ಅವು ಬೆಳಗಾವಿ, ಮಂಗಳೂರು, ಹುಬ್ಬಳ್ಳಿ ನಗರಗಳಲ್ಲೂ ಹೆಚ್ಚುತ್ತಿವೆ. ಆದುದರಿಂದ ಕೊಳಚೆ ಪ್ರದೇಶಗಳನ್ನು ತಡೆಗಟ್ಟಲು ಸರ್ಕಾರ ಏನು ಪ್ರಯತ್ನ ಮಾಡಿದೆ ಎಂಬುದನ್ನು ತಿಳಿಸಬೇಕು. ಕೊಳಚೆ ಪ್ರದೇಶ ನಿರ್ಮೂಲನೆ ಮತ್ತು ಸುಧಾರಣೆಗೆ ಸಂಬಂಧಿಸಿದಂತೆ ಸರ್ಕಾರ ಯಾವ ಶಾಸನ ತಂದರೂ ನಾವದಕ್ಕೆ ಸಂಪೂರ್ಣ ಬೆಂಬಲ ಕೊಡುತ್ತೇನೆ. ನಾನು ಬೆಂಗಳೂರು ನಗರದಲ್ಲಿರುವ ಕೆಲವು ಕೊಳಚೆ ಪ್ರದೇಶಗಳಿಗೆ ಭೇಟಿಕೊಟ್ಟು ನೋಡಿದಾಗ ಅಲ್ಲಿ ಕೆಲವರು ಹಸುಗಳನ್ನು ಕಟ್ಟಿಕೊಂಡು ಜೀವನ ಸಾಗಿಸುತ್ತಿದ್ದುದನ್ನು ಗಮನಿಸಿದೆ. ಅದು ಕೆಲವರಿಗೆ ಉಪಜೀವನ ಕೂಡ. ಈಗ ಕೊಳಚೆ ಪ್ರದೇಶಗಳ ನಿರ್ಮೂಲನ ದೃಷ್ಟಿಯಿಂದ ಅಲ್ಲಿರುವವರಿಗೆ ಪುನರ್ವಸತಿ ಕಲ್ಪಿಸುವ ಯೋಜನೆ ಇದೆ. ಅದರಲ್ಲಿ ದೋಷವಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ತಮಿಳುನಾಡಿನಲ್ಲಿ ಹೋಗಿ ನೋಡಿದರೆ ಅಲ್ಲಿ ಅವರು ಯಾವ ರೀತಿ ಈ ಸಮಸ್ಯೆಯನ್ನು ಬಿಡಿಸಿದ್ದಾರೆನ್ನುವುದು ಅರ್ಥವಾಗುತ್ತದೆ. ಒಂದು ಅವಕಾಶದಲ್ಲಿ ನಾನು ಸಿಂಗಾಪೂರಕ್ಕೆ ಹೋಗಿದ್ದೆ. ಅಲ್ಲಿ ಕೇವಲ ಒಂದೆರಡು ವರ್ಷಗಳಲ್ಲಿ ಕೊಳಚೆ ಪ್ರದೇಶಗಳೇ ಇಲ್ಲದಂತೆ ಮಾಡಿದ್ದಾರೆ. ಕೊಳಚೆ ಪ್ರದೇಶಗಳ ನಿರ್ಮೂಲನವನ್ನು ಅವರು ಯೋಜನಾಬದ್ಧವಾಗಿ ಮಾಡಿರುವುದು ಇದರಿಂದ ಗೊತ್ತಾಗುತ್ತದೆ. ಕೊಳಚೆ ಪ್ರದೇಶಗಳಲ್ಲಿದ್ದ ಜನರನ್ನು ಬೇರೆ ಕಡೆಗೆ ತಾತ್ಕಾಲಿಕವಾಗಿ ವಸತಿ ಸೌಲಭ್ಯ ಕಲ್ಪಿಸಿಕೊಟ್ಟು, ಅಲ್ಲಿ ಬಹು ಅಂತಸ್ತಿನ ಕಟ್ಟಡಗಳನ್ನು ಕಟ್ಟಿಸಿದ್ದಾರೆ. ತಮಿಳುನಾಡಿನಲ್ಲೂ ಅದೇ ರೀತಿ ಕಟ್ಟಿಸಿದ್ದಾರೆ. ಇಂತಹ ಕಟ್ಟಡಗಳು ಒಂದು ತಿಂಗಳಲ್ಲೇ ನಿರ್ಮಾಣವಾಗಿಬಿಡುತ್ತವೆ. ಕೊಳಚೆ ಪ್ರದೇಶಗಳಲ್ಲಿ ವಾಸಿಸುವವರಲ್ಲಿ ಕೆಲವರು ಹಸುಗಳನ್ನು ಕಟ್ಟಿಕೊಂಡಿರುತ್ತಾರೆ. ಕೆಲವರು ಕುಂಬಾರರು ಗಡಿಗೆ ಮಡಿಕೆಗಳನ್ನು ಮಾಡುತ್ತಾ ಇರುತ್ತಾರೆ. ಮೇದಾರ ಜಾತಿಯವರು ಬುಟ್ಟಿ ಹೆಣೆಯುತ್ತಾ ಇರುತ್ತಾರೆ. ಇಂತಹವರ ಕಸುಬುಗಳಿಗೆ ಧಕ್ಕೆ ಬರುವುದರಿಂದ ಬಹುಅಂತಸ್ತುಗಳ ಕಟ್ಟಡಗಳಿಗೆ ಹೋಗಲು ಒಪ್ಪುವುದಿಲ್ಲ. ಆದುದರಿಂದ, ಕೆಲವು ಕಡೆ ಏನು ಮಾಡುತ್ತಾರೆಂದರೆ, ಬಹು ಅಂತಸ್ತಿನ ಕಟ್ಟಡದ ಕೆಳಭಾಗದಲ್ಲಿ ಸಾರ್ವತ್ರಿಕ ಹಸು ಸಾಕಣೆಕೆ ಜಾಗ ಮತ್ತು ಕುಂಬಾರರು ಹಾಗೂ ಮೇದಾರರಿಗೆ ಪ್ರತ್ಯೇಕ ಸಾರ್ವತ್ರಿಕ ಜಾಗಗಳನ್ನು ನಿರ್ಮಾಣ ಮಾಡಿರುತ್ತಾರೆ. ಅಲ್ಲಿ ಅವರೆಲ್ಲ ಕುಳಿತು ತಮ್ಮ ತಮ್ಮ ಕೆಲಸಗಳನ್ನು ಮಾಡುತ್ತಾರೆ. ಬಹು ಅಂತಸ್ತಿನ ಕಟ್ಟಡದಮೇಲೆ ವಾಸ ಮಾಡುತ್ತಾರೆ. ಈ ರೀತಿಯ ವ್ಯವಸ್ಥೆ ತಮಿಳುನಾಡಿನಲ್ಲಿ ಮತ್ತು ಬೇರೆ ಕಡೆಗಳಲ್ಲೂ ಇದೆ. ಇದನ್ನು ಬೆಂಗಳೂರು ನಗರದಲ್ಲಿಯೂ ಮಾಡಬೇಕು. ಆದರೆ ನನಗೆ ತಿಳಿದು ಬಂದಿರುವ ಮಟ್ಟಿಗೆ ಈಗ ತಯಾರಿಸಿರುವ ಮಾಸ್ಟರ್ ಪ್ಲಾನ್‌ನಲ್ಲಿ ಇದಿಲ್ಲವಲ್ಲ. ಹೊಸದಾಗಿ ಇದನ್ನು ಸೇರಿಸಿದ್ದಾರೋ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ. ಒಂದು ವೇಳೆ ಇನ್ನೂ ಮಾಡಿರದಿದ್ದರೆ ಅದನ್ನು ಮಾಡಬೇಕೆಂದು ಹೇಳುತ್ತೇನೆ.

ಇದರ ಜೊತೆಗೆ ನಾನು ಇನ್ನೊಂದು ಮಾತನ್ನು ಹೇಳಬೇಕಾಗಿದೆ. ಕೊಳಚೆ ಪ್ರದೇಶಗಳ ನಿರ್ಮೂಲನಕ್ಕಾಗಿ ಬೇರೆ ರಾಜ್ಯಗಳು ಕೇಂದ್ರದಿಂದ ಪಡೆದಿರುವ ಮೊತ್ತ ಬಹಳ ದೊಡ್ಡದಾಗಿದೆ. ಅದರ ಅಂಕಿ-ಸಂಖ್ಯೆ ಸದ್ಯ ನನ್ನ ಬಳಿ ಇಲ್ಲ, ಇವನ್ನು ಬಿಟ್ಟುಬಂದಿದ್ದೇನೆ. ಆದರೆ, ತಮಿಳುನಾಡು ರಾಜ್ಯದವರು ಕೇಂದ್ರದಿಂದ ಪರಮಾವಧಿ ನೆರವನ್ನು ಪಡೆದಿದ್ದಾರೆ. ಆದರೆ, ನಮ್ಮ ರಾಜ್ಯದವರು ಆ ರೀತಿಯ ನೆರವನ್ನು ಪಡೆದಿಲ್ಲ. ಹುಡ್ಕೋ ಯೋಜನೆಯ ನೆರವಿನಲ್ಲೂ ಕೂಡ ತೀವ್ರಗತಿಯಿಂದ ಕೆಲಸ ನಡೆಯುತ್ತಿಲ್ಲ. ಇದಕ್ಕೆ ಹಿನ್ನೆಲೆ ಏನಿದೆಯೋ ನನಗೆ ಗೊತ್ತಿಲ್ಲ. ಕೆಲವು ಮನೆಗಳು ಅರ್ಧಕ್ಕೆ ನಿಂತುಬಿಟ್ಟಿವೆ. ಟ್ರಾನ್ಸಿಟ್ ಕಾಲೋನಿಗಳು ಹೊಸ ಕೊಳಚೆ ಪ್ರದೇಶಗಳಾಗುತ್ತಿವೆ. ಹುಬ್ಬಳ್ಳಿಯಲ್ಲಿ ಹರಿಜನರಿಗಾಗಿ ಒಂದು ಹೊಸ ಕಾಲೋನಿಯನ್ನು ಕಟ್ಟಿದ್ದಾರೆ. ಅಲ್ಲಿ ಕಳೆದ ಮೂರು ವರ್ಷಗಳಿಂದ ರಸ್ತೆಗಳಿಲ್ಲ, ಸೌಚಗೃಹಗಳಿಲ್ಲ. ಇದನ್ನು ನೋಡಿದರೆ ಸರ್ಕಾರದವರೇ ತಮ್ಮ ಹಣದ ಖರ್ಚಿನಿಂದ ಹೊಸ ಕೊಳಚೆ ಪ್ರದೇಶಗಳನ್ನು ನಿರ್ಮಿಸುತ್ತಿರುವರೇೂ ಎಂದೆನಿಸುತ್ತದೆ. ಆ ರೀತಿಯಾಗಬಾರದು. ಯೋಜನೆ ಪ್ರಕಾರ ಅವರಿಗೆ ನೀರು, ರಸ್ತೆ, ದೀಪ, ಶಾಲೆ ಮುಂತಾದ ಎಲ್ಲ ಅನುಕೂಲಗಳನ್ನೊಳಗೊಂಡ ಒಂದು ಹೊಸ ಕಾಲೋನಿ ನಿರ್ಮಾಣವಾಗಬೇಕು. ಆದರೆ, ಅದು ಆಗುತ್ತಾ ಇಲ್ಲ. ಮಾನ್ಯ ಸಚಿವರು ಮತ್ತು ಸಂಬಂಧಪಟ್ಟ ಅಧಿಕಾರಿಗಳು ಆ ಹರಿಜನ ಕಾಲೋನಿಗೆ ಭೇಟಿ ಕೊಟ್ಟು ನೋಡಬೇಕು. ಇನ್ನೊಂದು ಕಡೆ ಟೌನ್ ಇಂಪ್ರೂವ್ಮೆಂಟ್ ಬೋರ್ಡಿನವರು ಸುಮಾರು ಅರವತ್ತು ಸಾವಿರ ರೂಪಾಯಿಗಳನ್ನು ರಸ್ತೆ ನಿರ್ಮಾಣಕ್ಕಾಗಿ ಖರ್ಚು ಮಾಡಿದ್ದಾರೆ. ಇಂದು ಆ ರಸ್ತೆಯಲ್ಲಿ ಕೆಂಪು ಮಣ್ಣೂ ಸಹ ಇಲ್ಲ. ಇದನ್ನು ಮಾನ್ಯ ಸಚಿವರು ಖುದ್ದಾಗಿ ಬಂದು ನೋಡಿದ್ದಾರೆ. ಅಧಿಕಾರಿಗಳನ್ನು ಕೇಳಿದರೆ ರೈಲ್ವೆಯವರಿಗೆ ಸೈಟು ಕೊಡುತ್ತಿದ್ದೇವೆಂದು ಹೇಳುತ್ತಾರೆ. ರಸ್ತೆಯಲ್ಲಿ ಒಳಚರಂಡಿ ವ್ಯವಸ್ಥೆಯಿಲ್ಲ, ಸುಮಾರು ೬೦,೦೦೦ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಕೊಳಚೆ ನಿರ್ಮೂಲನಕ್ಕಾಗಿ ಖರ್ಚುಮಾಡತಕ್ಕ ಹಣ ಅಪವ್ಯಯವಾಗುತ್ತಿದೆ. ಇದರ ಬಗ್ಗೆ ನನ್ನ ಒಂದು ಸಲಹೆ ಏನೆಂದರೆ, ಕಾನೂನುಬದ್ಧವಾಗಿ ಹೊಸ ಕೊಳಚೆ ಪ್ರದೇಶಗಳನ್ನು ಬರದಂತೆ ನೋಡಿಕೊಳ್ಳುವುದು , ಕೇಂದ್ರದಿಂದ ಹೆಚ್ಚು ಹಣವನ್ನು ಪಡೆಯತಕ್ಕಂಥದ್ದು ಮತ್ತು ಇವುಗಳ ಬಗ್ಗೆ ಶಾಸಕರನ್ನೊಳಗೊಂಡ ಒಂದು ಸಮಿತಿಯನ್ನು ನೇಮಕ ಮಾಡುವುದು ಒಳ್ಳೆಯದು. ಕೊಳಚೆ ನಿರ್ಮೂಲನ ಕೆಲಸವನ್ನು ಬರೀ ಅಧಿಕಾರಿಗಳಿಗೆ ಕೊಟ್ಟರೆ ಆಗುವುದಿಲ್ಲ. ಅವರು ಬರೀ ಟೆಂಡರ್ ಕರೆಯುತ್ತಾರೆ, ಲೋಕೋಪಯೋಗಿ ಕಂಟ್ರಾಕ್ಟ್ ಆದಹಾಗೆ ಆಗುತ್ತದೆ. ಸಮಿತಿಯಲ್ಲಿ ಶಾಸಕರನ್ನು ಹಾಕಿ ಸರಿಯಾದ ರೀತಿಯಲ್ಲಿ ನಕಾಶೆ ತಯಾರಿಸುವುದು, ಮೇಲ್ವಿಚಾರಣೆ ಮಾಡುವುದು, ಕಾಲಕ್ಕೆ ಸರಿಯಾಗಿ ಕಾರ್ಯಗತ ಗೊಳಿಸುವುದು ಇವುಗಳನೆಲ್ಲಾ ಪ್ರತಿಹಂತದಲ್ಲಿಯೂ ನೋಡಿಕೊಳ್ಳುವಂತಹ ಅವಕಾಶ ಇಬೇಕೆಂದು ಹೇಳುತ್ತೇನೆ. ಹೊಸ ಕೊಳಚೆ ಪ್ರದೇಶಗಳು ನಿರ್ಮಾಣವಾಗದಂತೆ, ಮತ್ತು ಹಾಲಿ ಇರತಕ್ಕಂಥ ಕೊಳಚೆ ಪ್ರದೇಶಗಳನ್ನು ಸರಿಯಾದ ರೀತಿಯಲ್ಲ ಅಭಿವೃದ್ಧಿಪಡಿಸುವ ಬಗ್ಗೆ ಸರ್ಕಾರ ನಿರ್ದಿಷ್ಟವಾದ ಕಾನೂನನ್ನು ಮತ್ತು ಆಜ್ಞೆಗಳನ್ನು ಬೇಗ ಹೊರಡಿಸಿ ಸೂಕ್ತಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರಕ್ಕೆ ಸೂಚನೆ ಕೊಟ್ಟು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಡಿ. ಜಯದೇವರಾಜ ಅರಸ್(ಚಾಮುಂಡಿ).—ಮಾನ್ಯ ಅಧ್ಯಕ್ಷರೇ, ನಗರ ಪ್ರದೇಶಗಳಲ್ಲಿ ಆಗಿಂದಾಗ್ಗೆ ಕೊಳಚೆ ಪ್ರದೇಶಗಳು ಉದ್ಭವವಾಗುವುದನ್ನು ತಡೆಯದೇಹೋದರೆ, ನಗರಗಳು ಮುಂದಕ್ಕೆ ಬಹಳ ಕಷ್ಟವನ್ನು ಎದುರಿಸಬೇಕಾಗುತ್ತದೆ. ಸರ್ಕಾರ ಈ ಬಗ್ಗೆ ಸೂಕ್ತವಾದಂಥ ಕಾನೂನನ್ನು ತಂದು ಹೊಸದಾಗಿ ಉದ್ಭವಾಗವ ಕೊಳಚೆ ಪ್ರದೇಶಗಳನ್ನು ತಡೆಗಟ್ಟುವುದು ಒಳ್ಳೆಯದು. ಕೊಳಚೆ ಪ್ರದೇಶಗಳು ಬೆಳೆಯಲು ಕೆಲವು ಏಜನ್ಸಿಗಳು ಮುಖ್ಯ ಕಾರಣವಾಗಿವೆ. ಖಾಸಗಿ ಜಾಗಗಳದಲ್ಲಿ ಗುಡಿಸಲುಗಳನ್ನು ಹಾಕುವುದಕ್ಕೆ ಪ್ರೇರೇಪಿಸಿ, ನಿಮ್ಮಗಳಿಗೆ ಜಾಗ ಕೊಡಿಸುತ್ತೇವೆಂದು ಗುಡಿಸಲುವಾಸಿಗಳಿಂದ ಪ್ರತಿ ತಿಂಗಳು ಹಣ ವಸೂಲು ಮಾಡಿಕೊಳ್ಳುತ್ತವೆ. ಇಂಥ ಏಜನ್ಸಿಗಳನ್ನಾಗಲೀ ಗುಡಿಸಲುಗಳನ್ನಾಗಲಿ ತಡೆಯತಕ್ಕಂಥ ಒಂದು ಶಕ್ತಿ ಕಾರ್ಪೊರೇಷನ್ನುಗಳಿಗೆ ಇಲ್ಲ. ಮೈಸೂರು ನಗರದಲ್ಲಿ ಒಂದು ಕೊಳಚೆ ಪ್ರದೇಶ ಇದೆ, ಸುಮಾರು ೪೦೦ ಮನೆಗಳಿವೆ. ಮತದಾರರ ಪಟ್ಟಿಯನ್ನು ಕೂಡ ಮಾಡಿ, ಅವರಿಂದ ಮತ ಪಡೆಯಲಾಗಿದೆ. ಕಾರ್ಪೊರೇಷನ್‌ನವರು, ತಾಲೂಕು ಬೋರ್ಡಿನವರು ನಾವು ಏನೂ ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತಾರೆ. ಅಲ್ಲಿ ವಾಸ ಮಾಡತಕ್ಕ ಗುಡಿಸಲುವಾಸಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯಾಗಲೀ, ರಸ್ತೆಗಳಾಗಲೀ ಯಾವುದು ಒದಗಿಸಿಲ್ಲ. ಕಾರ್ಪೊರೇಷನ್‌ನವರು ಕಂದಾಯ ವಗೈರೆ ಹಾಕಿ ಅಂದರೆ ನಮ್ಮ ಸರಹದ್ದಿಗೆ ಸೇರಿಲ್ಲವೆಂದು ಹೇಳುತ್ತಾರೆ. ಮೊನ್ನೆ ನೋಟಿಫಿಕೇಷನ್ ಹೊರಡಿಸಿದ್ದನ್ನು ವಾಪಸ್ಸು

ಪಡೆದಿರುವುದರಿಂದ ಇವತ್ತಿಗೂ ಹಾಗೆ ಉಳಿದಿದೆ. ಸುಮಾರು 1000 ಮತದಾರರು ಇದ್ದಾರೆ. ಅಲ್ಲಿ ಇವತ್ತಿಗೂ ಕೂಡ ಪೌರ ಸೌಲಭ್ಯಗಳನ್ನು ಒದಗಿಸಿಲ್ಲ. ಅವರು ಎತಕ್ಕೆ ಬಂದು ನೆಲಸಿದರು ಎನ್ನುವ ಪ್ರಶ್ನೆ ಬೇರೆ ? ಸರ್ಕಾರದವರು ಇದರ ಬಗ್ಗೆ ಸಮಗ್ರವಾದ ಒಂದು ಯೋಜನೆಯನ್ನು ಮಾಡಬೇಕೆಂದು ಸಲಹೆ ಕೊಡುತ್ತೇನೆ. ಭಾರತ ದೇಶದಲ್ಲಿ ದೊಡ್ಡ ದೊಡ್ಡ ನಗರಗಳಲ್ಲಿ ನಾನಾ ರೂಪದಲ್ಲಿ ಕೊಳಚೆ ಪ್ರದೇಶಗಳು ಬರುತ್ತವೆ. ಪ್ರಿವೆನ್‌ಷನ್ ಆಕ್ಟ್ ತಂದು ಮುಂದೆ ಕೊಳಚೆ ಪ್ರದೇಶಗಳು ಉದ್ಭವವಾಗದಂತೆ ನೋಡಿಕೊಳ್ಳುವುದು ಒಳ್ಳೆಯದು. ಇನ್ನು ಈ ದೇಶದಲ್ಲಿ 2½ ಲಕ್ಷ ಮನೆಗಳ ಅವಶ್ಯಕತೆ ಇದೆ ಎಂದು ಹೇಳಿದ್ದಾರೆ. ಮನೆಗಳ ಸಮಸ್ಯೆ ಎಷ್ಟು ಬೃಹದಾಕಾರವಾಗಿದೆಯೆಂಬುದನ್ನು ನಾವು ಯೋಚನೆ ಮಾಡಬೇಕಾಗುತ್ತದೆ ಈ ಸಮಸ್ಯೆ ಪರಿಹಾರವಾಗುವವರೆವಿಗೂ ಕೊಳಚೆ ಪ್ರದೇಶಗಳು ಬರುತ್ತವೆ. ಅದಕ್ಕೆ ಸರ್ಕಾರದವರು ನಗರಗಳ ಪಕ್ಕದಲ್ಲಿ ಒಂದು ಲಕ್ಷ ಮನೆಗಳನ್ನು ಕಟ್ಟುವಂತ ಯೋಜನೆಯನು ಹಾಕಿಕೊಂಡು ಹುಡ್ಕೋ ಸ್ಕೀಮಿನ ಮೂಲಕ ಆದಷ್ಟು ಬೇಗ ಮನೆಗಳನ್ನು ಕಟ್ಟುವ ವ್ಯವಸ್ಥೆ ಮಾಡಿಸಿ, ಗುಡಿಸಲುವಾಸಿಗಳಿಗೆ ಕೊಡುವ ವ್ಯವಸ್ಥೆ ಮಾಡುವುದು ಒಳ್ಳೆಯದೆಂದು ಹೇಳುತ್ತೇನೆ. ಈ ಕೆಲಸವನ್ನು ಲೋಕೋಪಯೋಗಿ ಇಲಾಖೆಗೆ ಮನೆಕಟ್ಟುವ ಕೆಲಸವನ್ನು ವಹಿಸಿದರೆ ವರ್ಷಾನುಗಟ್ಟಲೆ ತೆಗೆದುಕೊಳ್ಳುತ್ತಾರೆ. ಇದರ ಬಗ್ಗೆ ಒಂದು ಸಮಗ್ರವಾದ ಯೋಜನೆಯನ್ನು ಸರ್ಕಾರ ಜಾಗ್ರತೆ ಮಾಡಬೇಕೆಂದು ಹೇಳುತ್ತೇನೆ. ಹಾಲಿ ಇರತಕ್ಕ ಕೊಳಚೆ ಪ್ರದೇಶಗಳ ಅಭಿವೃದ್ಧಿಗೆ ಸರ್ಕಾರ ನೇರವಾಗಿ ಹಣದ ಸಹಾಯ ಮಾಡಿ, ಅವಳ ಪ್ರಾಮುಖ್ಯವಾಗಿ ಬೇಕಾದಂತ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಕೊಳಚೆ ಪ್ರದೇಶಗಳಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳದೇ ಇದ್ದರೆ ರೋಗರುಜಿನಗಳು ಬೆಳೆಯುವುದಕ್ಕೆ ಪ್ರಾರಂಭವಾಗುತ್ತವೆ. ಈ ರೋಗರುಜಿನಗಳು ಇಡೀ ನಗರದಲ್ಲಿ ಹಬ್ಬಿಕೊಳ್ಳುವ ಸಂಭವ ಉಂಟು. ಅದಕ್ಕೋಸ್ಕರ ಮಾನ್ಯ ಬೊಮ್ಮಾಯಿಯವರು ಹೇಳಿದಹಾಗೆ ಶಾಸಕರನ್ನೊಳಗೊಂಡಂಥ ಒಂದು ಸಮಿತಿಯನ್ನು ರಚನೆ ಮಾಡಿ ನಗರ ಪ್ರದೇಶಗಳಲ್ಲಿರತಕ್ಕ ಕೊಳಚೆ ಪ್ರದೇಶಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಮತ್ತು ಹೊಸದಾಗಿ ಬರತಕ್ಕ ಕೊಳಚೆ ಪ್ರದೇಶಗಳನ್ನು ತಡೆಗಟ್ಟುವುದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ANNOUNCEMENT

MR. SPEAKER.—The Business Advisory Committee at a meeting held yesterday (27-6-1980) have recommended that the General discussion on the Budget may be continued on Monday, Tuesday and Wednesday *i.e.*, 30th June, 1st and 2nd July, 1980. The Minister for Finance may reply to the debate on the morning of Thursday, the 3rd July, 1980.

The Committee have also recommended that there may be two sittings on Tuesday, Wednesday and Thursday. The voting of Demands for Grants may commence from the after-noon of Thursday, the 3rd July, 1980.

The Committee have further recommended that the House may hold two sittings on 3 or 4 days to complete some urgent Legislative Business which will be intimated to the members later.

SRI AZEEZ SAIT.—Sir, you promised the House that a particular date and time will be fixed for discussion on bus fares.

MR. SPEAKER.—I understand the anxiety of the hon. member. The Business Advisory Committee will be meeting again on Monday and that will take care of it.

SRI AZEEZ SAIT.—My question is that, it has come from your own mouth and it is a commitment.

MR. SPEAKER—The Business Advisory Committee will decide it on Monday.

SRI WILLIAM ST. JOHN SINCLAIR MARLEY (Nominated).—Mr. Speaker Sir, from this resolution, which is before this House, it would seem to me that the Hon. Member is wishing to perpetuate the forming of Slums in the City. If this is correct, I am afraid, I cannot support this resolution because it has been said often about slums that come up in cities, but have we applied our minds as to why these slums come up and as to what is the reason that we get slums in our cities? It is a very easy matter to say give them amenities. But then your Slums are never going to be removed from the cities. We have had the cases of slums that have arisen in Madras and the authorities have built temements for the people living in those slums, but what happened? The people do not move into the tenements, but they rent them out and put up other slums. What is the reason that these people do not occupy tenements that have been built for them? I think, one of the answers might be that you have built tenements that are far away from their work-spots. Most of these slums come up where people are seeking employment and when once they get employment, they want to live near their place of their employment You want to build tenements five miles away and expect slum dwellers to give up slum dwellings and go there. I would request the Government to give this problem very serious thought. There must be some particular reason why these slums come up in our cities and how best to stop them from coming up. There must be some way in which we can advise people whereby that they will be interested in living in tenements and not in these slums. By giving them roads, water, and light who is going to move? Would you move if you were in their place? If I were in their place, I would certainly not close. When I have every facility, why should I leve? So, is it the intention of the Hon. Member who has placed this resolution before this august House that we should perpetuate the slums? I would like an answers to t.is question, because if it is the intention of the Government to perpetuate slums, then let us not talk about slums. Why do we talk about slums if it is the policy that we should have slums in the city. Well, let us go ahead with them; let them come up wherever they do. But is that the policy that we want? We talk about Bangalore being a garden city and what do we see? Let some big building come up and there starts a slum and you cannot get rid of it. I am talking from my experience of the Tilak Nagar Slum, which is behind the MICO factory. I know

their problems; I have sympathies for those people. But is that all? Cannot we find a permanent solution to the slums that are coming up in our cities? I feel, Sir, that this is a serious matter and I do believe that the Government should get correct thinking people to really go into the matter in-depth and find out what are the problems and why they arise. One member said that we should have legislation. Is that going to be the answer? Tomorrow if you legislate an act that there should not be slums here, five thousend people will stand up and shout and it will create a law and order problem and then what happens? Let us try to get the core of the matter and find out the cause. I do believe that we must find out the cause of these slums coming up. Thank you Sir.

† ಶ್ರೀ ಜಿ. ಕೆ. ತೆಕ್ಕಿಡ್ (ಪರಸ್‌ಗಡ್).—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ರಾಂದೇವ್. ಅವರು ಏನು ಒಂದು ಖಾಸಗಿ ನಿರ್ಣಯವನ್ನು ಈ ಸಭೆಯಲ್ಲಿ ತಂದಿದ್ದಾರೆ ಅದನ್ನು ನಾನು ವಿರೋಧ ಮಾಡುತ್ತೇನೆ. ಆದರೆ ಅದರಲ್ಲಿ ಇರುವಂಥ ಒಂದು ತಾತ್ವಿಕತೆ ಏನಿದೆ ಅದು ಯೋಗ್ಯವಾದುದು. ಈಗಾಗಲೇ ಸರ್ಕಾರ ಈ ಕೊಳಚೆ ಈ ಪ್ರದೇಶಗಳನ್ನು ನಿರ್ಮೂಲನೆ ಮಾಡಲಿಕ್ಕೆ ಸಾಕಷ್ಟು ಕಾರ್ಯವನ್ನು ಮಾಡುತ್ತಿದೆ. ಕೊಳಚೆ ಪ್ರದೇಶಗಳ ನಿರ್ಮೂಲನೆ ಈ ದೇಶದಲ್ಲಿ ಆಗಬೇಕು ಎಂದು ಕೇಂದ್ರಸರ್ಕಾರ ತೆಗೆದುಕೊಂಡಂತಹ ಒಂದು ನಿರ್ಣಯದ ಬಗ್ಗೆ ರಾಜ್ಯ ಸರ್ಕಾರ ಅನುಷ್ಠಾನದಲ್ಲಿ ತರುವುದಕ್ಕೆ ಕೊಳಚೆ ಪ್ರದೇಶದ ನಿರ್ಮೂಲನಕ್ಕಾಗಿ ಒಂದು ಮಂಡಲಿಯನ್ನು ರಚಿಸಿತ್ತು. ಅದು ಈಗ ಅಸ್ತಿತ್ವದಲ್ಲಿರಲಿಕ್ಕಿಲ್ಲ. ಆದರೆ ಕೊಳಚೆ ಪ್ರದೇಶದ ನಿರ್ಮೂಲನದ ಸಲುವಾಗಿ ಕೇಂದ್ರಸರ್ಕಾರದವರು ಸಂಪೂರ್ಣವಾದ ಹೊಣೆಯನ್ನು ಹೊತ್ತು ಕೊಳಚೆ ಪ್ರದೇಶದಲ್ಲಿರುವಂತಹ ಜನರನ್ನು ಬೇರೆ ಕಡೆಗೆ ಸ್ಥಳಾಂತರಿಸಲಿಕ್ಕೆ ಯಾವ ತರಹ ಹಣದ ಸಹಾಯ ಬೇಕು, ನೂರಕ್ಕೆ ನೂರರಷ್ಟು ಹಣವನ್ನು ಕೇಂದ್ರಸರ್ಕಾರ ರಾಜ್ಯಸರ್ಕಾರಕ್ಕೆ ಕೊಡಲಿಕ್ಕೆ ಅಲ್ಲಿ ತನ್ನ ಅಭಿಪ್ರಾಯವನ್ನು ಈಗಾಗಲೇ ವ್ಯಕ್ತಪಡಿಸಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಮಾನ್ಯ ಸದಸ್ಯರಾದ ರಾಮದೇವ್ ಅವರು ತಂದಿರುವಂತಹ ಈ ನಿರ್ಣಯದಿಂದ ಹೊಸದಾಗಿ ಏನಾದರೂ ಮಾಡಬೇಕು ಅನ್ನುವಂತಾದ್ದು ಏನೂ ಇಲ್ಲ. ಸರ್ಕಾರ ತೆಗೆದುಕೊಂಡಂತಹ ಯೋಗ್ಯವಾದ ನಿರ್ಣಯ ಏನಿದೆ ಆ ನಿರ್ಣಯಕ್ಕೆ ಹೆಚ್ಚಿನ ಪುಷ್ಟೀಕರಿಸುತ್ತದೆ. ಇವೊತ್ತು ಬೆಂಗಳೂರಿನಂತಹ ದೊಡ್ಡ ದೊಡ್ಡ ನಗರದಲ್ಲಿ ಅನೇಕ ಕೊಳಚೆ ಪ್ರದೇಶಗಳು ನಿರ್ಮಾಣವಾಗುತ್ತಿವೆ. ಕೇವಲ ಬೆಂಗಳೂರು ನಗರದಲ್ಲಿ ಅಷ್ಟೇ ಅಲ್ಲ ಇವೊತ್ತು ಎಲ್ಲೆಲ್ಲಿ ಕಾರ್ಪೊರೇಷನ್‌ಗಳು ಆಗಿವೆ ಮೈಸೂರು, ಮಂಗಳೂರು, ಹುಬ್ಬಳಿ ಧಾರವಾಡ, ಬೆಳಗಾವಿ ಕಾರ್ಪೊರೇಷನ್ ಏರಿಯಾಗಳಲ್ಲಿ ಅನೇಕ ಕೊಳಚೆ ಪ್ರದೇಶಗಳು ನಿರ್ಮಾಣವಾಗಿವೆ. ಅನೇಕ ಕೊಳಚೆ ಪ್ರದೇಶಗಳು ನಿರ್ಮಾಣವಾದದ್ದನ್ನು ಮಾನ್ಯ ನಗರಸಭೆ ಮಂತ್ರಿಗಳಾಗಿರುವಂತಹ ಶ್ರೀಮಾನ್ ಧರ್ಮಸಿಂಗ್ ರವರನ್ನು ಕರೆದುಕೊಂಡು ಹೋಗಿ ತೋರಿಸಿದ್ದೇನೆ. ಬೆಳಗಾಂ ನಗರದಲ್ಲಿರುವ ಕಸಾಯಿ ಕಾನೆಯಲ್ಲಿರುವಂತಹ ಕೊಳಚೆ ಪ್ರದೇಶವನ್ನು ತಾವು ನೋಡುವುದಾದರೆ ಅಲ್ಲಿ ನಾಯಿ, ನರಿಗಳು ಹಾಗೂ ಹಂದಿಗಳು ಅಲ್ಲಿ ಓಡಾಡತಕ್ಕಂತಹ ಪರಿಸ್ಥಿತಿ ಇದೆ. ಇಂತಹ ಒಂದು ಕೆಟ್ಟ ಪರಿಸ್ಥಿತಿ ಅಲ್ಲಿ ನಿರ್ಮಾಣವಾಗಿದೆ. ಇದನ್ನು ಬಹಳ ತೀವ್ರತರವಾದ ರೀತಿಯಲ್ಲಿ ಆ ಕೊಳಚೆ ಪ್ರದೇಶದಲ್ಲಿರತಕ್ಕಂತಹ ನಿವಾಸಿಗಳು ನೆಮ್ಮದಿಯಾಗಿ ಇರುವಂತಹ ಒಂದು ಸ್ಥಳವನ್ನು ಬಿಟ್ಟುಕೊಡಲಿಕ್ಕೆ, ಅಲ್ಲಿ ಎಲ್ಲ ಸೌಕರ್ಯಗಳನ್ನು ಒದಗಿಸಿಕೊಡುವುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕು. ಒಳ್ಳೆಯ ಸ್ಥಳದಲ್ಲಿ ಅವರು ಚಪ್ಪರ ಹಾಕಿಕೊಂಡರೂ ಅವರಿಗೆ ಬೇಕಾದ ಕುಡಿಯುವ ನೀರಿನ ವ್ಯವಸ್ಥೆಯನ್ನು ಸರ್ಕಾರ ಒದಗಿಸಬೇಕು. ಅಲ್ಲಿ ಕೊಳಚೆ ನೀರಿನಲ್ಲೇ ಅಡಿಗೆ ಮಾಡಿಕೊಂಡು ಅದೇ ನೀರನ್ನು ಕುಡಿದು ಜೀವನ ಮಾಡುತ್ತಿದ್ದಾರೆ. ಇದನ್ನು ದಯಮಾಡಿ ತಪ್ಪಿಸಬೇಕು. ಅವರಿಗೆ ಒಳ್ಳೆಯ ಕುಡಿಯುವ ನೀರನ್ನು ಕೊಟ್ಟು ಇಂತಹ ಈ ಪ್ರದೇಶಗಳು ಮುಂದೆ ಆಗದಂತೆ ತೀವ್ರ ರೀತಿಯಲ್ಲಿ ನಿರ್ಮೂಲನ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕೆಂದು ಹೇಳುತ್ತಿದ್ದೇನೆ. ಅವರಿಂದ ಓಟು ತೆಗೆದುಕೊಂಡಂತಹ ನಾವುಗಳು ಒಳ್ಳೊಳ್ಳೆ ಸುವಾಸನೆಯ

---

† Indicates that remarks or speeches have not been revised by the member concerned,

ಸ್ಥಳದಲ್ಲಿದ್ದುಕೊಂಡು, ದೊಡ್ಡ ದೊಡ್ಡ ಮಹಲುಗಳನ್ನು ದೊಡ್ಡ ದೊಡ್ಡ ನಗರಗಳಲ್ಲಿ ಕಟ್ಟಿಸಿಕೊಂಡಿದ್ದಾರೆ. ಆದರೆ ಆ ಜನರನ್ನು ನಾವು ಬೇರೆ ಕಡೆ ಇಡುವುದು ಸರಿಯಾಗಲಿಕ್ಕಿಲ್ಲ. ಈ ರೀತಿಯ ಅಸಮಾನತೆಯನ್ನು ತೋರಿಸಬಾರದು. ಈಗಾಗಲೇ ನಗರ ಸಭೆಯವರು ಅವರಿಗಾಗಿ ಇವತ್ತು ಶೇಕಡ ಇಂತಿಷ್ಟು ಖರ್ಚು ಮಾಡುತ್ತಿದ್ದಾರೆ. ನಾನು ಒಂದು ಮಾತನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಅದೇನೆಂದರೆ ಕೊಳಚೆ ಪ್ರದೇಶ ನಿರ್ಮೂಲನೆ ಮಾಡುವುದು ಒಂದು ಕಡೆಯಾದರೆ ಮತ್ತೊಂದು ಕಡೆಯಿಂದ ಕೊಳಚೆ ಪ್ರದೇಶಗಳನ್ನು ನಿರ್ಮಾಣ ಮಾಡತಕ್ಕಂತಹದ್ದರ ಬಗ್ಗೆ ಕೆಲವೇ ಜನರು ಪ್ರೋತ್ಸಾಹ ಕೊಟ್ಟು ಮಾಡಿಸುತ್ತಿದ್ದಾರೆ. ಅದನ್ನು ಬಂದ್ ಮಾಡಬೇಕು. ಅದು ಹೇಗೆಂದರೆ ಇವತ್ತು ಯಾರಾದರೂ ಅನಧಿಕೃತವಾಗಿ ಗುಡಿಸಲುಗಳನ್ನು ಹಾಕಿಕೊಂಡರೆ ಅವುಗಳನ್ನು ಕೂಡಲೇ ತೆಗೆಸಬೇಕು. ಉದಾಹರಣೆಗೆ ಹೇಳುವುದಾದರೆ, ನಮ್ಮ ಬೆಳಗಾಂನಲ್ಲಿ ರೈಲ್ವೇ ಲೈನಿನ ಕೆಳಗೆ ಒಂದು ಹೊಲಸು ಕೆರೆ ಇದೆ. ಅಲ್ಲಿ ಎಲ್ಲ ತರಹದ ಹುಳುಗಳು, ಕಸಕಡ್ಡಿಗಳೂ ಇರುತ್ತವೆ. ಅಲ್ಲಿ ಚಪ್ಪರಗಳನ್ನು ಹಾಕಿಕೊಂಡಿದ್ದಾರೆ, ಅದೇ ನೀರಿನಲ್ಲಿ ಈಜಾಡುತ್ತಾರೆ. ಅದೇ ನೀರಿನ್ನು ಅಡಿಗೆಗಾಗಿ ಉಪಯೋಗ ಮಾಡುತ್ತಿದ್ದಾರೆ. ಆದ್ದರಿಂದ ಈ ಬಗ್ಗೆ ನನ್ನ ಸಲಹೆ ಏನೆಂದರೆ, ಇಂತಹ ಗುಡಿಸಲುಗಳು ಅನಧಿಕೃತವಾಗಿ ನಿರ್ಮಾಣ ಮಾಡುವುದಕ್ಕೆ ಪೂರ್ವಭಾವಿಯಾಗಿ ನಗರ ಸಭೆಯ ಅಧಿಕಾರಿಗಳು ಈ ಕಡೆ ಲಕ್ಷ ವಹಿಸಬೇಕು.

[ಶ್ರೀ ಎಚ್. ಟಿ. ಕೃಷ್ಣಪ್ಪನವರು ಸಭಾಧ್ಯಕ್ಷಸ್ಥಾನವನ್ನಲಂಕರಿಸಿದರು]

† C. M. ARMUGHAM.—The resolution before the House reads thus:

> "That this Assembly recommends to Government to provide all essential civic amenities to the people residing in the slum arees of Bangalore City since several years."

But now, I could see, the hon. Member, of course is referring to something about Belgaum Has it got any relevance to the resolution wich is before us? I know that slum is a slum but the resolution speaks about slums in Bangalore only. We are all landed in the slum only. If referances about the slums in other places are allowed, then it will widen the scope of the discussion. We have to confine ourselves to the slums in Bangalore because the Hon. Minister will be in a position to give reply or assurance to the House about the slums in Bangalore only. It will not be possible for the Hon. Minister to generalise this issue and give an assurance about the slums which are in existence all over the State. Therefore, I would submit whether we could discuss the general issue of all the slums or confine ourselves to the slums in Bangalore. Infact, 3rd/4th of Karnataka is full of slums; 80% of the land are being covered by slums. If the Chair allows the hon. Member to mention about Belgaum, then, the scope of the discussion will be widened. Anyway, I leave it to the Chair to give a ruling.

ಶ್ರೀ ಜಿ.ಕೆ. ತೆಕ್ಕೇಡ್.—ನನ್ನ ಮಾನ್ಯ ಮಿತ್ರರಾಗಿರುವಂತಹ ಶ್ರೀಮಾನ್ ಆರ್ಮುಗಂರವರು ಈ ಪ್ರಶ್ನೆ ಬೆಂಗಳೂರು ನಗರಕ್ಕೆ ಸೀಮಿತವಾಗಿದೆ ಎನ್ನುವ ಅಭಿಪ್ರಾಯವನ್ನು ಕೊಟ್ಟರು. ಅದು ಸರಿಯಲ್ಲ. ಈ ವಿಚಾರದ ಬಗ್ಗೆ ಮಾತನಾಡುವಾಗ ಉದಾಹರಣೆಯಾಗಿ ಈ ರಾಜ್ಯದಲ್ಲಿರುವ ಎಲ್ಲ ಕೊಳಚೆ ಪ್ರದೇಶದಲ್ಲಿರುವ ಸಮಸ್ಯೆಗಳನ್ನೂ ಹೇಳಬೇಕಾಗುತ್ತದೆ.

ಛೇರ್ಮನ್.—ಅದು ಅವರ ಅಭಿಪ್ರಾಯ. ನೀವು ಏನು ಹೇಳಬೇಕೆಂದಿದ್ದೀರೊ ಅದನ್ನು ಹೇಳಿ.

ಶ್ರೀ ಜಿ.ಕೆ. ತೆಕ್ಕೇಡ್.—ಈ ದೇಶದಲ್ಲಿರತಕ್ಕಂತಹ ಎಲ್ಲ ನಾಗರೀಕನಿಗೂ ಹಾಗೂ ಶಾಸಕರಾದ ನಮ್ಮಂತಹವರಿಗೂ ಈ ದೇಶದಲ್ಲಿರತಕ್ಕಂತಹ ಸಮಸ್ಯೆಗಳ ಬಗ್ಗೆ ಯಾವ ರೀತಿ ಬೇಕಾದರೂ ಮಾತನಾಡುವಂತಹ ಹಕ್ಕು ಇದೆ. ಆದರೆ ನಾನು ಉದಾಹರಣೆಯಾಗಿ ಕೊಟ್ಟು ಕೊಳಚೆ ಪ್ರದೇಶದಲ್ಲಿರುವಂತಹ ಜನರ ಸ್ಥಿತಿಗತಿಗಳು ಯಾವ ರೀತಿ, ಎಷ್ಟೊಂದು ಕೆಟ್ಟದ್ದಾಗಿದೆ ಎನ್ನುವುದನ್ನು ನಾನು ಹೇಳುತ್ತಿದ್ದೆ. ಅದೇ ರೀತಿ ಬೆಂಗಳೂರು ನಗರದಲ್ಲಿರುವಂತಹ ಕೊಳಚೆ ಪ್ರದೇಶದಲ್ಲಿರುವಂತಹ ಜನರ ಸ್ಥಿತಿಗತಿಗಳು ಅಷ್ಟೊಂದು ಕೆಟ್ಟದಾಗಿದ್ದಾಗ್ಯೂ ಈ ಕೊಳಚೆ ಪ್ರದೇಶವನ್ನು ನಿರ್ಮೂಲನ ಮಾಡುವಂತಹ ಮಾತು ಏನು ಇದೆ, ಅದು ಹಾಗೆಯೇ ಉಳಿದಿದೆ. ಈ ಕೊಳಚೆ ಪ್ರದೇಶಗಳು ನಿರ್ಮೂಲನವಾಗಲೇಬೇಕು. ಈ ಬಗ್ಗೆ ನಾನು ನನಗೆ ತಿಳಿದ ಮಟ್ಟಿಗೆ ಇಂತಹ ಕೊಳಚೆ ಪ್ರದೇಶಗಳನ್ನು ನೋಡಿದ್ದೇನೆ. ಪ್ರತ್ಯಕ್ಷವಾಗಿ ನೋಡಿದ್ದೇನೆ. ಅಲ್ಲಿ ಓಡಾಡಿದ್ದೇನೆ. ಆದ್ದರಿಂದ ಕೊಳಚೆ ಪ್ರದೇಶದಲ್ಲಿರುವಂತಹ ಜನತೆಯ ಸ್ಥಿತಿಗಳ ಬಗ್ಗೆ ಹೇಳುವಾಗ ಬೆಳಗಾಂನ ಉದಾಹರಣೆಯನ್ನು ಈ ಸಭೆಯಲ್ಲಿ ಕೊಟ್ಟಿದ್ದೇನೆ; ಎಂಬುದಾಗಿ ಮಾನ್ಯ ಸದಸ್ಯರಿಗೆ ನಾನು ನಮ್ರ ಪೂರ್ವಕವಾಗಿ ಸೂಚನೆ ಮಾಡುತ್ತಿದ್ದೇನೆ. ನಾವು ಬೆಳಗಾಂನಿಂದ ಬೆಂಗಳೂರಿಗೆ ರೈಲಿನಲ್ಲಿ ಬರುವಾಗ ಪ್ರಪ್ರಥಮವಾಗಿ ಕಾಣುವುದು ಕೊಳಚೆ ಪ್ರದೇಶ. ಆ ಕೊಳಚೆ ಪ್ರದೇಶಗಳಲ್ಲಿರುವಂತಹ ಜನರ ಕಷ್ಟಗಳನ್ನು ನೋಡುವುದಕ್ಕೆ ಸಾಧ್ಯವಿಲ್ಲ. ಕೊಳಚೆ ಪ್ರದೇಶಗಳಲ್ಲಿರುವ ಜನ ಸ್ಥಿತಿಗಳನ್ನು ಕಣ್ಣಿನಿಂದ, ಹಾಗೂ ಕಿವಿಯಿಂದ ಕೇಳುವುದಕ್ಕೆ ಸಾಧ್ಯವಿಲ್ಲ. ಮಾತನಾಡುವುದಕ್ಕೆ ಸಾಧ್ಯ. ಇಂತಹ ಒಂದು ಸುಂದರವಾದ ಬೆಂಗಳೂರು ನಗರದಲ್ಲಿ ಇರುವಂತಹ ಈ ಒಂದು ಕೊಳಚೆ ಪ್ರದೇಶಗಳನ್ನು ನಿರ್ಮೂಲನ ಮಾಡುವುದಕ್ಕಾಗಿ ಅಷ್ಟೊಂದು ಹಣವನ್ನು ಸರ್ಕಾರ ಖರ್ಚು ಮಾಡಿ ಇದನ್ನು ಸಂಪೂರ್ಣವಾಗಿ ನಿರ್ಮೂಲ ಮಾಡಬೇಕು. ಇಲ್ಲದೆ ಕೇವಲ ಬೆಂಗಳೂರು ನಗರವನ್ನು ನಾವು ಹೊರಗಡೆ ಹೋದಾಗ ಹೇಳುತ್ತೇನೆ. ಅದೇನೆಂದರೆ, ಬೆಂಗಳೂರು ನಗರ ಏರ್‌ಕಂಡೀಷನ್ಡ್ ಸಿಟಿ. ಉತ್ಕೃಷ್ಟ ನಗರ ಸುವಾಸನೆಯಿಂದ ಕೂಡಿರುವಂತಹ ನಗರ, ಹೂದೋಟಗಳಿಂದ ಕೂಡಿರುವಂತಹ ನಗರ, ಅಂತಹ ನಗರ ಇಂತಹ ನಗರ ಎಂಬುದಾಗಿ ವರ್ಣನೆ ಮಾಡುತ್ತೇವೆ. ಆದರೆ ಇಲ್ಲಿ ಇರತಕ್ಕಂತಹ ಕೊಳಚೆ ಪ್ರದೇಶಗಳನ್ನು ನಿರ್ಮೂಲ ಮಾಡುವುದಕ್ಕೆ ಅಧಿಕಾರಿಗಳು ಹೆಚ್ಚು ಗಮನವನ್ನು ಹರಿಸಲಿಕ್ಕೆ ಬೇಕು. ಈ ದೃಷ್ಟಿಯಿಂದ ಸರ್ಕಾರದವರು ಆದಷ್ಟು ತೀವ್ರ ರೀತಿಯಲ್ಲಿ ಕ್ರಮಗಳನ್ನು ತೆಗೆದುಕೊಂಡಿದ್ದಾರೆ ಈ ವಿಷಯ ನಾಮಕಾವಸ್ತೆ ಎಂಬುದಾಗಿ ಇಲ್ಲಿರತಕ್ಕಂತಹ ಮಾನ್ಯ ಇಂಜಿನೀಯರ್‌ವರಾಗಲಿ, ಅಥವಾ ಅಲ್ಲಿರತಕ್ಕಂತಹ ಆಡಳಿತಾಧಿಕಾರಿಗಳಾಗಲಿ ತಿಳಿದುಕೊಳ್ಳದೆ ಹೆಚ್ಚಿನ ಗಮನವನ್ನು ಈ ಕಡೆ ಹರಿಸಿ ಈ ಕೊಳಚೆ ಪ್ರದೇಶಗಳನ್ನು ನಿರ್ಮೂಲನ ಮಾಡುವಂತಹ ಕಾರ್ಯವನ್ನು ಸರ್ಕಾರ ಮಾಡಬೇಕು. ಮಾನ್ಯ ಮಂತ್ರಿಗಳು ಬೆಳಗಾಂಗೆ ಬಂದಾಗ ಇಂತಹ ಕೊಳಚೆ ಪ್ರದೇಶಗಳನ್ನು ನಾನು ಅವರಿಗೆ ತೋರಿಸಿದ್ದೇನೆ. ನಾವೂ ಕೂಡ ಮದ್ರಾಸ್, ಬೊಂಬಾಯಿ ಹಾಗೂ ಕಲ್ಕತ್ತ ನಗರಗಳನ್ನು ನೋಡಿದ್ದೇವೆ. ಕಲ್ಕತ್ತದಲ್ಲಿರುವಂತಹ ಕೊಳಚೆ ಪ್ರದೇಶಗಳು ಈ ರಾಷ್ಟ್ರದಲ್ಲಿ ಮತ್ತೆ ಇನ್ನೆಲ್ಲಿಯೂ ಇಲ್ಲ. ಅಷ್ಟೊಂದು ಕೊಳಚೆ ಪ್ರದೇಶಗಳು ಅಲ್ಲಿವೆ. ಅದನ್ನು ನಿರ್ಮೂಲನ ಮಾಡುವುದಕ್ಕೆ ಅಲ್ಲಿನ ಸರ್ಕಾರ ಯಾವ ರೀತಿಯ ಕ್ರಮ ತೆಗೆದುಕೊಂಡಿದೆ ಎಂಬುದನ್ನು ಹೇಳುವುದಕ್ಕೂ ಅಸಾಧ್ಯವಾದುದಾಗಿದೆ. ಅಲ್ಲಿ ಕಮ್ಯೂನಿಸ್ಟ್ ಸರ್ಕಾರ ಬಂದಿದೆ. ಬಡವರ ಸರ್ಕಾರ ಬಂದಿದೆ. ಬೆಂಗಳೂರು ನಗರದಲ್ಲಿರುವ ಕೊಳಚೆ ಪ್ರದೇಶಗಳನ್ನು ನಿರ್ಮೂಲನ ಮಾಡುವುದಕ್ಕೆ ನಮ್ಮ ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಇದರ ಜೊತೆಗೆ ಅಧಿಕಾರಿಗಳೂ ಕೂಡ ಅದನ್ನು ಕೂಲಂಕುಷವಾಗಿ ಅಭ್ಯಾಸಮಾಡಿ ಇದಕ್ಕೆ ತೀವ್ರ ರೀತಿಯಲ್ಲಿ ತಮ್ಮ ಗಮನವನ್ನು ಹರಿಸಿ ಬೆಂಗಳೂರು ನಗರಕ್ಕೆ ಒಂದು ಒಳ್ಳೆಯ ಹೆಸರು ಇದೆ, ಅಂದರೆ ಸುವಾಸನೆಯಿಂದ ಕೂಡಿರುವಂತಹ ನಗರ, ಸುಂದರ ನಗರ, ಹೂದೋಟಗಳಿಂದ ಕೂಡಿದಂತಹ ನಗರ ಎಂಬುದಾಗಿ ಹೆಸರು ಏನು ಇದೆ, ಆ ಹೆಸರು ಕೆಟ್ಟುಹೋಗದಂತೆ ನಮ್ಮ ಅಧಿಕಾರಿಗಳು ಹೆಚ್ಚು ನಿಗಾ ವಹಿಸಬೇಕು. ಈ ನಗರ ಒಂದು ಸುಂದರ ನಗರವಾಗಿರಬೇಕು ಎನ್ನುವ ದೃಷ್ಟಿಯಿಂದ ಇವತ್ತಿನ ದಿವಸ ನಮ್ಮ ಸರ್ಕಾರದಲ್ಲಿರತಕ್ಕಂತಹ ಎಲ್ಲ ದಕ್ಷ ಅಧಿಕಾರಿಗಳು ಮೇಲ್ಕಂಡಂತೆ ಮಾಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಸೂಚಿಸುತ್ತಿದ್ದೇನೆ.

ಇನ್ನು ಎರಡನೆಯದಾಗಿ, ಇವರ ವಾಸದ ಮನೆಗಳು ಆದಷ್ಟು ಚೆನ್ನಾಗಿ ಇರಬೇಕು. ಅವರಿಗೆ ಕೇವಲ ಒಂದೆರಡು ಮನೆಗಳನ್ನು ಕಟ್ಟಿಸಿ ಕೊಟ್ಟರೆ ಸಾಲದು. ಅವರಿಗೆ ಸರ್ಕಾರ ಕಟ್ಟಿಸಿ ಕೊಡುವ ಮನೆಗಳಿಗೆ ಒಂದು ಸಾವಿರ ರೂಪಾಯಿ ಹೆಚ್ಚು ಖರ್ಚು ತಗುಲಿದರೂ ಚಿಂತೆಯಿಲ್ಲ ಒಳ್ಳೆಯ ಮನೆಗಳನ್ನು ಕಟ್ಟಿಸಿಕೊಡಬೇಕು. ಅವರಿಗೆ ಕಟ್ಟಿಸಿಕೊಡತಕ್ಕ ಮನೆಗಳಲ್ಲಿ ಪ್ರತ್ಯೇಕವಾದ ಅಡಿಗೆ ಮನೆ ಇರಬೇಕು,

ನಡುಮನೆಯಿರಬೇಕು, ಬಚ್ಚಲು ಮನೆ ಇರಬೇಕು ಇವಕ್ಕೆಲ್ಲಾ ಸ್ವಲ್ಪ ಹಣ ಜಾಸ್ತಿ ಖರ್ಚಾದರೂ ಚಿಂತೆಯಿಲ್ಲ ಇವನ್ನೆಲ್ಲಾ ಕಟ್ಟಿಸಿಕೊಡಬೇಕೆಂದು ನಾನು ಸರ್ಕಾರದಲ್ಲಿ ಕೇಳಿಕೊಳ್ಳುತ್ತೇನೆ. ಜನ ಮದ್ರಾಸ್‌ನಲ್ಲಿ ಇಂತಹ ಮನೆಗಳನ್ನು ಕಟ್ಟಿದ್ದಾರೆ, ಮುಂಬೈನಲ್ಲಿ ಇಂತಹ ಮನೆಗಳನ್ನು ಕಟ್ಟಿದ್ದಾರೆ, ಬಂಗಾಳನಲ್ಲಿ ಇಂತಹ ಮಾದರಿಯಾದ ಮನೆಗಳನ್ನು ಕಟ್ಟಿದ್ದಾರೆ ಎನ್ನುವ ಬದಲು ಕರ್ನಾಟಕ ಸರ್ಕಾರದವರು, ಬೆಂಗಳೂರಿನಲ್ಲಿ, ಕರ್ನಾಟಕ ರಾಜ್ಯದಲ್ಲಿ ಇಂತಹ ಮನೆಗಳನ್ನು ಕಟ್ಟಿಕೊಟ್ಟಿದ್ದಾರೆಂದು ಮಾತನಾಡಿಕೊಳ್ಳುವಂತಾಗಬೇಕು. ಈ ಕೊಳಚೆ ಪ್ರದೇಶದಲ್ಲಿ ಜನರಿಗೆ ಒಂದು ಸುವ್ಯವಸ್ಥಿತ ಮನೆಗಳನ್ನು, ಒಳ್ಳೆಯ ನೀರಿನ ಸೌಕರ್ಯ ಇರುವಕಡೆ ಕಟ್ಟಿಸಿಕೊಟ್ಟಿದ್ದಾರೆಂದು ಬೇರೆಯವರು ಅದನ್ನು ನೋಡಿ ಅದೇ ಮಾರ್ಗವನ್ನು ಬೇರೆಯವರೂ ಅನುಸರಿಸಬೇಕು. ಈ ನಮ್ಮ ರಾಜ್ಯ ಇಂತಹ ಮಾದರೀ ಕಾರ್ಯಕ್ರಮಗಳನ್ನು ಕೈಗೊಂಡು ಅದನ್ನು ನಾಳೆ ಬೇರೆ ರಾಜ್ಯದವರೂ ಅಭ್ಯಾಸ ಮಾಡಿಕೊಂಡು ಹೋಗಬೇಕು. ನಮ್ಮ ಸರ್ಕಾರ ಈ ಬಗ್ಗೆ ಸೂಕ್ತವಾದ. ಯೋಗ್ಯವಾದ ಕಾರ್ಯವನ್ನು ಹಮ್ಮಿಕೊಂಡು ಆದಷ್ಟು ತೀವ್ರದಲ್ಲೇ ಈ ಕೊಳಚೆ ಪ್ರದೇಶದ ನಿವಾಸಿಗಳಿಗೆ ಎಲ್ಲಾ ಸೌಕರ್ಯಗಳನ್ನು ಒದಗಿಸಿಕೊಡುವಲ್ಲಿ ಒಳ್ಳೆಯ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಇದನ್ನು ಹೆಚ್ಚು ತೀವ್ರಗತಿಯಲ್ಲಿ ಲವಲವಿಕೆಯಿಂದ ಮಾಡಿ ಈ ಬಗ್ಗೆ ಕರ್ನಾಟಕ ರಾಜ್ಯ ಒಂದು ಆದರ್ಶಪ್ರಾಯವಾಗುವಂತೆ ಮಾಡಬೇಕು. ಬೆಂಗಳೂರು ನಗರದಲ್ಲಿಯೇ ಅಲ್ಲ, ರಾಜ್ಯದ ಯಾವುದೇ ಪ್ರದೇಶದಲ್ಲೂ ಕೂಡ ಇಂತಹ ಕೊಳಚೆ ಪ್ರದೇಶಗಳು ಇಲ್ಲ ಎಂದು ಹೇಳುವಂತೆ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ನಾನು ಅಧ್ಯಕ್ಷರ ಮುಖಾಂತರ ನಮ್ರವಾಗಿ ಸರ್ಕಾರಕ್ಕೆ ಸೂಚಿಸುತ್ತೇನೆ. ಸವದತ್ತಿಯ ಎಲ್ಲಮ್ಮನ ಗುಡ್ಡದ ವಿಷಯವನ್ನು ಹೇಳುವಾಗ, ಬೆಂಗಳೂರು ನಗರದಲ್ಲಿಯೂ ಸಹಾ, ಗ್ರಾಮ ಮಟ್ಟದಲ್ಲಿಯೂ ಸಹಾ ಕೊಳಚೆ ಪ್ರದೇಶಗಳು ಇವೆ ಎಂಬುದನ್ನು ಮರೆಯಬಾರದು. ಇವುಗಳು ಬೆಳೆಯದಂತೆ ಸೂಕ್ತ ಕ್ರಮಗಳನ್ನು ಸರ್ಕಾರ ಕೈಗೊಳ್ಳಬೇಕು. ಆ ಕೊಳಚೆ ಪ್ರದೇಶದ ಜನರ ಅಭಿವೃದ್ಧಿಗೆ ಹೆಚ್ಚು ಹೆಚ್ಚು ಹಣವನ್ನು ಸರ್ಕಾರ ಒದಗಿಸಿಕೊಡಬೇಕು. ಇವರುಗಳಲ್ಲಿ ಕಮ್ಮಾರರಿದ್ದಾರೆ, ಬಡಗಿಗಳಿದ್ದಾರೆ, ಬುಟ್ಟಿ ಹೆಣೆಯುತಕ್ಕ ಮೇದರು ಇದ್ದಾರೆ, ಬೇರೆ ಬೇರೆ ರೀತಿಯ ಕೈಕುಶಲ ಕಾರ್ಯಗಳನ್ನು ಮಾಡತಕ್ಕ ಜನರಿದ್ದಾರೆ. ಅವರುಗಳ ಅಭಿವೃದ್ಧಿಗಾಗಿ ಎಲ್ಲ ರೀತಿಯಿಂದಲೂ ಪ್ರೋತ್ಸಾಹ ಕೊಟ್ಟು, ಅವರಿಗೆ ಬೇಕಾಗುವ ಉಪಕರಣಗಳನ್ನು ಒದಗಿಸಿಕೊಟ್ಟು ಅವರು ತಮ್ಮ ಸ್ವಂತ ಉದ್ಯೋಗದಲ್ಲಿ ಮುಂದುವರೆಯುವುದಕ್ಕೆ ಬೇಕಾದ ಎಲ್ಲಾ ಸವಲತ್ತುಗಳನ್ನೂ ಸರ್ಕಾರ ಅವರಿಗೆ ಒದಗಿಸಿಕೊಡಬೇಕು; ಹಾಗೂ ಈ ಬಗ್ಗೆ ಸರ್ಕಾರದವರು ಹಾಕಿಕೊಂಡಿರುವ ಕಾರ್ಯಗಳು ಮುಂದುವರೆದುಕೊಂಡು ಹೋಗಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಶ್ರೀ ರಾಮದೇವ್ ಅವರು ಏನು ಒಂದು ಗೊತ್ತುವಳಿ ಸೂಚನೆಯನ್ನು ಎತ್ತಿದ್ದಾರೆ ಅದು ಅನವಶ್ಯಕವೆಂದು ನಾನು ಹೇಳುತ್ತೇನೆ. ಮಾನ್ಯ ಮಂತ್ರಿಗಳೂ ಸಹ ಎಲ್ಲಮ್ಮನ ಗುಡ್ಡಕ್ಕೆ ಬಂದು ನೋಡಿದ್ದಾರೆ. ಅಲ್ಲಿನ ನೀರಿನ ವ್ಯವಸ್ಥೆ ಸರಿಯಾಗಿದೆ, ಅಲ್ಲಿ ವಿದ್ಯುಚ್ಛಕ್ತಿಯ ದೀಪಗಳೂ ಸಹಾ ಬೆಳಗುತ್ತಿವೆ, ಅಲ್ಲಿನ ಕೊಳಚೆ ಪ್ರದೇಶ ನಿರ್ಮೂಲನ ಮಾಡಿ ಸ್ವಚ್ಛತೆಯ ಕಾರ್ಯವನ್ನು ಮಾಡಲಾಗಿದೆ ಎಲ್ಲಮ್ಮನ ಗುಡ್ಡದಲ್ಲಿ ಯಾವುದೇ ಕೊಳಚೆ ಪ್ರದೇಶ ಇಲ್ಲವೆಂದು ಧೈರ್ಯವಾಗಿ ಹೇಳುತ್ತೇನೆ. ಇಲ್ಲಿ ಸರ್ಕಾರ ಹೆಚ್ಚಿನ ಒಂದು ಮುತುವರ್ಜಿ ಕೊಟ್ಟು ಹೆಚ್ಚಿನ ಒಂದು ಕಾರ್ಯವನ್ನು ಮಾಡಿದೆ, ಇದಕ್ಕಾಗಿ ಮಾನ್ಯ ಮಂತ್ರಿಗಳಾದ ಶ್ರೀ ಧರ್ಮಸಿಂಗ್ ಅವರನ್ನೂ ಮತ್ತು ಸರ್ಕಾರವನ್ನು ಅಭಿನಂದಿಸಿ ರಾಜ್ಯದಲ್ಲಿ ಕೊಳಚೆ ನಿರ್ಮೂಲನದ ಕಾರ್ಯ ಇನ್ನೂ ತ್ವರಿತ ಗತಿಯಿಂದ ಸಾಗಲಿ ಎಂದು ಹೇಳಿ ನನಗೆ ಇಷ್ಟು ಮಾತನಾಡಲು ಅವಕಾಶವನ್ನು ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† SRI AZEEZ SAIT.—Mr. Speaker Sir, we have to consider the question of clearance of slums or improvement of slums and also we must know whether the slums are created on account of instigation by somebody or whether the slums are grown by themselves because of necessity ? These are three factors which we have to take into consideration. Of course, one of the factors which I revealed earlier have the blessings of political hands behind the creation of slums in various cities of our country.

SRI P. RAMDEV.—You were also in the previous Government...

Sri Azeez Sait – I have never created slums ಇಂದಿರಾಗಾಂಧಿ ಸ್ಲಮ್ ಇದೆ, ಸಂಜಯ್‌ಗಾಂಧಿ ಸ್ಲಮ್ ಇದೆ, ಆದರೆ ಅಜೀಜ್ ಸೇಠ್ ಸ್ಲಮ್ ಇಲ್ಲ. Creation of slums are leading to the growth of infection, unhygienic and unsocial elements and many of the slums have grown out of necessity, because people who can not get accommodation in the city have started living in the slums. One of the reasons is that people are urbanising themselves from rural parts. Today fastly people are moving towards urban areas. While talking about slums, Sri Takkad has said that there was no necessity for bringing this resolution by Sri P. Ramdev. Just if we look near Vidhana Soudha, we will see so many slums. We need not go far, but the slums are very near to the Secretariat. To stop the growing of slums the Government, i.e., the Ministry of Housing and Urban Development should take proper steps in this regard. They should take keen interest to see that the labour colonies are constructed by the factories. In and around the Bangalore City there are so many factories and therefore, they should see that proper houses are constructed for their labourers. The Government should utilise Municipalities, Housing Boards etc., for the construction of houses. We have been talking of Slum Boards, Slum Clearance Boards etc., I think by this time, a few crores of rupees have been spent by these boards for clearance of slums. But, actually they have not cleared slums. On the other hand, they have improved the slums and they have allowed the slums to come up on a large scale by politicians and allowed the people to put up their huts. Even in the Private lands they have allowed slums to come up.

Until the Government takes serious note in and see that multi-storeyed buildings are constructed to settle the slum-dwellers, you cannot solve this problem. They must avail the resources of the world-bank, the HUDCO and other private co-operative societies which have come up and which have taken up construction of houses, advancing loans to the officials and Class-IV employees. Until we work in these directions on a war-footing, the slums about which we have been debating a great deal, cannot be cleared. Slums have come up not only in Bangalore but also in towns, because they have promised to give them sites free of cost. We have got muncipalities and they will construct houses for poor people. We have been telling all these things and we have done nothing so far. We have to stop all these false promises to the people and we have to be honest and sincere. There are 600 slums in Bangalore alone. I have not seen the slum being got cleared. I have been a legislator for over 20 years and we have been talking about these things. What happened to the Housing Board? No houses have been constructed and some houses have been constructed by political decisions but the houses are

still vacant and nobody is in possession of the houses. We are thus lossing not only money, but valuable time, I need not say much about these things. Slum itself is a very interesting subject. We all have allowed slums today. I do not understand how long we can go on like this, permitting slums to increase. It is therefore urged that earnest efforts have to be made and political decisions have to be put an end to. We have to act in reality, taking into consideration the fact, requirement and the needs. In particular, once I had taken the Slum Board Chairman to one of the places in Mysore, who had a personal visit of the area. To my great dismay, out of six slums only two have been declared. But to make that declaration it took two years. Sir, this is the position. Only to notify this area as slum area, it took 2 years. The tendency of allowing slums to came up, creates lot of problems like electricity, under-ground drainage *etc.*, and the Corporations have extended their limits. By that process they have taken many villages, but they have not looked into their requirement, they have not thought of improving the villages. On the contrary they have allowed more slums to prosper and that is why we are suffering today. The Government should be very serious about this matter and without any hesitation they must accept the resolution of hon. member Sri P. Ramdev If Government merely speaks and says that everything is bad and this resolution is not necessary, it will be something astonishing. I request the hon'ble Minister to accept the resolution of Sri P. Ramdev and promise this House to put all efforts to rectify the defects and remove the slums instead of improving the slums. Mere improvement of slums will create more slums. If the Ministry makes mere inspections, giving false promises to the poor people as if we are the only protectors of millions of poor, it will be of no use. It is high time we realise that we have fooled the people already, and let us not further fool them. With this, I urge, that the Minister must be serious and see what best can be done to remove the slums not only in Bangalore, but also in Karnataka.

† ಶ್ರೀ ವಿ. ಎಲ್. ಶಿವಪ್ಪ (ತಿಪಟೂರು).—ಸನ್ಮಾನ್ಯ ಅಧ್ಯಕ್ಷರೇ ಈ ಒಂದು ಚರ್ಚೆಗೆ ವಿಷಯ ತಂದಿರತಕ್ಕಂಥ ಸನ್ಮಾನ್ಯ ರಾಮ್‌ದೇವ್‌ರವರಿಗೆ ಬೇರೆ ಯೋಚನೆ ಏನೇನೂ ಇಲ್ಲ. ಅವರು ಅವಶ್ಯಕ ವಾಗಿ ಸಾಮಾನ್ಯರ ಜನಜೀವನದ ಬಗ್ಗೆ ಕಾಳಜಿ ತೆಗೆದುಕೊಂಡು ಈ ವಿಷಯವನ್ನು ಚರ್ಚೆಗೆ ತೆಗೆದು ಕೊಂಡು ಬಂದಿರತಕ್ಕಂಥಾದ್ದು ಸ್ವಾಭಾವಿಕವಾಗಿಯೇ ಇರುತ್ತದೆ. ಹಾಗೆಯೇ ಶ್ರೀಮಾನ್ ಬೊಮ್ಮಾಯಿ ಯವರು ಹುಬ್ಬಳ್ಳಿಯಲ್ಲಿ ನೂರಾರು ಕೊಳಚೆ ಪ್ರದೇಶಗಳು ನಿರ್ಮಾಣವಾಗಿರುತ್ತವೆಂದೂ ಹೇಳುತ್ತಾ, ಮೊದಲು ಅರವತ್ತು ಕೊಳಚೇ ಪ್ರದೇಶಗಳು ಇದ್ದುದು ಈಗ ಜಾಸ್ತಿಯಾಗಿ ನೂರಾರು ಕೊಳಚೇ ಪ್ರದೇಶ ಗಳು ಆಗಿರುತ್ತವೆಂದರು. ಇದಕ್ಕೆ ಅಧಿಕಾರಿಗಳೂ ಕೂಡ ಕ್ರಮ ತೆಗೆದುಕೊಳ್ಳುವುದು ಬಹಳಷ್ಟು ಅವಶ್ಯಕತೆ ಇದೆ, ಎಂದೂ ಕೂಡ ಪ್ರಸ್ತಾಪ ಮಾಡಿದ್ದಾರೆ. ಕೊಳಚೆ ಪ್ರದೇಶಗಳ ನಿರ್ಮೂಲನ ಮಾಡಲು ಏನೇನು ಕಾನೂನುಗಳನ್ನು ಮಾಡಬೇಕೋ ಅವೆಲ್ಲವನ್ನೂ ಮಾಡಿರುತ್ತಾರೆ. ಆದರೂ ಕೂಡ ಅದನ್ನು ಜಾರಿ ಮಾಡತಕ್ಕಂಥ ಕಾಲದಲ್ಲಿ ಅದಕ್ಕೆ ವಿರುದ್ಧವಾಗಿ ನಡೆದುಕೊಳ್ಳತಕ್ಕಂಥ ಜನರೂ

ನಮ್ಮಲ್ಲಿಯೇ ಇದ್ದಾರೆ. ಅನೇಕ ವೇಳೆಯಲ್ಲಿ ನಾವು ಒಳ್ಳೆಯ ಕೆಲಸ ಮಾಡಿರುವುದೇನೆಂದರೆ ಮಾನಸ್ಸಿಗೆ ಕೋಪ ಬಂದಾಗ, ವಿರುದ್ಧವಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿ ವ್ಯವಹಾರಗಳನ್ನು ಮಾಡಬೇಕು ಎನ್ನುವ ಸ್ಥಿತಿಯಲ್ಲಿ ನಾವು ಆಲೋಚನೆ ಮಾಡುತ್ತೇವೆ. ಈ ರೀತಿಯಾಗಿ ಸ್ಲಮ್ಸ್ ಬೆಳೆಯಬೇಕಾದರೆ ಅಕ್ಕಪಕ್ಕದ ದೇಶದ ಜನರನ್ನು ಬರಮಾಡಿಕೊಂಡು ಓಟನ್ನು ಗಳಿಸುವ ಪ್ರಯತ್ನಗಳನ್ನು ಕೂಡ ಮಾಡಿರುತ್ತೇವೆ. ಕರ್ನಾಟಕ ಬಹಳ ಸುಂದರವಾದ ದೇಶ. ಅದರಲ್ಲಿ ಬೆಂಗಳೂರಂಥ ನಗರವನ್ನು ಇಡಿ ಹಿಂದೂಸ್ಥಾನದಲ್ಲಿಯೇ ನೋಡುವುದು ಬಹಳ ಅಪರೂಪ. ಇಂಥ ಒಂದು ನಗರದಲ್ಲಿ ಈವತ್ತಿಗೂ ಸಹಾ ಅಕ್ಕಪಕ್ಕದ ಬಡಜನತೆಗೆ ಹೆಚ್ಚಿನ ವ್ಯವಸ್ಥೆಯನ್ನು ಮಾಡಿಕೊಟ್ಟು ನಮ್ಮ ಕರ್ನಾಟಕದಲ್ಲಿ ಬಡತನವನ್ನು ಹೆಚ್ಚು ಮಾಡುತ್ತಿದ್ದೇವೆ. ಬಂದವರಿಗೆ ಅನುಕೂಲತೆಯನ್ನು ಕಲ್ಪಿಸಿಕೊಡುತ್ತಿರುವುದರಿಂದ ಬರುವವರೂ ಜಾಸ್ತಿಯಾಗುತ್ತಿದ್ದಾರೆ. ಅದಕ್ಕೆ ತಕ್ಕಂಥೆ ಕಾರ್ಪೋರೇಷನ್ ಕೌನ್ಸಿಲರ್‌ಗಳು ತಮ್ಮದೇ ಆದ ವ್ಯವಸ್ಥೆಯನ್ನು ಮಾಡಿಕೊಟ್ಟು ಚುನಾವಣೆಗಾಗಿ ಅವಕಾಶವಿರಲಿ ಎಂದು ಮಾಡಿಕೊಂಡಿರುತ್ತಾರೆ. ಅಧಿಕಾರಿಗಳು ಯಾವಾದರೂ ಕ್ರಮ ತೆಗೆದುಕೊಳ್ಳುವುದಕ್ಕೆ ಹೋದರೆ ಅದಕ್ಕೆ ಅವಕಾಶ ಕೊಡುವುದಿಲ್ಲ. ಅಧಿಕಾರಿಗಳೂ ಕೂಡ ತಮ್ಮ ಮನಸ್ಸನ್ನು ಪರಿವರ್ತನೆ ಮಾಡಿಕೊಳ್ಳಬೇಕು. ತಮ್ಮ ಜವಾಬ್ದಾರಿಯನ್ನು ಅರಿತು ಕೆಲಸ ಮಾಡಬೇಕು. ಸುಂದರವಾದ ಈ ದೇಶವನ್ನು ಹಾಗೆಯೇ ಉಳಿಸಿಕೊಳ್ಳುವುದಕ್ಕೆ ಪ್ರಯತ್ನಪಡಬೇಕು. ಅಧಿಕಾರಿಗಳು ಪರಿಪೂರ್ಣವಾಗಿ ಕೆಲಸ ಮಾಡುವುದಕ್ಕೆ ಅವಕಾಶವಿರಬೇಕು. ಕೊಳಚೆ ಪ್ರದೇಶಗಳು ಬೆಳೆಯದಂತೆ ಕಟ್ಟುನಿಟ್ಟಾದ ಕ್ರಮಗಳನ್ನು ಸರ್ಕಾರದವರು ತೆಗೆದುಕೊಳ್ಳಬೇಕು. ಆ ರೀತಿ ಮಾಡಿದ ವಿನಃ ಬರೀ ಭಾಷಣ ಮಾಡುವುದರಿಂದ ಯಾವ ಸುಧಾರಣೆಯನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಹಿಂದಿನ ಸರ್ಕಾರದ ಆಡಳಿತದಲ್ಲಿದ್ದಾಗ್ಯೂ ಸ್ಲಮ್ಸ್ ಕ್ಲಿಯರೆನ್ಸ್ ಬೋರ್ಡ್ ಎಂದು ಬೋರ್ಡನ್ನು ರಚಿಸಿ ಬೇಕಾದಷ್ಟು ಡೆವಲಪ್‌ಮೆಂಟ್ ಮಾಡಿರತಕ್ಕಂಥದ್ದನ್ನು ನಾವು ನೋಡಿದ್ದೇವೆ. ಅಧಿಕಾರಿವರ್ಗದವರು ಪ್ರಾಮಾಣಿಕವಾಗಿ ಕೆಲಸ ಮಾಡಬೇಕೆಂದು ಹೇಳುವಾಗ ಯಾವುದೋ ಕಡೆ ರಸ್ತೆಗಳನ್ನು ಮಾಡುವಾಗ ತಗ್ಗಿನ ಪ್ರದೇಶದಲ್ಲಿರತಕ್ಕಂಥ ರಸ್ತೆಯಲ್ಲಿ ನೀರು ನಿಂತು, ಅದಕ್ಕೆ ಸರ್ಕಾರದವರು ಖರ್ಚು ಮಾಡಿರತಕ್ಕಂಥದ್ದು ಬಹಳ ಅನ್ಯಾಯವೆಂದು ಟೀಕೆ ಮಾಡುವುದರಿಂದ ಯಾವ ಪ್ರಯೋಜನವೂ ಇಲ್ಲ. ಅಧಿಕಾರಿಗಳಷ್ಟೇ ಅಲ್ಲ ಜೊತೆಗೆ ಎಲ್ಲ ಸದಸ್ಯರೂ ಕೂಡ ತಮ್ಮ ಕರ್ತವ್ಯವನ್ನು ಅರಿತು ಸ್ಲಮ್ಸ್ ಡೆವಲಪ್‌ಮೆಂಟ್ ಬಗ್ಗೆ ಪ್ರಯತ್ನ ಮಾಡಿದರೆ ಒಳ್ಳೆಯದೆಂದು ಹೇಳಿ ಶ್ರೀ ರಾಮದೇವ್ ತಂದಿರತಕ್ಕಂಥ ಖಾಸಗಿ ಸದಸ್ಯರ ನಿರ್ಣಯಕ್ಕೆ ಬೆಂಬಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

SRI B. B. SAYANAK.—Sir, I strongly support the resolution moved by my hon. friend Sri P. Ramdev recommending to Government to provide all essential civic amenities to the people residing in the slum areas of Bangalore City since several years, Though this resolution pertains to Bangalore City, the discussion, according to me, is a general one The Slum Clearance Board has come into existence as long back as 1973. Since then, the number of slums are increasing day by day. As far as my knowledge goes, there are 306 slums in Bangalore. Why are these slums increasing? My learned friends were saying that people are coming from rural areas and hence the slums are increasing. But that is not the reason. The reason is that so many multi-storeyed buildings are coming up and the labour class people required for construction work are rushing from places like Kerala, Tamilnadu *etc.*, and that is why the slum areas are constantly increasing. The Corporation people have not taken necessary steps immediately to prevent extension of slum areas. They are so lethargic that during the construction of the huts, they will not go there. After 7/8 months, they will visit the place and

take steps to remove those huts. Then naturally there will be an agitation. They will organise Morchas and processions shouting slogans against the Government, So, I request the Government to see that the Corporation authorities in particular should take immediate steps and prevent further expansion of slums. I know one incident sir. Some Jain Swamiji had constructed one educational building and at that time there was no slum. After the construction of that school building, so many huts were erected around the building. The Swamiji assured the slum dwellers that he would contribute some amount, in case they construct houses. Therefore, I request the Government to take advantage of the offer of that Swamiji and do some good thing to the people, who are living nearby that area. The 'Slum Clearance' was one of the points of late Sri Sanjay Gandhi's Five Point Programme. In Delhi, late Sri Sanjay Gandhi removed all the slums and constructed some good buildings near by Jamuna river. People were against this scheme of Sri Sanjay Gandhi and that was one of the contributory reasons forthe failure of the Congress party in the election. In Bombay there are so many slum areas. For example, in Bandra slum area some Dadas are taking money from the villagers who are rushing to Bombay and give them places for construction of their huts. Such things are going on in all the cities, Sir there are 28 slums in my constituency. The Kasai Galli in Belgaum is one of the worst areas among them. The Hon. Minister for Housing and Urban Development, Sri Dharm Singh, had visited that place and witnessed the conditions of the people living there. The Government pleads that they are having adequate amount of money for this purpose. Why has not the Government taken any step to remove the slums in Belgaum for the last 22 years? The Slum Clearence Board came into existence eight years back. Have they removed atleast one slum area? Sir, in Belgaum a good number of huts are coming up around the Fort area. No action has been taken by the Government so far. In Belgaum, there were no slums at all except the Dombari Colony near Laxmi Tek Therefore, the Government must direct the Corporation authorities to take firm steps to remove these slums and also take steps to prevent its further expansion, With these few words, I conclude and thank the Chair for having given me an opportunity to speak.

† ಶ್ರೀ ಪಂಪಾಪತಿ (ದಾವಣಗೆರೆ).—ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರದ ಕೊಳಚೆ ಪ್ರದೇಶಗಳಲ್ಲಿ ಅನೇಕ ವರ್ಷಗಳಿಂದ ವಾಸವಾಗಿರತಕ್ಕ ಜನರಿಗೆ ಪೌರ ಸೌಲಭ್ಯಗಳನ್ನು ಒದಗಿಸಿಕೊಡಬೇಕೆಂಬ ಬಗ್ಗೆ ಮಾನ್ಯ ಸದಸ್ಯರಾದ ಶ್ರೀಮಾನ್ ಪಿ. ರಾಮದೇವ್‌ರವರು ಸದನದ ಮುಂದೆ ತಂದಿರತಕ್ಕ ನಿಲುವಳಿ ಸೂಚನೆಯನ್ನು ನಾನು ಬೆಂಬಲಿಸುತ್ತೇನೆ. ಈ ನಿಲುವಳಿ ಸೂಚನೆ ವಿಚಾರ ಕೇವಲ ಬೆಂಗಳೂರು ನಗರಕ್ಕೆ ಮಾತ್ರ ಸೀಮಿತವಾಗಿದೆ. ಆದರೆ ಕೊಳಚೆ ಪ್ರದೇಶಗಳು ರಾಜ್ಯದ ಎಲ್ಲ ನಗರಗಳಲ್ಲೂ ಬೆಳೆದಿವೆ, ಮತ್ತು ಬೆಳೆಯುತ್ತಿವೆ. ಅದೇ ರೀತಿಯಲ್ಲಿ ಬೆಳವಣಿಗೆಯಾಗುತ್ತಿರುವ ಈ ಕೊಳಚೆ ಪ್ರದೇಶಗಳನ್ನು

ತಡೆಗಟ್ಟಬೇಕೆಂಬ ಬಗ್ಗೆ ಕೂಡ ಹಲವಾರು ರೀತಿಯಲ್ಲಿ ಸರ್ಕಾರದಿಂದ ಪ್ರಯತ್ನಗಳು ನಡೆಯುತ್ತಿವೆ. ಆದರೂ ಇದು ಸಾಧ್ಯವಾಗುತ್ತಿಲ್ಲ. ಇದಕ್ಕೆ ಕಾರಣ ಹೊರಗಿನಿಂದ ಜನಗಳು ಹೆಚ್ಚು ಹೆಚ್ಚಾಗಿ ವಲಸೆ ಬರುತ್ತಿರುವುದು. ಹೀಗೆ ವಲಸೆ ಬಂದ ಜನಗಳಿಗೆ ತಕ್ಕ ವಸತಿ ಸೌಕರ್ಯ ಸಿಕ್ಕದೇ ಇರುವುದರಿಂದ ಅವರು ಎಲ್ಲಿ ಅಂದರೆ ಅಲ್ಲೇ ಗುಡಿಸಲುಗಳನ್ನು ಕಟ್ಟಿಕೊಂಡು ವಾಸ ಮಾಡಲು ಪ್ರಾರಂಭ ಮಾಡುತ್ತಾರೆ. ಇದರಿಂದಾಗಿ ಕೊಳಚೆ ಪ್ರದೇಶಗಳು ಹೆಚ್ಚು ಹೆಚ್ಚಾಗಿ ಉದ್ಭವವಾಗುವುದಕ್ಕೆ ಕಾರಣವಾಗಿದೆ.

ಮಾನ್ಯ ಅಧ್ಯಕ್ಷರೆ, ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ, ಈ ಕೊಳಚೆ ಪ್ರದೇಶಗಳನ್ನು ನಿರ್ಮೂಲನ ಮಾಡಲು, ಅಥವಾ ತಡೆಗಟ್ಟಲು ಈ ಸರ್ಕಾರಕ್ಕೇ ಅಲ್ಲ ಯಾವ ಸರ್ಕಾರ ಬಂದರೂ ಇದು ಸಾಧ್ಯವಾಗುವುದಿಲ್ಲ. ಬಡತನದಿಂದ ಬೇಸತ್ತ ಜನ ನಗರಗಳಿಗೆ ವಲಸೆ ಬರುವುದು ಸ್ವಾಭಾವಿಕವಾಗಿದೆ. ಈ ವಲಸೆ ಬರುವ ಜನಗಳಿಗೆ ವಸತಿ ಸೌಕರ್ಯ ಒದಗಿಸಬೇಕಾದ್ದು ಸರ್ಕಾರದ ಕರ್ತವ್ಯ. ಎಲ್ಲಿಯವರೆಗೆ ನಾವು ಬಡತನವನ್ನು ಹೋಗಲಾಡಿಸಲು ಪ್ರಯತ್ನ ಮಾಡುವುದಿಲ್ಲ ಅಲ್ಲಿಯವರೆಗೂ ಈ ಇಂಥ ಸಮಸ್ಯೆಗಳನ್ನು ನಾವು ನಿವಾರಿಸಲು ಸಾಧ್ಯವಿಲ್ಲ.

ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ರಾಜ್ಯದ ಯಾವುದೇ ನಗರ ಪ್ರದೇಶಗಳಲ್ಲಾಗಲಿ, ಆ ನಗರದ ನಾಲ್ಕೂ ಭಾಗಗಳಲ್ಲಿ ನಗರಸಭೆಯಿಂದಲೋ, ಅಥವಾ ಪೌರಸಭೆಯಿಂದಲೋ ಮನೆ ನಿವೇಶನಗಳನ್ನು ವಿಂಗಡಿಸಿ ಈ ರೀತಿ ವಲಸೆ ಬರತಕ್ಕ ಜನರಿಗೆ, ಮನೆ ನಿವೇಶನ ಇಲ್ಲದಿರತಕ್ಕ ಜನರಿಗೆ ಕೊಡುವ ವ್ಯವಸ್ಥೆ ಮಾಡಬೇಕು. ಈ ಕೆಲಸವನ್ನು ನಗರಸಭೆಗಳು ಅಥವಾ ಪೌರಸಭೆಗಳು ಎಲ್ಲಿಯವರೆಗೆ ಮಾಡುವುದಿಲ್ಲ ಅಲ್ಲಿಯವರೆಗೂ ಕೊಳಚೆ ಪ್ರದೇಶಗಳು ಉದ್ಭವವಾಗುವುದನ್ನು ತಡೆಗಟ್ಟುವುದಕ್ಕಾಗುವುದಿಲ್ಲ. ನಗರಸಭೆಗಳವರು ಹೊರಗಿನಿಂದ ವಲಸೆ ಬರತಕ್ಕ ಜನರಿಗೆ ಈ ರೀತಿ ನಿವೇಶನಗಳನ್ನು ನೀಡಿದರೆ ಅವರು ಗುಡಿಸಲುಗಳನ್ನು ಅಥವಾ ಮನೆಗಳನ್ನು ಕಟ್ಟಿಕೊಂಡರೂ ನೋಡಲು ಚೆನ್ನಾಗಿರುವಂತೆ ಸಾಲಾಗಿ ಕಟ್ಟಿಕೊಳ್ಳುತ್ತಾರೆ. ಈ ನೀತಿಯನ್ನು ತಾವು ಅನುಸರಿಸುವುದಾದರೆ ಇನ್ನು ಮುಂದೆ ಉದ್ಭವವಾಗಬಹುದಾದ ಕೊಳಚೆ ಪ್ರದೇಶಗಳನ್ನು ಸರ್ಕಾರದವರು ತಡೆಗಟ್ಟಲು ಸಹಾಯಕವಾಗುತ್ತದೆ. ತಮಗೆ ಒಂದು ಉದಾಹರಣೆ ಕೊಡುವುದಾದರೆ, ದಾವಣಗೆರೆಯಲ್ಲಿ ಕೊಳಚೆ ನಿರ್ಮೂಲನಾ ಮಂಡಲಿಯು ಅತಿ ಕಡಿಮೆ ಖರ್ಚಿನಲ್ಲಿ ಕೊಳಚೆ ಪ್ರದೇಶದ ಜನಗಳಿಗೆ ಅನುಕೂಲಗಳನ್ನು ಒದಗಿಸಿಕೊಟ್ಟಿದೆ. ಇದೇ ಅಲ್ಲದೆ "ಹುಡ್ಕೋ ಸ್ಕೀಂ'' ನಿಂದ ಹಣವನ್ನು ತಂದು ಈ ಕೊಳಚೆ ಪ್ರದೇಶದ ಜನಗಳಿಗೆ ಮನೆಗಳನ್ನು ಕಟ್ಟಿಸಿಕೊಡಬೇಕೆಂದಿದೆ. ಇವತ್ತು ಏನಾಗಿದೆ ಎಂದರೆ, ಸರ್ಕಾರೀ ಜಮೀನಿನಲ್ಲಿ, ನಗರಸಭೆಯ ಜಮೀನಿನಲ್ಲಿ, ಖಾಸಗಿಯವರ ಜಮೀನಿನಲ್ಲಿ ಈ ಕೊಳಚೆ ಪ್ರದೇಶಗಳು ಬೆಳೆಯುತ್ತಿವೆ.

ಬೆಳೆದಿರತಕ್ಕಂಥ ಸ್ಲಮ್‌ಗಳನ್ನು ಗೊತ್ತುಪಡಿಸುವುದಕ್ಕೆ ಪ್ರಯತ್ನ ಮಾಡಿದಾಗ ಅಲ್ಲಿನ ಖಾಸಗಿ ಜಮೀನಿನ ಮಾಲೀಕರು ಹೈಕೋರ್ಟಿಗೆ ಹೋಗಿ ಸ್ಟೇ ಆರ್ಡರ್ ತಂದಿದ್ದಾರೆ. ನಗರಸಭೆಯವರು ಈ ಪ್ರದೇಶಗಳಿಗೆ ಏನಾದರೂ ಹೆಚ್ಚಿನ ಸೌಲತ್ತುಗಳನ್ನು ಒದಗಿಸುವ ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಖಾಸಗಿ ಮಾಲೀಕರು ಕೋರ್ಟುಗಳಿಂದ ತಡೆ ಆಜ್ಞೆಯನ್ನು ತಂದು ತೊಂದರೆ ಮಾಡುತ್ತಾರೆ. ಒಂದೇ ಸಾರಿ ಎಲ್ಲಾ ಕೊಳಚೆ ಪ್ರದೇಶಗಳನ್ನು ನಿರ್ಮೂಲ ಮಾಡಲಿಕ್ಕೆ ಆಗುವುದಿಲ್ಲ. ಎಲ್ಲಿಯವರೆಗೆ ಅವನ್ನು ಬಗೆಹರಿಸಲಿಕ್ಕೆ ಸಾಧ್ಯವಿಲ್ಲವೋ ಅಲ್ಲಿಯವರೆಗೆ ಸ್ವಲ್ಪಮಟ್ಟಿಗೆ ನೀರಿನ ವ್ಯವಸ್ಥೆ ಚರಂಡಿ ವ್ಯವಸ್ಥೆಯನ್ನು ಆರೋಗ್ಯದ ದೃಷ್ಟಿಯಿಂದ ಅವರು ವಾಸಮಾಡತಕ್ಕಂಥ ಪ್ರದೇಶಗಳಿಗೆ ಕನಿಷ್ಠ ಅವಶ್ಯಕತೆಗಳನ್ನು ಮಾಡಿಕೊಡಬೇಕು. ಇದನ್ನೆಲ್ಲಾ ಒದಗಿಸಿಕೊಡುವ ವಿಚಾರದಲ್ಲಿ ಒಂದು ಸಮಿತಿಯನ್ನು ನೇಮಿಸಬೇಕಾಗುತ್ತದೆಂದು ನಾನು ಭಾವಿಸುತ್ತೇನೆ. ಆ ರೀತಿ ಏನಾದರೂ ಒಂದು ಸಮಿತಿ ಇದ್ದರೆ ಆಗಾಗ್ಗೆ ಆ ಕೊಳಚೆ ಪ್ರದೇಶಗಳಿಗೆ ಭೇಟಿಕೊಟ್ಟು ಅವರಿಗೆ ಬೇಕಾದ ಸೌಲಭ್ಯಗಳನ್ನು ಗುರುತಿಸಿ ಅವುಗಳನ್ನು ಒದಗಿಸುವ ವ್ಯವಸ್ಥೆ ಮಾಡಲಿಕ್ಕೆ ಸಾಧ್ಯ. ಎಲ್ಲೆಲ್ಲಿ ಇಂತಹ ಪ್ರದೇಶಗಳು ಇವೆ ಅವನ್ನು ನಿರ್ಮೂಲ ಮಾಡಲಿಕ್ಕೆ ಆದಷ್ಟು ಪ್ರಯತ್ನ ಮಾಡಬೇಕು ಈ ಒಂದು ಸಮಿತಿಯನ್ನು ನೇಮಿಸಲಿಕ್ಕೆ ಮಾನ್ಯ ಸಚಿವರು ಪ್ರಯತ್ನ ಮಾಡಿ ನೇಮಿಸಿದರೆ ಇದರಿಂದ ಸರ್ಕಾರಕ್ಕೆ ಏನೂ ತೊಂದರೆಯಾಗುವುದಿಲ್ಲ. ಸಮಿತಿ ನೇಮಿಸಿದರೆ ತಿಂಗಳಿಗೆ ಒಂದು ಸಾರಿ ಸಂಬಂಧಪಟ್ಟ ಅಧಿಕಾರಿಗಳ ಜೊತೆಯಲ್ಲಿ ಅಲ್ಲಿಗೆ ಭೇಟಿಕೊಟ್ಟು ಕೊಳಚೆ ಪ್ರದೇಶಗಳನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡಬಹುದು. ಇನ್ನು ನಮ್ಮ ಬೆಂಗಳೂರು ಅಂತಹ ಮಹಾನ್ ನಗರದಲ್ಲಿ ಅದರಲ್ಲೂ ಮಧ್ಯ ಭಾಗದಲ್ಲಿ ಇಲ್ಲಿಗೆ ಸುಮಾರು ೫ ಮೈಲಿ ದೂರದಲ್ಲಿ ಮುರುಗೇಷ್ ಪಾಳ್ಯ ಹಾಗೂ ನಂಜರೆಡ್ಡಿ ಪಾಳ್ಯ ಎಂದು ಎಚ್.ಎ.ಎಲ್.ಗೆ ಹೋಗುವ ದಾರಿಯಲ್ಲಿ ಇವೆ. ಅಲ್ಲಿ ಲೈಟು ಇಲ್ಲ ರಸ್ತೆಯಿಲ್ಲ ಮತ್ತು ಕುಡಿಯುವ ನೀರಿನ ವ್ಯವಸ್ಥೆಯೂ ಇಲ್ಲ. **ಜೊತೆಗೆ**

ಹೊರದೇಶಗಳಿಂದ ಬರುವ ಜನರು ಆ ಮಾರ್ಗವಾಗಿಯೇ ಬೆಂಗಳೂರಿಗೆ ಬರತಕ್ಕಂಥಾದ್ದು ಇದೆ ಅಲ್ಲಿಗೆ ಬೆಂಗಳೂರಿನ ಕೆಲವು ಭಾಗದ ಚರಂಡಿ ನೀರು ಬರುತ್ತದೆ. ಅದು ಶೋಸಿಕೊಂಡು ಭಾವಿಗಳಿಗೆ ಬರತಕ್ಕಂಥಾದ್ದು ಇದೆ. ಅದೇ ನೀರನ್ನು ಅಲ್ಲಿ ವಾಸಮಾಡತಕ್ಕ ಜನ ಕುಡಿಯುತ್ತಾರೆ. ಇದು ಏನಾದರೂ ಸುಳ್ಳು ಇದ್ದರೆ ಅಥವಾ ತಪ್ಪು ಇದ್ದಗೆ ನಾನು ಈ ಸದನದ ಸದಸ್ಯತ್ವಕ್ಕೆ ರಾಜಿನಾಮೆ ಕೊಟ್ಟು ಹೋಗುತ್ತೇನೆ. ನಾವು ಕಣ್ಣಾರೆ ನೋಡಿರುವುದನ್ನು ಹೇಳುತ್ತಿದ್ದೇನೆ ಅಲ್ಲಿ ಇರತಕ್ಕ ಜನ ಎಲ್ಲಾ ಕಾರ್ಖಾನೆಗಳಿಗೆ ಹೋಗಿ ಕೆಲಸಮಾಡತಕ್ಕಂಥ ಜನರು ಇಂತಹ ಜಾಗದಲ್ಲಿಯೇ ಈ ರೀತಿ ವ್ಯವಸ್ಥೆ ಇದೆ ಎಂದರೆ ಮಾನ್ಯ ಸಚಿವರು ಏನು ಮಾಡಬೇಕೆಂದು ಯೋಚನೆ ಮಾಡಬೇಕು. ಈ ವಿಷಯವನ್ನು ಮಾನ್ಯ ಸಚಿವರ ಗಮನಕ್ಕೆ ತಂದಾಗ ಅವರು ಅವರ ಅಧಿಕಾರಿಗಳಿಗೆ ಹೋಗಿ ನೋಡಿ ಬನ್ನಿ ಎಂದು ಹೇಳಿದರು, ಅಧಿಕಾರಿಗಳು ಹೋಗಿ ನೋಡಿ ಬಂದರು, ಆದರೆ ಅಲ್ಲಿನ ಜನರಿಗೆ ನೀರು ಬರಲಿಲ್ಲ. ಇದಕ್ಕೆ ತಕ್ಕ ವ್ಯವಸ್ಥೆ ಮಾಡದೆ ಇರುವುದಕ್ಕೆ ಮಾನ್ಯ ಸಚಿವರು ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ತೆಗೆದು ಕೊಂಡರೆ ಮುಂದೆ ಈ ರೀತಿ ಅವ್ಯವಸ್ಥೆಯ ಪರಿಸ್ಥಿತಿ ಬರುವುದಿಲ್ಲ. ಮುಂದೆ ಎಚ್ಚರಿಕೆಯಿಂದ ಕೆಲಸ ಮಾಡಲಿಕ್ಕೆ ಅಧಿಕಾರಿಗಳಿಗೆ ಒಂದು ರೀತಿ ಮಾರ್ಗದರ್ಶನವಾಗುತ್ತದೆ. ಅಲ್ಲಿನ ಜನರು ಮಂತ್ರಿ ಗಳೇನಾದರೂ ಆ ದಾರಿಯಲ್ಲಿ ಹೋಗುವಾಗ ಇವರನ್ನು ತಡೆಗಟ್ಟಬೇಕೆಂದು ಯೋಚನೆ ಇಟ್ಟು ಕೊಂಡಿದ್ದಾರೆ. ಏತಕ್ಕೋಸ್ಕರವೆಂದರೆ ಕುಡಿಯುವ ನೀರಿನ ವ್ಯವಸ್ಥೆ ಮಾಡಿಕೊಡಿ ಎಂದು ಕೇಳಲಿಕ್ಕೆ. ಅಲ್ಲಿ ಜೊತೆಗೆ ಪಕ್ಕದಲ್ಲಿಯೇ ಕಾವೇರಿ ನೀರಿನ ಪೈಪು ಹಾದು ಹೋಗಿದೆ ಕಡಿಮೆ ಖರ್ಚಿನಲ್ಲಿ ಅವರಿಗೆ ನೀರನ್ನು ಒದಗಿಸಲಿಕ್ಕೆ ಸಾಧ್ಯ ಸರ್ಕಾರಕ್ಕೆ ಹೆಚ್ಚಿನ ಹೊರೆ ಬರುವುದಿಲ್ಲ. ಇದು ನಿಜವಾಗಿಯೂ ಕೊಳಚೆ ಪ್ರದೇಶವಲ್ಲ ಆದರೂ ಕೂಡ ಅಲ್ಲಿ ಕೊಳಚೆ ಪ್ರದೇಶಕ್ಕಿಂಥ ತೊಂದರೆಗಳು ಹೆಚ್ಚಾಗಿವೆ. ಆದ್ದರಿಂದ ಮಾನ್ಯ ಸಚಿವರು ಇದನ್ನು ಗಮನಿಸಬೇಕೆಂದು ಇದು ಸರ್ಕಾರದ ಆದ್ಯ ಕರ್ತವ್ಯವೆಂದು ಹೇಳಿ ಮಾನ್ಯ ಸದಸ್ಯರಾದ ಶ್ರೀ ರಾಮ್‌ದೇವ್‌ರವರು ಈ ಒಂದು ಸೂಚನೆಯನ್ನು ತಂದಿರುವುದು ಕೂಡ ಸರ್ಕಾರದ ಗಮನವನ್ನು ಈ ಪ್ರದೇಶಗಳಿಗೆ ಸೆಳೆಯಲಿಕ್ಕೆ ಆಗಿ ತಂದಿರುವುದು ಎಂದು ಹೇಳುತ್ತೇನೆ. ಇದೇ ಕೆಲವು ಮುಖ್ಯವಾದ ಸಿಟಿಗಳಲ್ಲಿ ಅಂದರೆ ಬೆಂಗಳೂರು, ಬೆಳಗಾಂ ಮತ್ತು ಹುಬ್ಬಳ್ಳಿಗಳಲ್ಲಿ ದಿನೇ ದಿನೇ ಕೊಳಚೆ ಪ್ರದೇಶಗಳು ಬೆಳೆಯುತ್ತಿವೆ. ಇದನ್ನು ಇವತ್ತಿನದಿನ ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ಅಲ್ಲಿಯ ಅವ್ಯವಸ್ಥೆಯನ್ನು ನೋಡಿದರೆ ಬಹಳ ದುಃಖವಾಗುತ್ತದೆ. ಇನ್ನು ಹಳ್ಳಿಗಳಲ್ಲಿ ಮಳೆ ಇಲ್ಲದೆ ಇರುವ ಸಂದರ್ಭದಲ್ಲಿ ಹಳ್ಳಿಗಳಿಂದ ಜನರು ಪಟ್ಟಣಗಳಿಗೆ ವಲಸೆ ಬರುತ್ತಾರೆ, ಬಂದವರು ಬಾಡಿಗೆ ಕೊಟ್ಟು ವಾಸ ಮಾಡತಕ್ಕಂಥ ಅನುಕೂಲ ಅವರಿಗೆ ಇರುವುದಿಲ್ಲ. ಎಲ್ಲಲ್ಲಿ ಬೇಕೋ ಅಲ್ಲಲ್ಲಿ ಒಂದೊಂದು ಜೋಪಡಿ ಹಾಕಿ ಕೊಂಡು ವಾಸಮಾಡತಕ್ಕಂಥಾದ್ದು ಇದೆ. ಆದ್ದರಿಂದ ಇವರುಗಳಿಗೆ ಸರಿಯಾದ ರಸ್ತೆ ಮಾಡಿ ಒಂದೊಂದು ಸೈಟು ಮಾಡಿ ಇಂತಹ ಜಾಗಗಳಲ್ಲಿ ನೀವು ಇರಬೇಕು ಎಂದು ಹೇಳಿದರೆ ಕೊಳಚೆ ಪ್ರದೇಶ ಗಳು ಹೆಚ್ಚಿಗೆ ಬೆಳೆಯಲಿಕ್ಕೆ ಅವಕಾಶವಿರುವುದಿಲ್ಲ. ಉದಾಹರಣೆಗೆ ಮುರುಗೇಶ್ ಪಾಳ್ಯ ಮತ್ತು ನಂಜರೆಡ್ಡಿ ಪಾಳ್ಯಗಳಿಗೆ ಆದಷ್ಟು ಬೇಗ ಅವರಿಗೆ ಬೇಕಾದ ಕನಿಷ್ಟ ಅವಶ್ಯಕತೆಗಳನ್ನು ಮಾನ್ಯ ಸಚಿವರು ಆದಷ್ಟು ತೀವ್ರವಾಗಿ ಸಂಬಂಧಪಟ್ಟ ಅಧಿಕಾರಿಗಳ ಜೊತೆಯಲ್ಲಿ ಚರ್ಚೆಮಾಡಿ ಅಲ್ಲಿಗೆ ಭೇಟಿ ಕೊಡಬೇಕೆಂದು ಹೇಳುತ್ತೇನೆ ಅಲ್ಲಿಗೆ ಹೋಗುವಾಗ ನಾನು ಕೂಡ ಬರುತ್ತೇನೆ, ಅಲ್ಲಿ ಇರತಕ್ಕಂಥ ಪರಿಸ್ಥಿತಿಯನ್ನು ಗಮನದಲ್ಲಿ ತೆಗೆದುಕೊಂಡು ಅಲ್ಲಿರತಕ್ಕಂಥ ಜನರಿಗೆ ಅನುಕೂಲ ಒದಗಿಸಬೇಕೆಂದು ಜೊತೆಗೆ ಅಲ್ಲಿ ಒಂದು ೨೫ ಅಡಿ ತಗ್ಗು ಪ್ರದೇಶವಿದೆ ಮಳೆ ಬಂದಾಗ ನೀರು ನಿಂತು ಅದು ಸೊಳ್ಳೆಗಳನ್ನು ಉತ್ಪತ್ತಿ ಮಾಡುವ ಕೇಂದ್ರವಾಗಿದೆ. ಆದ್ದರಿಂದ ಸರಿಯಾಗಿ ಏನಾದರೂ ವ್ಯವಸ್ಥೆ ಮಾಡಿ ಸೊಳ್ಳೆ ಉತ್ಪತ್ತಿಯನ್ನು ತಡೆಯ ಬೇಕು, ಕೊಳಚೆ ಪ್ರದೇಶವನ್ನು ನಿರ್ಮೂಲ ಮಾಡಲಿಕ್ಕೆ ಕೋಟ್ಯಾಂತರ ರೂಪಾಯಿ ಸರ್ಕಾರ ಖರ್ಚು ಮಾಡುತ್ತಿದೆ. ಆದ್ದರಿಂದ ಈ ಭಾಗಕ್ಕೆ ಆದ್ಯ ಗಮನಕೊಡಬೇಕೆಂದು ಹೇಳಿ ಈ ಸಂದರ್ಭದಲ್ಲಿ ಎರಡು ಮಾತುಗಳನ್ನು ಹೇಳಲು ಅವಕಾಶ ಕಲ್ಪಿಸಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಬಿ. ವಿ. ಜನಾಲಿ(ಗುಳೇದ್‌ಗುಡ್ಡ).—ಮಾನ್ಯ ಅಧ್ಯಕ್ಷಣಿಯವರೇ, ಮಾನ್ಯ ಸದಸ್ಯರಾದ ಶ್ರೀ ರಾಮದೇವ್ ಅವರು ಈ ಸಭೆಯ ಮುಂದೆ ತಂದಿರತಕ್ಕ ಕೊಳಚೆ ಪ್ರದೇಶದ ನಿರ್ಮೂಲನಾ ಮತ್ತು ಹಾಗು ನೈರ್ಮಲ್ಯ ವಿಷಯವಾಗಿ ನಾನು ಕೆಲವೊಂದು ಮಾತುಗಳನ್ನು ಹೇಳಬಯಸುತ್ತೇನೆ. ಇವೊತ್ತು ಕೊಳಚೆ ಪ್ರದೇಶ ಯಾವರೀತಿಯಿಂದ ಉಂಟಾಗುತ್ತಿದೆ ಎನ್ನುವ ವಿಚಾರವಾಗಿ ಹೇಳುವುದಾದರೆ ನಮ್ಮ ಅಧಿಕಾರಿ ಗಳು ಟೌನ್ ಪ್ಲಾನಿಂಗ್ ಮಾಡುವ ಮುಂದೆ ವಾಸಕ್ಕೆ ಆಯೋಗ್ಯವಾಗಿರತಕ್ಕ ಸ್ಥಳಗಳನ್ನು ಹಾಗೆಯೇ ಬಿಟ್ಟಿರುತ್ತಾರೆ. ನೆರೆಹಾವಳಿಗಳಿಂದ ಬರಗಾಲ ಪ್ರದೇಶದಿಂದ ಬರಗಾಲ ಪೀಡಿತ ಜನ ಸಾಮಾನ್ಯವಾಗಿ ಉದ್ಯೋಗಾವಕಾಶಗಳನ್ನು ಒದಗಿಸಿಕೊಳ್ಳುವುದಕ್ಕೆ ಸಿಟಿ ಪ್ರದೇಶಗಳಿಗೆ ಬರುವುದು ಉಂಟು. ಇಂಥಾ

ವೇಳೆಯಲ್ಲ ಖಾಲಿ ಇರತಕ್ಕ ತಗ್ಗು ಪ್ರದೇಶಗಳಲ್ಲಿ ಆ ಜನಗಳು ಗುಡಿಸಲುಗಳನ್ನು ಹಾಕಿಕೊಂಡು ವಾಸವಾಗಿರುತ್ತಾರೆ. ಕೊಳಚೇ ಪ್ರದೇಶಗಳಲ್ಲಿ ಎಷ್ಟೋ ಕಟ್ಟಡಗಳು ಕೂಡ ಆಗಿವೆ. ಮತ್ತು ಕೆಲವು ಜನರು ಹಳ್ಳಿಗಳಲ್ಲಿ ಬೇಸರವಾಗಿ ಸಿಟಿಗಳಿಗೆ ಬಂದು ಈ ಕೊಳಚೇ ಪ್ರದೇಶಗಳಲ್ಲಿ ಗುಡಿಸಲುಗಳನ್ನು ಹಾಕಿಕೊಂಡ ವಾಸ ಮಾಡುವುದೂ ಉಂಟು. ಇಂಥಾ ಕೊಳಚೇ ಪ್ರದೇಶಗಳಿಗೆ ಜನಗಳು ಬಾದು ಅಲ್ಲಿ ಮನೆಗಳನ್ನು ಕಟ್ಟಿ ಬಾಡಿಗೆಗೆ ಕೊಟ್ಟುಕೊಂಡು ವಾಸ ಮಾಡತಕ್ಕ ಪರಿಸ್ಥಿತಿಯೂ ಕೂಡ ಇರತ್ತದೆ. ಈ ರೀತಿಯಾಗಿ ಅನಾನುಕೂಲವಾಗಿರತಕ್ಕ ಜನಗಳು ಬೇರೆ ಕಡೆಯಿಂದ ಕೊಳಚೆ ಪ್ರದೇಶಗಳಿಗೆ ಬಂದು ಅನಾರೋಗ್ಯಕರವಾದ ಕಡೆ ಗುಡಿಸಲುಗಳನ್ನು ಹಾಕಿಕೊಂಡು ಇರುವಂತಹ ಸನ್ನಿವೇಶ ಇರುತ್ತದೆ ಎನ್ನುವ ವಿಚಾರಗಳನ್ನು ನಾನು ಇಡಬಯಸುತ್ತೇನೆ. ಟೌನ್ ಪ್ಲಾನಿಂಗ್ ಮಾಡುವ ಮುನ್ನ ತಗ್ಗು ಪ್ರದೇಶಗಳು, ಮತ್ತು ಅನಾರೋಗ್ಯಕರವಾದ ಪ್ರದೇಶಗಳನ್ನು ಹಾಗೆಯೇ ಬಿಡುವುದಕ್ಕೆ ಅವಕಾಶವನ್ನು ಕೊಡಬಾರದು. ಅಂಥಾ ಪ್ರದೇಶಗಳಲ್ಲಿ ಗಿಡಮರಗಳನ್ನು ಹಾಕಬೇಕು, ಗಾರ್ಡನ್‌ಗಳನ್ನು ಮಾಡಬೇಕು ಇಷ್ಟೇ ಅಲ್ಲದೆ ಗಟಾರಗಳ ಅಕ್ಕಪಕ್ಕದಲ್ಲಿ ಸಾಮಾನ್ಯವಾಗಿ ಕೊಳಚೆ ಪ್ರದೇಶಗಳು ಹುಟ್ಟಿಕೊಳ್ಳುತ್ತವೆ. ಅದಕ್ಕಾಗಿ ಅಂಥಾ ಗಟಾರಗಳ ಪಕ್ಕದಲ್ಲಿ ಹೂವು ಬಳ್ಳಿಗಳನ್ನು ಬೆಳೆಸುವುದಾದರೆ ಅಂಥಾ ಜಾಗಗಳಲ್ಲಿ ಕೊಳಚೇ ಪ್ರದೇಶಗಳು ನಿರ್ಮಾಣವಾಗುವ ಪರಿಸ್ಥಿತಿ ಉದ್ಭವಿಸುತ್ತಾ ಇರಲಿಲ್ಲ.

ಇನ್ನು ಎರಡನೆಯದಾಗಿ ನಾವು ಮದ್ರಾಸಿಗೆ ಹೋದಾಗ ಅಲ್ಲಿ ಕೊಳಚೇ ಪ್ರದೇಶಗಳಲ್ಲಿ ಕಟ್ಟಿರತಕ್ಕ ಮನೆಗಳನ್ನು ನೋಡಿದ್ದೇನೆ, ಅಲ್ಲಿ ಕೊಳಚೆ ಪ್ರದೇಶಗಳಲ್ಲಿ ಬಹಳ ಚೆನ್ನಾಗಿ ಆರ್. ಸಿ. ಸಿ. ಬಿಲ್ಡಿಂಗ್‌ಗಳನ್ನು ಕಟ್ಟಿದ್ದಾರೆ. ಅದರಲ್ಲಿ ಏನೂ ವ್ಯತ್ಯಾಸವಿಲ್ಲ. ಆದರೆ ಸ್ಲಮ್ ನಿರ್ಮೂಲನೆಯಾಗಿದೆಯೋ ಎಂದು ನೋಡಿದಾಗ ಸ್ಲಮ್ ವಾಸನೆ ತಿಳಿದು ಬಂತು. ಬಿಲ್ಡಿಂಗ್ ಮಾತ್ರ ಕಟ್ಟಿದ್ದಾರೆ. ಆದರೆ ಸ್ಲಮ್ ವಾಸನೆ ಮಾತ್ರ ಹೋಗಿಲ್ಲ. ನಾನು ಧಾರವಾಡಕ್ಕೆ ಪ್ರವಾಸ ಹೋದಾಗ ೧೩ ಸ್ಲಮ್‌ಗಳನ್ನು ವಿಸಿಟ್ ಮಾಡಿದ್ದೇನೆ. ಅಲ್ಲಿ ದೋಹರ ಕಕ್ಕಯ್ಯ ಮತ್ತು ಲಕ್ಷ್ಮೀಪುರ ಸ್ಲಮ್‌ಗಳನ್ನು ನೋಡಿದಾಗ ನನಗೆ ಬಹಳ ಬೇಸರ ಆಯಿತು ನರಕ ಹೇಗಿದೆ ಎಂಬುದನ್ನು ಸ್ಲಮ್‌ಗಳಲ್ಲಿ ಜನಗಳು ಕಂಡುಕೊಂಡಿದ್ದಾರೆ. ಮಾನ್ಯ ಉಪಾಧ್ಯಕ್ಷರು ಚುನಾವಣೆಯ ಸಮಯದಲ್ಲಿ ಏನಾದರೂ ಸ್ಲಮ್‌ಗಳಿಗೆ ಭೇಟಿ ಕೊಟ್ಟಿರಬಹುದು, ನಾನು ಪ್ರತ್ಯಕ್ಷವಾಗಿ ನೋಡಿದ್ದೇನೆ. ಅನೇಕ ಸ್ಲಮ್‌ಗಳಲ್ಲಿ ಜನಗಳು ತುಂಬಾ ಕಷ್ಟಪಡುತ್ತಿದ್ದಾರೆ. ಹಾಗೆಯೇ ಹುಬ್ಬಳ್ಳಿಯಲ್ಲಿ ನಾನು ಹೋದಾಗ ನೋಡಿದ್ದೇನೆ. ಅಲ್ಲಿ ಬಂಗಿ ಗಲ್ಲಿ ಮತ್ತು ಕೊರವಿಗಲ್ಲಿ ಕೊಳಚೆ ಪ್ರದೇಶಗಳಲ್ಲಿರತಕ್ಕ ಜನ ಬಹಳ ಕಷ್ಟಪಡುತ್ತಿದ್ದಾರೆ. ಅಲ್ಲಿ ಅವರ ಪರಿಸ್ಥಿತಿಯನ್ನು ನೋಡಿದಾಗ ಬಹಳ ಕನಿಕರವುಂಟಾಗುತ್ತದೆ. ಅಲ್ಲಿ ಜನಗಳಿಗೆ ಗಟಾರದ ವ್ಯವಸ್ಥೆಯಿಲ್ಲ, ಲೈಟ್ ಇಲ್ಲ, ರಸ್ತೆಗಳಿಲ್ಲ, ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ಅಲ್ಲಿಗೆ ಒಂದು ಸಾರಿ ಮಾಜಿ ಮಂತ್ರಿಗಳಾದ ಶ್ರೀಮಾನ್ ಬಸವಲಿಂಗಪ್ಪನವರು ಭೇಟಿ ಕೊಟ್ಟಾಗ ಅವರು ಅಧಿಕಾರಿಗಳನ್ನು ಕರೆದು ಆದೇಶವನ್ನು ಕೊಟ್ಟಿದ್ದಾರೆ. ಕೊಳಚೆ ಪ್ರದೇಶದಲ್ಲಿರತಕ್ಕ ಜನಗಳಿಗೆ ಸಾಕಷ್ಟು ವ್ಯವಸ್ಥೆ ಮಾಡಬೇಕೆಂದು ಹೇಳಿದ್ದಾರೆ. ಇದರ ಜೊತೆಗೆ ನಾನು ಕೂಡ ಆ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಲ್ಲಿ ಪ್ರಾರ್ಥನೆ ಮಾಡಿಕೊಂಡು ಕೊಳಚೇ ಪ್ರದೇಶಗಳಲ್ಲಿರತಕ್ಕ ಜನಗಳಿಗೆ ಸೌಕರ್ಯಗಳನ್ನು ಒದಗಿಸಿಕೊಡಬೇಕೆಂದು ಪ್ರಾರ್ಥನೆ ಮಾಡಿಕೊಂಡಿದ್ದೇನೆ. ನಾನು ಒಂದು ಸಾರಿ ಕೊಳಚೇ ಪ್ರದೇಶಗಳಿಗೆ ಭೇಟಿ ನೀಡಿದಾಗ ಸ್ಲಮ್ ಏರಿಯಾದಲ್ಲಿರತಕ್ಕ ಮನೆಯಲ್ಲಿಯೇ ಊಟ ಮಾಡಬೇಕು ಎಂದು ಹೇಳಿದಾಗ ಅಲ್ಲಿ ದೋವರ ಬಂಗಿ ಗಲ್ಲಿಯಲ್ಲಿದ್ದ ರಾಥೋಡ್ ಎಂಬ ಲಂಬಾಣಿಯವರ ಮನೆಯಲ್ಲಿ ನಾವು ಊಟ ಮಾಡಿದ್ದೇವೆ ಅಲ್ಲಿ ಊಟ ಬಹಳ ರುಚಿಯಾಗಿತ್ತು ಅಲ್ಲಿ ಪತ್ರಿಕಾ ಕರ್ತರೂ ಕೂಡ ಊಟ ಮಾಡಿದರು. ನಮ್ಮ ಜೊತೆಯಲ್ಲಿದ್ದವರು ಸ್ಲಮ್‌ನಲ್ಲಿ ಕೂಡ ಸಾರೂ ಎಷ್ಟು ಚೆನ್ನಾಗಿ ಮಾಡಿದ್ದಾರೆ ಎಂದು ಹೇಳಿದರು ಆದರೆ ಅಲ್ಲಿ ಮಾಡಿದ್ದು ಕೋಳಿ ಸಾರಲ್ಲ ಬೇಳೆ ಸಾರು. ಮುಖ್ಯವಾಗಿ ಕೊಳಚೆ ಪ್ರದೇಶಗಳಲ್ಲಿ ಜನಗಳಿಗೆ ವಾಸಕ್ಕೆ ಯೋಗ್ಯವಾಗಿರುವುದಿಲ್ಲ. ಕಕ್ಕಸು ಇರುವುದಿಲ್ಲ. ಮೂತ್ರಿ ಇರುವುದಿಲ್ಲ ಅದಕ್ಕಾಗಿ ಅವರು ಗುಡಿಸಲುಗಳ ಪಕ್ಕದಲ್ಲಿಯೇ ಜನಗಳು ತಮ್ಮ ನೇಚರ್ ಕಾಲ್‌ಗಳನ್ನು ತೀರಿಸಿಕೊಳ್ಳುತ್ತಾರೆ. ಗುಡಿಸಲುಗಳ ಹಿಂದೆ ಅಕ್ಕಪಕ್ಕದಲ್ಲಿ ಮಲಮೂತ್ರಗಳನ್ನು ವಿಸರ್ಜನೆ ಮಾಡುವುದರಿಂದ ಅಲ್ಲಿ ವಾಸ ಮಾಡತಕ್ಕ ಜನಗಳಿಗೆ ಅನಾರೋಗ್ಯಕರವಾದ ಪರಿಸ್ಥಿತಿ ಉಂಟಾಗುತ್ತದೆ ಆದ್ದರಿಂದ ಕೊಳಚೆ ಪ್ರದೇಶಗಳಲ್ಲಿ ಯಾವರೀತಿ ಸ್ವಚ್ಛತೆಯನ್ನು ಕಾಯ್ದುಕೊಂಡು ಇರಬೇಕೆಂದು ಜನಗಳಿಗೆ ಶಿಕ್ಷಣವನ್ನು ಕೊಡಬೇಕು. ಜೊತೆಗೆ ಅವರಿಗೆ ಅತ್ಯಗತ್ಯವಾಗಿ ಬೇಕಾಗಿರತಕ್ಕ ಸೌಕರ್ಯಗಳನ್ನು ಒದಗಿಸಿಕೊಟ್ಟು ಅವುಗಳನ್ನು ಯಾವರೀತಿ ಉಪಯೋಗಿಸಬೇಕೆಂಬ ಬಗ್ಗೆ ಕೂಡ ತಿಳುವಳಿಕೆಯನ್ನು ಕೊಡಬೇಕು. ಅವರು ಸ್ವಚ್ಛತೆಯನ್ನು ಕಾಯ್ದುಕೊಂಡು ತಮ್ಮ ಆರೋಗ್ಯವನ್ನು ಕೂಡ ಕಾಪಾಡಿಕೊಂಡು ಹೋಗುವುದಕ್ಕೆ ಬೇಕಾದ ವ್ಯವಸ್ಥೆಯನ್ನು ಮಾಡಬೇಕು. ಇದರ

ಜೊತೆಗೆ ಆ ಪ್ರದೇಶಗಳನ್ನು ಸ್ವಚ್ಛವಾಗಿ ಇಡಬೇಕಾದರೆ ನೀರಿನ ಪೂರೈಕೆ ಕೂಡ ಸರಿಯಾಗಿ ಮಾಡುವ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ರಸ್ತೆ, ಕುಡಿಯುವ ನೀರಿನ ವ್ಯವಸ್ಥೆ ಲೈಟು ಮುಂತಾದ ಸೌಕರ್ಯಗಳನ್ನು ಈ ಕೊಳಚೇ ಪ್ರದೇಶಗಳ ಜನಗಳಿಗೆ ಒದಗಿಸಬೇಕಾಗುತ್ತದೆ ಶ್ರೀಮಾನ್ ಬೊಮ್ಮಾಯಿ ಅವರು ಹೇಳಿದ ಹಾಗೆ ಸಾಮುದಾಯಿಕ ಕೆಲಸಗಾರರ ಕಾರ್ಯಾಗಾರವನ್ನು ರಚಿಸಿ. ಅಲ್ಲಿ ಸರ್ಕಾರದವರು ಅನೇಕ ಕೆಲಸಗಳನ್ನು ಮಾಡುವುದಕ್ಕೆ ವ್ಯವಸ್ಥೆ ಮಾಡಿ ಅಲ್ಲಿ ಇರತಕ್ಕವರಿಗೆ ಕೆಲಸಗಳನ್ನು ಕೊಟ್ಟರೆ ಅವರು ಜೀವನವನ್ನು ನಡೆಸುವುದಕ್ಕೆ ಅನುಕೂಲವಾಗುತ್ತದೆ ಆ ಕಾರ್ಯಾಗಾರಗಳಲ್ಲಿ ಅಲ್ಲಿ ವಾಸ ಮಾಡತಕ್ಕ ಜನಗಳಿಗೆ ಅಭಿರುಚಿಗೆ ತಕ್ಕಂತೆ ಸಣ್ಣ ಕೈಗಾರಿಕೆಗಳು ಎಂದರೆ ಕಮ್ಮಾರಿಕೆ, ನೇಕಾರಿಕೆ, ಮರಗೆಲಸ ಇತ್ಯಾದಿ ಕೆಲಸಗಳನ್ನು ಮಾಡುವುದಕ್ಕೆ ಹಂತ ಹಂತವಾಗಿ ವ್ಯವಸ್ಥೆ ಮಾಡಬೇಕು. ಈಗ ಕೊಳಚೆ ಪ್ರದೇಶಗಳಲ್ಲಿ ವಾಸವಾಗಿರತಕ್ಕ ಜನಗಳಿಗೆ ಆಯಾ ಸ್ಥಳದಲ್ಲಿಯೇ ಮನೆಗಳನ್ನು ಕಟ್ಟಿಸಿಕೊಟ್ಟು ಅವರಿಗೆ ಬೇಕಾದ ಕಕ್ಕಸು, ಬಾತ್ ರೂಮ್, ಲೈಟು, ಕುಡಿಯುವ ನೀರಿನ ವ್ಯವಸ್ಥೆ ಸಾಮುದಾಯಿಕ ಕಾರ್ಯಗಾರ ಇವುಗಳನ್ನು ಸರ್ಕಾರದವರು ಮಾಡಿಕೊಡಬೇಕು. ಅವರಿಗೆ ಆಯಾ ಸ್ಥಳದಲ್ಲಿಯೇ ಕಲಸಗಳನ್ನು ಒದಗಿಸೇಕೊಡದಿದ್ದರೆ ಅವರು ಕೆಲಸಕ್ಕಾಗಿ ೪-೫ ಮೈಲಿ ದೂರ ನಡೆದುಕೊಂಡು ಹೋಗಿ ಬರುವುದಕ್ಕೆ ತೊಂದರೆಯಾಗುತ್ತದೆ. ಈ ಕೆಲಸಕ್ಕಾಗಿ ಅವರಿಗೆ ಸ್ಲಮ್‌ಗಳ ಅಕ್ಕಪಕ್ಕದಲ್ಲಿಯೇ ಕಾರ್ಯಗಾರವನ್ನು ರಚಿಸಿ ಕೆಲಸಗಳನ್ನು ಒದಗಿಸುವ ವ್ಯವಸ್ಥೆ ಮಾಡಬೇಕು. ಅವರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಶಾಲೆಗಳನ್ನು ನಡೆಸುವ ವ್ಯವಸ್ಥೆ ಮಾಡಬೇಕು. ಅನೇಕ ಸ್ಲಮ್‌ಗಳನ್ನು ನಾನು ನೋಡಿದ್ದೇನೆ. ಒಂದೊಂದು ಸ್ಲಮ್‌ನಲ್ಲಿ ಕೆಲವು ೨ ಸಾವಿರ ೩ ಸಾವಿರ ಜನಗಳು ವಾಸವಾಗಿರತಕ್ಕ ನಿದರ್ಶನಗಳು ಇದೆ. ಆ ಸ್ಲಮ್‌ಗಳಲ್ಲಿ ವಾಸವಾಗಿರತಕ್ಕ ಜನಗಳ ಜೀವನ ನರಕ ಮತ್ತು ಪಶು ಸದೃಶ ಎಂದು ಹೇಳಬಹುದು ಅವರು ಸುಖವಾಗಿ ಬಾಳಬೇಕಾದರೆ ಸರ್ಕಾರದವರು ಅವರಿಗೆ ಎಲ್ಲಾ ಸೌಲಭ್ಯಗಳನ್ನೂ ಒದಗಿಸುವುದು ಅವಶ್ಯ. ಮಾನ್ಯ ವಿರೋಧ ಪಕ್ಷದವರು ಹೇಳುವುದು ಮಾತಿನಲ್ಲಿ ಸತ್ಯವಿಲ್ಲ ಎಂದಲ್ಲ. ಅಸತ್ಯವಿಲ್ಲ. ಅವರು ಹೇಳುವ ಕೆಲವೊಂದು ಮಾತು ಸತ್ಯ. ಇದರ ಬಗೆ ನಾನು ಕೆಲವೊಂದು ವಿಚಾರಗಳನ್ನು ನಾನು ತಮ್ಮ ಮುಂದೆ ಇಡುತ್ತೇನೆ. ಕೆಲವು ರಾಜಕಾರಿಣಿಗಳು ಈ ಸ್ಲಮ್‌ಗಳನ್ನು ಹುಟ್ಟಿಸುವುದಕ್ಕೆ ಕಾರಣೀಭೂತರು ಎಂದು ಕೆಲವು ವಿರೋಧ ಪಕ್ಷದ ಮಾನ್ಯ ಸದಸ್ಯರು ಹೇಳಿದರು. ಅದು ಒಪ್ಪತಕ್ಕ ಮಾತು, ಕಾಮ ಪೂರ್ತಿ ಮಾಮ ಎಂದು ಕೆಲವು ರಾಜಕಾರಿಣಿಗಳು ಎಲೆಕ್ಷನ್ ಬಂದಾಗ ಸ್ಲಮ್‌ಗಳಲ್ಲಿ ಚುನಾವಣೆಗೆ ನಿಲ್ಲಲು ಒಳ್ಳೆಯ ಜಾಗ ಎಂದು ತಿಳಿದುಕೊಂಡು ಅಲ್ಲಿ ಚುನಾವಣೆಗೆ ನಿಲ್ಲುತ್ತಾರೆ. ಇದು ಎಲ್ಲರೂ ಹೇಳತಕ್ಕ ವಿಚಾರ. ಹಾಗೆಯೆ ವಿರೋಧ ಪಕ್ಷದವರೂ ಹೇಳುತ್ತಾರೆ. ಅದು ಏನೇ ಇರಲಿ. ಈ ಸ್ಲಮ್‌ಗಳನ್ನು ನಿರ್ಮೂಲ ಮಾಡಬೇಕಾದರೆ ಒಂದು ಕೊಳಚೇ ನಿರ್ಮೂಲನಾ ಸಮಿತಿಯನ್ನು ರಚನೆ ಮಾಡಬೇಕು. ಈ ಸಮಿತಿಯನ್ನು ಕೇವಲ ಬೆಂಗಳೂರು ನಗರದಲ್ಲಿ ಮಾತ್ರ ಮಾಡಿದರೆ ಆಗುವುದಿಲ್ಲ. ಕೊಳಚೆ ಪ್ರದೇಶಗಳು ಎಲ್ಲೆಲ್ಲಿ ಇವೆ ಅಲ್ಲೆಲ್ಲಾ ಆಯಾಕ್ಷೇತ್ರದ ಎಂ.ಎಲ್.ಎ. ಗಳನ್ನು ಒಳಗೊಂಡ ಮತ್ತು ಸಂಬಂಧಪಟ್ಟ ಅಧಿಕಾರಿಗಳನ್ನೊಳಗೊಂಡ ಒಂದು ಪ್ರಾದೇಶಿಕ ಕೊಳಚೆ ನಿರ್ಮೂಲನಾ ಸಮಿತಿಯನ್ನು ರಚನೆ ಮಾಡಬೇಕು. ಎರಡನೆಯದು ಸಾಮೂಹಿಕವಾದಂತಹ ಒಂದು ಕಾರ್ಯಾಗಾರವನ್ನು ತೆರೆಯಬೇಕು. ಸ್ಲಮ್ ಏರಿಯಾದಲ್ಲಿರತಕ್ಕ ಜನಗಳು ಇಟ್ಟುಕೊಂಡಿರತಕ್ಕ ಜಾನುವಾರುಗಳು ಕಟ್ಟುವುದಕ್ಕೆ ಒಂದು ಕೊಟ್ಟಿಗೆಯನ್ನು ಕಟ್ಟಿಸಬೇಕು, ಈ ಸ್ಲಮ್‌ಗಳಲ್ಲಿ ಕೆಲವು ಟಾಂಗಾವಾಲಾಗಳು ವಾಸವಾಗಿರುತ್ತಾರೆ. ಆದ್ದರಿಂದ ಅವರು ತಮ್ಮ ಕುದುರೆಗಳನ್ನು ಕಟ್ಟುವುದಕ್ಕೆ ಜಾಗವಿಲ್ಲದಿದ್ದರೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಜಾನುವಾರುಗಳನ್ನು ಸಾಕುವವರಿಗೆ ಮತ್ತು ಕುದುರೆಗಳನ್ನು ಇಟ್ಟುಕೊಂಡಿರುವವರಿಗೆ ಅವುಗಳನ್ನು ಕಟ್ಟುವುದಕ್ಕೆ ಅನುಕೂಲವಾಗುವಂತೆ ಕ್ಯಾಟಲ್ ಷಡ್‌ಗಳನ್ನು ಮಾಡಬೇಕು, ಪ್ರತಿಯೊಂದು ಸ್ಲಮ್‌ನಲ್ಲಿಯೂ ಕಮ್ಯೂನಿಟಿ ಬಾತ್ ರೂಮ್ ಕಕ್ಕಸು, ಕುಡಿಯುವ ನೀರಿನ ವ್ಯವಸೆ ಇತ್ಯಾದಿಗಳನ್ನು ಮಾಡಿಕೊಡಬೇಕು. ಆ ಜಾಗಗಳನ್ನು ಸ್ವಚ್ಛವಾಗಿ ಇಡುವುದಕ್ಕಾಗಿ ಬೇಕಾದ ಸೌಕರ್ಯಗಳನ್ನು ಒದಗಿಸುವುದಕ್ಕೆ ವ್ಯವಸ್ಥೆ ಮಾಡಬೇಕು ಎಂದು ನಾನು ಹೇಳಬಯಸುತ್ತೇನೆ.

ಅಲ್ಲಿ ವಾಸ ಮಾಡತಕ್ಕವರಿಗೆ ಒಳ್ಳೆಯ ವಿದ್ಯಾಭ್ಯಾಸವನ್ನು ಕೊಡಬೇಕು, ಮತ್ತು ಹೇಗೆ ಆರೋಗ್ಯದಿಂದರಬೇಕು ಎನ್ನುವುದನ್ನೂ ನಾವು ಕಲಿಸಿಕೊಡಬೇಕಾಗುತ್ತದೆ. ಅನೇಕ ಸೌಲಭ್ಯಗಳನ್ನು ಅವರಿಗೆ ಹೇಗೆ ಉಪಯೋಗ ಮಾಡಿಕೊಳ್ಳಬೇಕೋ ಎನ್ನುವುದೇ ಗೊತ್ತಿರುವುದಿಲ್ಲ, ಒದಗಿಸಿರತಕ್ಕ ಸೌಲಭ್ಯಗಳನ್ನು ಯಾವ ರೀತಿಯಲ್ಲಿ ಉಪಯೋಗ ಮಾಡಿಕೊಳ್ಳಬೇಕು ಎನ್ನುವ ಜ್ಞಾನ ಅವರಲ್ಲಿ ಬರಬೇಕು. ಅದಕ್ಕೋಸ್ಕರವಾಗಿಯಾದರೂ ಅವರಿಗೆ ವಿದ್ಯೆಯನ್ನು ಕಲ್ಪಿಸತಕ್ಕ ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕು ಎಂದು ನಾನು ಈ ನನ್ನ ಸಲಹೆಯನ್ನು ತಮ್ಮ ಮುಂದಿಡಬಯಸುತ್ತೇನೆ.

ಮುಖ್ಯವಾಗಿ ಈ ಕೊಳಚೆ ಪ್ರದೇಶದಿಂದಲೇ ಸಾರ್ವಜನಿಕರ ಆರೋಗ್ಯ ಕೆಡುತ್ತದೆ. ಇವು ರೋಗಗಳ ಕೇಂದ್ರವಾಗಿಯೆಂದರೆ ಅದು ತಪ್ಪಾಗಲಾರದು. ಅನೇಕ ಸಾಂಕ್ರಾಮಿಕ ರೋಗಗಳು, ಅಂದರೆ ಕಾಲರ ಪಿಡುಗು, ಮುಂತಾದ ರೋಗಗಳು ಈ ಸ್ಲಂಗಳಲ್ಲಿ ಮೊದಲು ಉದಭವವಾಗಿ ನಂತರ ಅವು ಬೇರೆ ಆಡೆಗೆ ಹರಡುವ ಸಂದರ್ಭವನ್ನು ನಾವು ಅನೇಕ ಕಡೆಗಳಲ್ಲಿ ಕಂಡಿದ್ದೇವೆ. ಇಂಥ ಸ್ಥಳಗಳಲಿ ವಾಸ ಮಾಡತಕ್ಕವರು ಇತರರನ್ನು ಜೀವಿಸುವುದಕ್ಕೆ ಬಿಡುವುದಿಲ್ಲ ಇಂಥ ಕಡೆಗಳಲ್ಲಿ ಈ ರೋಗಗಳು ಬಂದಕೂಡಲೆ ನಮ್ಮ ಆರೋಗ್ಯ ಮಂತ್ರಿಗಳು ಈ ಜನರಿಗೆ ಚುಚ್ಚು ಮದ್ದನ್ನು ಹಾಕಿಸತಕ್ಕ ವ್ಯವಸ್ಥೆಯನ್ನು ಮಾಡಬೇಕು, ಅವರು ವಾಸ ಮಾಡತಕ್ಕ ಸ್ಥಳಗಳು ಸ್ವಚ್ಛವಾಗಿದ್ದರೆ ಅದನ್ನು ನಾವು ಜ್ಞಾನಧಾಮವೆಂದು ಹೇಳಬೇಕಾಗುತ್ತದೆ. ಸ್ವಚ್ಛತೆ ಇದ್ದಾಗ ಅಲ್ಲಿ ಹೇಳಿಕೊಡತಕ್ಕ ಪಾಠಪ್ರವಚನಗಳು ಚೆನ್ನಾಗಿ ಆಗಿ ಮಕ್ಕಳೂ ಸಹ ಸುಸಂಸ್ಕೃತರಾಗುವುದಕ್ಕೆ ಕಾರಣವಾಗುತ್ತದೆ. ಇದು ಒಬ್ಬರನ್ನು ಒಬ್ಬರು ನೋಡಿ ಅನುಕರಣೆ ಮಾಡಿ ತಾವೂ ಸಹ ಬುದ್ಧಿವಂತರಾಗುವುದಕ್ಕೆ ಒಳ್ಳೆಯ ಅವಕಾಶವನ್ನು ನಾವು ಕಲ್ಪಿಸಿದಂತಾಗುತ್ತದೆ. ಇಂಥ ಸ್ಲಂಗಳು ನಗರಗಳಲ್ಲಿ ಎಲ್ಲಾ ಕಡೆಗಳಲ್ಲಿಯೂ ಇರುವುದಿಲ್ಲ. ಎಲ್ಲಿಯೋ ಕೆಲವು ಕಡೆಗಳಲ್ಲಿ ಇರುತ್ತವೆ. ಅವನ್ನಾದರೂ ಸರ್ಕಾರದವರು ಸರಿಯಾದ ರೀತಿಯಲ್ಲಿ ಇಡುವುದಕ್ಕೆ ಎಲ್ಲಾ ಪ್ರಯತ್ನಗಳನ್ನು ಮಾಡಬೇಕು ಎಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಸಲಹೆ ಮಾಡಲು ಬಯಸುತ್ತೇನೆ. ಇಂಥ ಕೆಲಸಗಳನ್ನು ಸರ್ಕಾರದವರು ಮಾಡಿದ್ದೇ ಆದರೆ ಸ್ಲಂಗಳಲ್ಲಿ ವಾಸ ಮಾಡತಕ್ಕ ಜನರ ಕಲ್ಯಾಣವಾಗುತ್ತದೆ. ಮತ್ತು ಅವರೂ ಸಾರ್ವಜನಿಕರಲ್ಲಿ ಹೆಚ್ಚಿನ ರೀತಿಯಲ್ಲಿ ಬೆರೆತು ಉತ್ತಮ ಜೀವನವನ್ನು ನಡೆಸುವುದಕ್ಕೆ ಸಹಾಯಕವಾಗುತ್ತದೆ. ಈ ವಿಷಯವನ್ನು ವಿರೋಧಪಕ್ಷದವರು ಹೇಳಿದರೆ ಅದು ವಿರೋಧಪಕ್ಷದವರು ಹೇಳುವ ಮಾತು ಎಂದು ಸರ್ಕಾರದವರು ಕಡೆಗಣಿಸಬಾರದು. ಯಾವುದು ಸತ್ಯ ಇದೆ. ಯಾವ ಸಲಹೆಯಿಂದ ಜನರ ಕಲ್ಯಾಣವಾಗುತ್ತದೆ. ಎನ್ನತಕ್ಕ ವಿಚಾರ ವಿಮರ್ಶೆಯನ್ನು ಸರ್ಕಾರದವರು ಮಾಡಬೇಕು ಎಂದು ನಾನು ತಮ್ಮ ಮೂಲಕ ಸಲಹೆ ಮಾಡಬಯಸುತ್ತೇನೆ. ಯಾವ ಸರ್ಕಾರವೇ ಇರಲಿ ಅದರಲ್ಲಿರತಕ್ಕ ಲೋಪದೋಷಗಳನ್ನು ವಿರೋಧಪಕ್ಷದವರು ಎತ್ತಿ ತೋರಿಸಿದಾಗ ಅದನ್ನು ತಿದ್ದಿಕೊಳ್ಳುವುದಕ್ಕೆ ಒಳ್ಳೆಯದು. ಇವರೂ ಸಹ ಸರ್ಕಾರಕ್ಕೆ ಒಂದು ರೀತಿಯಲ್ಲಿ ಒಳ್ಳೆಯ ಮಾರ್ಗದರ್ಶನ ಮಾಡತಕ್ಕವರು ಎಂದು ನಾವು ತಿಳಿದುಕೊಳ್ಳಬೇಕಾಗುತ್ತದೆ. ಆದರೆ ವಿರೋಧಪಕ್ಷದವರೂ ಸಹ ಅತಿರೇಕದಿಂದಾಗಲಿ ಅಥವಾ ಸುಳ್ಳುಗಳನ್ನು ಹೇಳತಕ್ಕ ಭಾವನೆಯನ್ನು ಹೊಂದಿರಬಾರದು ಎಂದು ನಾನು ಹೇಳುತ್ತೇನೆ.

ಶ್ರೀ ಜೆ. ಎಚ್. ಪಟೇಲ್.—ಮಾನ್ಯ ಸದಸ್ಯರು ಬಹಳ ಸತ್ಯವನ್ನು ನುಡಿಯುತ್ತಿದ್ದಾರೆ. ಯಾರು ಹೆದರಿಕೆಯೂ ಇಲ್ಲವೆಂದು ಕಾಣುತ್ತದೆ.

ಶ್ರೀ ಬಿ ವಿ. ಜನಾಲಿ.—ನನಗೆ ತಿಳಿದ ಮಟ್ಟಿಗೆ ಕೆಲವರು ಇಲ್ಲದ್ದನ್ನು ಕಲ್ಪಿಸಿ ಹೇಳತಕ್ಕ ಸ್ವಭಾವನ್ನು ಇಟ್ಟುಕೊಂಡಿದ್ದಾರೆ, ಇನ್ನು ಕೆಲವರು ಸರ್ಕಾರವನ್ನು ಯಾವಾಗಲೂ ಅವಹೇಳನ ಮಾಡತಕ್ಕ ರೀತಿಯಲ್ಲಿ ಮಾಡುವ ಸ್ವಭಾವವನ್ನು ಇಟ್ಟುಕೊಂಡಿದ್ದಾರೆ. ಇದರ ಬಗ್ಗೆ ನಾವು ಹೆಚ್ಚು ಲಕ್ಷ್ಯ ಕೊಡಬಾರದು.

ಶ್ರೀ ಜೆ ಎಚ್. ಪಟೇಲ್.—ಮಾನ್ಯ ಜನಾಲಿಯವರು ಹೇಳುವುದರಲ್ಲಿ ಬಹಳ ಸತ್ಯಾಂಶ ಇದೆ. ಸರ್ಕಾರದವರು ಇಂಥಾದ್ದನ್ನು ಗಮನಿಸುತ್ತಿಲ್ಲ, ಎಂದು ಹೇಳುವ ಧೈರ್ಯ ಇವರಿಗೆ ಬಂದಿರುವುದು ಬಹಳ ಸಂತೋಷದ ವಿಷಯವಾಗಿದೆ.

ಶ್ರೀ ಬಿ. ವಿ. ಜನಾಲಿ.—ಸರ್ಕಾರದವರು ಬಹಳಷ್ಟು ಒಳ್ಳೆಯ ಕೆಲಸಗಳನ್ನು ಮಾಡಿದ್ದಾಗ್ಯೂ ಕೂಡ ಸರ್ಕಾರವನ್ನು ಟೀಕಿಸುವುದು ಸರಿಯಲ್ಲ. ಸರ್ಕಾರದವರು ಯಾವ ಯಾವ ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ ಅವುಗಳನ್ನು ವಿರೋಧಪಕ್ಷದವರು ಮೆಚ್ಚಬೇಕು, ಮತ್ತು ಯಾವುದು ಸರಿಯಿಲ್ಲ ಅಂಥದ್ದಕ್ಕೆ ಒಳ್ಳೆಯ ಸಲಹೆಗಳನ್ನು ಕೊಡಬೇಕು ಎನ್ನುವಂಥ ಭಾವನೆಯನ್ನು ಅವರು ಇಟ್ಟುಕೊಳ್ಳಬೇಕು ಎಂದು ನಾನು ಈ ಸಂದರ್ಭದಲ್ಲಿ ಅವರಿಗೆ ಅರಿಕೆಮಾಡಿಕೊಳ್ಳುತ್ತಿದ್ದೇನೆ. ನಮ್ಮೆಲ್ಲರ ದೃಷ್ಟಿ ಕೋನವೂ ಸಹ ಒಂದೇ ರೀತಿಯಲ್ಲಿರಬೇಕು ಯೋಗ್ಯ ಕೆಲಸಗಳನ್ನು ಮಾಡಿದಾಗ ಸರ್ಕಾರಕ್ಕೆ ನಾವು ಸರಿಯಾದ ಪ್ರೋತ್ಸಾಹ ಕೊಡಬೇಕು.

ಕೊನೆಯದಾಗಿ, ನಾನು ಈಗ ಕೊಟ್ಟಂಥ ಸಲಹೆಗಳನ್ನು ಸರ್ಕಾರದವರು ಲಕ್ಷ್ಯಕ್ಕೆ ತೆಗೆದುಕೊಂಡು ಸ್ಲಂಗಳ ಸಮಸ್ಯೆ ಕೇವಲ ಬೆಂಗಳೂರಿನಲ್ಲಿಯೇ ಮಾತ್ರವಲ್ಲ. ಎಲ್ಲಾ ಕಡೆಯಲ್ಲಿ ಇದೆಯೆಂದು ತಿಳಿದು

ಕೊಂಡು ಈ ಕೊಳಚೆ ಪ್ರದೇಶಗಳನ್ನು ನಿರ್ಮೂಲನ ಮಾಡತಕ್ಕ ವ್ಯವಸ್ಥೆಯನ್ನು ಕೈಗೊಳ್ಳಬೇಕು ಎಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಷಫೀ ಅಹಮದ್ (ತುಮಕೂರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ರಾಮದೇವ್ ಅವರು ತಂದಿರುವ ನಿರ್ಣಯ ಮಹತ್ವದ್ದು ಎಂದು ಹೇಳಿ ಅದಕ್ಕಾಗಿ ಅವರನ್ನು ಅಭಿನಂದಿಸಿ, ಕೊಳಚೆ ಪ್ರದೇಶಗಳ ಬಗ್ಗೆ ಎರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕರ್ನಾಟಕ ದೇಶದಲ್ಲಿ ಈ ಕೊಳಚೆ ಪ್ರದೇಶಗಳು ಸೊಳ್ಳೆಗಳ ಬ್ರೀಡಿಂಗ್ ಸೆಂಟರ್ಸ್ ಆಗಿವೆ ಎಂದು ಹೇಳಿದರೆ ಅದು ತಪ್ಪಾಗಲಿಕ್ಕಿಲ್ಲ. ಈ ಎಲ್ಲಾ ಕೊಳಚೆ ಪ್ರದೇಶಗಳನ್ನು ಸರ್ಕಾರದವರು ಡಿಕ್ಲೇರ್ ಮಾಡಿದ್ದಾರೆಯೇ ? ಡಿಕ್ಲೇರ್ ಮಾಡಿದ್ದರೆ, ಸರ್ಕಾರದಿಂದ ಸಿಗಬೇಕಾದ ಸೌಲಭ್ಯಗಳನ್ನು ಸರಿಯಾದ ರೀತಿಯಲ್ಲಿ ಅಧಿಕಾರವರ್ಗದವರು ಉಪಯೋಗ ಮಾಡುತ್ತಿಲ್ಲವೆನ್ನುವುದನ್ನು ನಾವು ಹೇಳಬೇಕಾಗಿದೆ ಮುನಿಸಿಪಾಲಿಟಿಯವರು ಯಾವುದಾದರೂ ಟ್ಯಾಕ್ಸನ್ನು ಎಕ್ಸೆಮ್ಟ್ ಮಾಡಿದರೆ ಅದು ಕಾರ್ಯಗತವಾಗಬೇಕಾದರೆ ವರ್ಷಾನುಗಟ್ಟಲೆ ಹಿಡಿಯುತ್ತದೆ. ಸರ್ಕಾರದವರು ಈ ಸ್ಲಂಗಳನ್ನು ಸುಧಾರಣೆ ಹಾಗೂ ನಿರ್ಮೂಲನ ಮಾಡುವುದಕ್ಕೋಸ್ಕರ ಒಂದು ಸ್ಲಂ ಬೋರ್ಡನ್ನು ಏನೋ ಮಾಡಿದರು, ಮತ್ತು ಅಲ್ಲಿಯ ಜನರ ಕಷ್ಟಸುಖಗಳನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡಿದರು, ಆದರೆ ಅದರ ಕಾರ್ಯ ಅಷ್ಟು ಸಮರ್ಪಕವಾಗಿ ನಡೆದಿಲ್ಲ. ತುಮಕೂರು ಮುನಿಸಿಪಲ್ ಕೌನ್ಸಿಲ್‌ನಿಂದ ಕಳುಹಿಸಿದಂಥ ಪ್ರಪೋಸಲ್ಸ್ ಇನ್ನೂ ಕಾರ್ಯಗತವಾಗದೆ ಸರ್ಕಾರದಲ್ಲಿಯೇ ನಿಂತಿದೆ. ಸರ್ಕಾರದವರು ಇದರ ಬಗ್ಗೆ ಗಮನಕೊಟ್ಟು ಅವರು ಕೊಟ್ಟಿರುವ ಪ್ರಪೋಸಲ್ಲನ್ನು ಕಾರ್ಯಗತ ಮಾಡುವಂತೆ ಅನುಕೂಲ ಮಾಡಬೇಕಾಗಿದೆ. ಏಕೆಂದರೆ, ಅವರ ಸಾಮಾನ್ಯ ಕುಂದು ಕೊರತೆಗಳು ಎಂದರೆ, ಕುಡಿಯುವ ನೀರು ಇಲ್ಲದಿರುವುದು, ಲೈಟು ಇಲ್ಲದಿರುವುದು ಮಕ್ಕಳ ವಿದ್ಯಾಭ್ಯಾಸಕ್ಕೆ ಸರಿಯಾದ ಪಾಠಶಾಲೆಗಳು ಇಲ್ಲದಿರುವುದು ಆಗಿವೆ ಇವುಗಳನ್ನು ಸುಧಾರಣೆ ಮಾಡಲು ಸರ್ಕಾರದವರು ಸಾಕಷ್ಟು ಗ್ರಾಂಟ್ ಕೊಟ್ಟು ಎಲ್ಲಾ ಸೌಲಭ್ಯಗಳನ್ನು ಕೊಟ್ಟರೆ ಸ್ಲಂಗಳ ಸಂಖ್ಯೆಯೂ ಕಡಿಮೆಯಾಗುತ್ತದೆ. ಬಡವರ ಮಕ್ಕಳಿಗೆ ಹತ್ತಿರದಲ್ಲಿಯೇ ಪಾಠಶಾಲೆಗಳನ್ನು ಮಾಡಿ ಅವರಿಗೆ ವಿದ್ಯಾ ಸೌಕರ್ಯವನ್ನು ಮಾಡಿಕೊಡಬೇಕು. ಗ್ರಾಮಾಂತರಗಳಲ್ಲಿ ಜನತಾ ಹೌಸಿಂಗ್ ಮತ್ತು ಹುಡ್ಕೋಸ್ಕೀಂನಲ್ಲಿ ಮನೆಗಳನ್ನು ಕಟ್ಟುವ ವ್ಯವಸ್ಥೆಯನ್ನು ಮಾಡಬೇಕು.

ಆದುದರಿಂದ ನಾನು ಹೇಳುವುದೇನೆಂದರೆ ಈ ಲ್ಯಾಂಡ್ ಆಕ್ವಿಸಿಷನ್‌ನಲ್ಲೇ ಎಮರ್ಜೆನ್ಸಿ ಕ್ಲಾಸ್ ಅನ್ನುವುದನ್ನು ಉಪಯೋಗಿಸಿಕೊಂಡು ಈ ಕೆಲಸವನ್ನು ಅತಿ ಶೀಘ್ರವಾಗಿ ಮಾಡಿದರೆ ಮಾತ್ರ ಬಡ ಜನಗಳಿಗೆ ಸೈಟುಗಳನ್ನು ಕೊಟ್ಟು ಮನೆಗಳನ್ನು ಕಟ್ಟಿಕೊಡುವುದಕ್ಕೆ ಸಾಧ್ಯವಾಗುತ್ತದೆ ಎಂದು ಹೇಳುತ್ತೇನೆ. ಮತ್ತು ಈ ದಿವಸದ ಸರ್ಕಾರದ ೨೦ ಅಂಶಗಳ ಕಾರ್ಯಕ್ರಮದ ಪ್ರಕಾರ ಮನೆ ಇಲ್ಲದೇ ಇದ್ದವರಿಗೆ ಮನೆ ಕಟ್ಟಿಕೊಡಬೇಕು ಎನ್ನುವ ಒಂದು ನಿಯಮ ಏನು ಇದೆ ಅದು ಈ ಎಮರ್ಜೆನ್ಸಿ ಕ್ಲಾಸ್ ಅಂತ ಇರುವುದನ್ನು ಉಪಯೋಗಿಸಿಕೊಂಡರೆ ಮಾತ್ರ ಕಾರ್ಯಗತ ಮಾಡಬಹುದು. ತಮಗೆ ಹೇಳಬೇಕಾದರೆ ಬಹುಮಟ್ಟಿಗೆ ಮುನಿಸಿಪಾಲಿಟಿಗಳಿಗೆ ಈ ಬಗ್ಗೆ ಸರ್ಕಾರದವರು ಏನು ಗ್ರಾಂಟ್ ಕೊಡುತ್ತಾರೋ ಅದನ್ನು ಸರಿಯಾಗಿ ಉಪಯೋಗ ಮಾಡುತ್ತಾ ಇಲ್ಲ ಎಂದು ಹೇಳುತ್ತೇನೆ. ಮೊಟ್ಟಮೊದಲು ಹಳೇ ಸಿಟಿಗಳು ಏನು ಇದ್ದುವು ಅವು ಹಾಗೆಯೇ ಮುಂದುವರೆದುಕೊಂಡು ಬರುತ್ತಾ ಇದೆ ಅದು ಅಭಿವೃದ್ಧಿಯಾಗುತ್ತಾ ಇಲ್ಲಾ. ಈ ದಿವಸ ಏನಾದರೂ ಸಿಟಿಗಳ ಪಕ್ಕದಲ್ಲಿ ಲ್ಯಾಂಡ್ ಅಕ್ವಿಸಿಷನ್ ಮಾಡುವುದಕ್ಕೆ ಹೋದರೆ ತಕ್ಷಣ ಕೋರ್ಟಿಗೆ ಹೋಗಿ ಇಂಜಕ್ಷನ್ ತಂದುಬಿಡುತ್ತಾರೆ. ಆದುದರಿಂದ ಅವರಿಗೆ ತಕ್ಷಣ ಲ್ಯಾಂಡ್ ಸಿಕ್ಕುವುದಿಲ್ಲ. ಆದುದರಿಂದ ನಾನು ಮೊದಲೇ ಹೇಳಿದ ಹಾಗೆ ಮನೆ ಇಲ್ಲದೇ ಇದ್ದವರಿಗೆ ಸೈಟುಗಳನ್ನು ಕೊಡಬೇಕಾದರೆ ಎಮರ್ಜೆನ್ಸಿ ಕ್ಲಾಸ್ ಉಪಯೋಗವಾಗುತ್ತದೆ ಎಂದು ಹೇಳುತ್ತೇನೆ,

ಇನ್ನೊಂದು ವಿಚಾರ ಏನೆಂದರೆ ಸ್ಲಮ್ಸ್ ಬೋರ್ಡ್ ನೆರವಿನಿಂದ ಈ ಪ್ರದೇಶಗಳಲ್ಲಿ ಬೋರ್‌ವೆಲ್ಸ್‌ಗಳನ್ನು ತೆಗೆದು ಅಲ್ಲಿಗೆ ನೀರಿನ ಅನುಕೂಲತೆಯನ್ನೂ ಮತ್ತು ದೀಪದ ಸೌಲಭ್ಯಗಳನ್ನೂ ಕೂಡ ಮಾಡಿಕೊಡುವುದಕ್ಕೆ ಒಂದು ಯೋಜನೆಯನ್ನು ಹಾಕಿಕೊಂಡು ಅದರ ಬಗ್ಗೆ ಕಾರ್ಯಗತ ಮಾಡುವುದಾದರೆ ಈ ಸ್ಲಮ್ಸ್ ಏರಿಯಾದಲ್ಲಿರತಕ್ಕಂಥಾ ಜನರ ತೊಂದರೆ ನಿವಾರಣೆಯಾಗುತ್ತದೆ ಎಂದು ಹೇಳಬಯಸುತ್ತೇನೆ. ಮತ್ತು ಇನ್ನೊಂದು ವಿಚಾರ ಏನೆಂದರೆ ಈ ಜನರಿಗೆ ಮತ್ತು ಹರಿಜನ–ಗಿರಿಜನ ಮಕ್ಕಳಿಗೆ ಸ್ಲಮ್ಸ್ ಏರಿಯಾದಲ್ಲಿ ವಾಸ ಮಾಡತಕ್ಕಂಥಾ ಬಡ ಮಕ್ಕಳಿಗೆ ೧೮ ಪರ್ಸೆಂಟ್ ಗ್ರಾಂಟ್ ಏನು ಕೊಡುತ್ತೀರೋ ಅದನ್ನು ನೇರವಾಗಿ ಕೊಟ್ಟು ಅವರಿಗೆ ಬೇಕಾದಂಥಾ ಬಟ್ಟೆ ಮತ್ತು ವಿದ್ಯಾಭ್ಯಾಸಕ್ಕೆ ಬೇಕಾದಂಥಾ ಪುಸ್ತಕಗಳು ಮತ್ತು ಇತರೇ ವ್ಯವಸ್ಥೆಗಳು ಏನು ಇವೆ ಇದನ್ನೂ ಸಹ ಕೊಟ್ಟು ಅನುಕೂಲ ಮಾಡಿಕೊಟ್ಟರೆ

ಒಳ್ಳೆಯದು ಎಂದು ಹೇಳುತ್ತೇನೆ. ಕೊನೆಯದಾಗಿ ಮಾನ್ಯ ಅಧ್ಯಕ್ಷಿಣಿಯವರು ನನಗೆ ಈ ಬಗ್ಗೆ ಎರಡು ಮಾತುಗಳನ್ನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

SRI A. LAKSHMISAGAR Chickpet).—Madam, I speak on this subject with a feeling of anger, disgust and disappointment at the attitude of the successive Governments in tackling the ever growing menacing problem which may engulf the entire city of Bangalore ints flames if it is not takled in time effectively and completely.

I was a member of Bangalore Muncipal corporation. I have personal knowledge of the manner in which the slums are coming up almost every day, every hour and the inability of the Government to tackle t is monace. In the name of the abolition of slums, new slums are coming up. This is the tragedy of the situation. The Ministers and the party Leaders are mainly responsible for the new slums coming up in Bangalore City. Let me put this point very bluntly. If they have courage, if they have political will, let them look into this matter, and Prevent new slums coming up.

ಶ್ರೀ ಐ. ಪಿ. ಡಿ ಸಾಲಪ್ಪ.—ಮಾನ್ಯ ಸದಸ್ಯರು ಈ ಕೊಳಚೆ ಪ್ರದೇಶಗಳು ಹುಟ್ಟುವುದಕ್ಕೆ ಮಾನ್ಯ ಮಂತ್ರಿಗಳು ಮತ್ತು ಆ ಪಕ್ಷದವರೇ ಕಾರಣರು ಎಂದು ಹೇಳುತ್ತಾರೆ. ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುವುದೇನೆಂದರೆ ಬೆಂಗಳೂರಿನಲ್ಲಿ ಈ ಕೊಳಚೆ ಪ್ರದೇಶಗಳು ಏನು ಇವೆ ಅಲ್ಲಿಗೆ ಯಾವ ಅಧಿಕಾರಿಯನ್ನಾಗಲಿ, ಮತ್ತೆ ಯಾರಾದರೂ ಸರಿ ಅಲ್ಲಿಗೆ ಕಳುಹಿಸಿ ನೋಡಿಸಲಿ. ಆ ಸ್ಲಂಸ್‌ಗಳಲ್ಲಿ ಹಾರಾಡುವ ಧ್ವಜ ನಮ್ಮದೊಂದೇ ಆಗಿದ್ದರೆ ಅದಕ್ಕೆ ನಾವು ಜವಾಬ್ದಾರರು ಎನ್ನುವುದನ್ನು ಒಪ್ಪಿಕೊಳ್ಳೋಣ. ಆ ಸ್ಲಂಸ್‌ಗಳಲ್ಲಿ ಹಾರಾಡುವ ಧ್ವಜಗಳು ನಮ್ಮದೊಂದೇ ಅಲ್ಲ ಬೇರೆ ಬೇರೆ ಇತರೇ ಪಕ್ಷಗಳವರದ್ದೂ ಕೂಡ ಧ್ವಜಗಳು ಹಾರಾಡುತ್ತಿವೆ. ಈ ರೀತಿ ಇರುವುದರಿಂದ ಈ ಸ್ಲಂಸ್‌ಗಳನ್ನು ಬೆಳೆಸುವುದಕ್ಕೆ ಬೇರೆ ಬೇರೆ ಇತರೇ ಪಕ್ಷಗಳವರೂ ಕೂಡ ಜವಾಬ್ದಾರರಾಗಿದ್ದಾರೆ ಅನ್ನುವುದನ್ನು ಈ ಸಂದರ್ಭದಲ್ಲಿ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಈ ಸ್ಲಂಸ್‌ಗಳನ್ನು ಯಾರ್ಯಾರು ಯಾವ್ಯಾವ ರೂಪದಲ್ಲಿ ಬೆಳೆಸಿದ್ದಾರೆ ಅನ್ನುವ ವಿಚಾರ ಮಾನ್ಯ ಲಕ್ಷ್ಮೀಸಾಗರ್‌ರವರಿಗೆ ಚೆನ್ನಾಗಿ ಗೊತ್ತಿದೆ. ಆದರೂ ಸಹ ಅವರೂ ವಿನಾಕಾರಣವಾಗಿ ಸರ್ಕಾರದವರ ಮೇಲೆ ನಿಂದನೆ ಮಾಡುವುದನ್ನು ನಾನು ಒಪ್ಪುವುದಿಲ್ಲ. ಆದುದರಿಂದ ಈ ಬಗ್ಗೆ ಮಾನ್ಯ ಸದಸ್ಯರು ಹೇಳಿದ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ

SRI A. LAKSHMISAGAR.—There was neither a point nor an order. I only pity my friend Sri Salappa.

Madam, as I said in the name of abolition of slums and clearance of slums, new slums are coming up and the number is growing. This is an undeniable fact. This fact appears on the face of everyone who has knowledge of the development of slums in Bangalore City and of the Government incurring huge sums of mony to ameliorate the conditions of slum dwellers in Bangalore City and the expenditure so incurred has not touched even the fringe of the problem. They do not seem to have looked into the size of the problem I know as a matter of fact the Corporation has spent crores of rupees and most of these monies have been either

gone to the packets of contractors, middlemen and other persons who are supposed to take up the work of providing civic amenities from time to time to the slum dwellers and most of these monies have been spent wastefully and it has not improved the condition of the slums at all. There are three types of slums. Slums on private lands, slums on corporation land's slums on Government lands and slums on the lands of Bangalore Development Authority and it is commonly felt that the slums are the places where the weaker section of the society live mostly. That is not the correct situation. I have had occasion more than once to have a personal knowledge and check up this situation. There are all types of people in slums. Well to do people, middle class people and poor people are there and slum is a mini-world. It has almost all people including the poor people. Slum is a place where everything is happens—prostitution, smuggling and all the evils that you find in society can be glaringly seen if anybody wanted to hear and see them. I would like to know what steps the Government has taken to tackle this problem. The officials are helpless. They simple throw up their hands saying are helpless if they want to clear the slums. In case if they go ahead with the work of clearing the slums, immediately there will be phone calls to the Ministers and to the party bosses. Thus the hands of the Corporation officials are tied up to proceed further in abolishing the slums that are coming up day out. Don't ask your officials when you call them for a meeting. Please ask them privately about this situation. I know they are helpless. The officials at the lower level are physically prevented from taking action against clearance of new slums. They cannot do so. Police are not in a position to take action against them. The police cannot take action even with the help of the Corporation Officials I have personal knowledge some of instances at any rate in my constituency. To-day everybody, every party workmen speaks so loudly about the welfare of slum dwellers. But so far nothing has been done in the direction of solving the slum clearance problem in the City of Bangalore. According to the statistics Government has incurred huge sums of money and 3/4th of the total income of the Corporation has been spent towards slums and its improvements. Then grants have been given by the Central and State Governments to ameliorate the conditions of slums. All these things have been done in favour of slums But they have not said a word about the tax payer of Bangalore City and his difficulty. There are people permanently residing in Bangalore do not own a site or a building of their own Their applications for allotment of a site has not been considered on a priority basis. Everything is done in favour of slums. There are poor people living in Bangalore City.

11.00 A. M.

I have not been able to get a site. Sri Ramdev has also not been able to get a site. We have been here for more than 20-30 years. What have you done for the permanent residents of Bangalore permanent residents of Karnataka ? You give all and support to these people who have almost invaded every inch of Bangalore City and are creating all kinds of problems. It has become a veritable hell for the citizens of Bangalore, in this so-called beautiful garden city. What you have done ? I do not give very much credence to any party or any Minister in power. They are made of the same stuff, useless stuff. What has happened in the process ? The City Corporation has practically no vacant land left. Most of the private lands have been occupied by slum dwellers. It is a very profitable and lucrative business, and the Government and also the Corporation provide all amenties like lighting, water and other civic amenities to the detriment of the tax-payers in Bangalore City.

SRI Y. RAMAKRISHNA (Minister for Law and Parliamentary Affairs).--I would like to know from the hon. member whether he is opposing or supporting the resolution ?

SRI A. LAKSHMISAGAR.—You will come to know all about it.

SRI Y. RAMAKRISHNA.—I would like to know from the hon. member who has got facts, whether he is opposing or supporting the resolution ?

SRI A. LAKSHMI SAGAR.—What a puerile suggestion to come from an Hon'ble Minister. I am "damn ashamed" at the attitude of the Minister in putting the question. I stand by all the allegations against them. He was a Minister and he is a Minister now. He must own the sense of shame.

DEPUTY SPEAKER,—I would request the hon. member to take back his words, "damn shame".

SRI A. LAKSHMI SAGAR.—It is not unparliamentary ; I am aware what it means.

DEPUTY SPEAKER.—As far as I know, the hon. member is not supposed to speak so.

SRI A LAKSHMI SAGAR.—It is not unparliamentary. I am damn sure about it.

DEPUTY SPEAKER.—I do not want the hon. member to use the word "damn".

SRI A LAKSHMI SAGAR.—Madam, it is not unparliamentary, This increasing number of slums has created a number of problems,

the problem of sanitation, health, transportation, lighting, water supply, drainage and maintenance of civic amenities. If this trend of growth continues, Bangalore City will be a City of Slums and not a Garden City. To say that Bangalore is a Garden City is a misnomer. I can take any member of this House to any part of Bangalore City, of course not to Sadashivnagar or Highground area, because that is not real Bangalore, and he will see to his consternation that Bangalore City is gradually becoming, if not fact, a city of slums. This is a fact that he should see. There is no point in finding fault with me. I am burning with anger. Let him understand that he is also a permanent resident of Bangalore who has got his own sons and daughters. I am also a permanent resident of Bangalore City and I know the seriousness of the problem. It is with this feeling I am saying all this. I started by saying that I am speaking with a feeling of frustration, anger and disappointment. He fails to understand the import of what I started saying. I have warned him. He has never been serious. That is my allegation.

Then, about water problem I might say that the first stage of Cauvery Project would yield an additional supply of 30 Million Gallons of water. From Hesaraghatta G. T. G. Halli all told we have a total supply of 74 Million Gallons of water. This is not sufficient even today. The proposed II Stage of Cauvery Scheme would fetch 30 Million additional gallons of water after its completion by 1982 or 1983. At the manner and rate at which the slums are growing, I feel, and water problem will be a very serious problem and Bangalore will have to go without water within a short period, and it is this that should be borne in mind. Put a stop to all the new slums that are coming up if you have the courage. The other Governments have done it. The Congress Governments have done it. I say it because the Maharashtra Government has been able to put a stop to the new slums. They have an Act which has teeth. Our Slum Clearence Board has no teeth to fight. I want the Hon'ble Minister to understand this.

Some Construction Companies have moved into Bangalore City and a number of multi-storeyed buildings are coming up. I do not know whether the Corporation officials have been able to look into this. I am glad that the Chief Engineer of the Corporation and also the Corporation Commissioner are here. Licences have been granted to these Companies, who are putting up multi-storeyed buildings in Bangalore City. One such company has come up in Gandhinagar where I am residing. These multi-storeyed buildings are coming up like mushrooms and one single flat of 8 to 9 Square costs not less than Rs. 1,75,000. For whose benefit these multistoreyed buildings

are coming up in Bangalore City? A number of incidental and consequential results would follow from the construction of these buildings in Bangalore and the City Corporation will not be in a position to tackle this problem if a serious look is not given immediately.

The ramnifications of the entire sordid dealings in these slum matters hinge only on one point, *viz*, that the Government of the day must have the political will to put an end to these slums. When Sri Srikantaiah was the Municipal Administration Minister. for every thing he said 'Yes' ; but he did nothing. I wish him to become the Municipal Administration Minister again, but with one condition that he must act.

SRI P. RAMDEV.—Sri Dharam Singh is doing good work. Let him continue it.

SRI A. LAKSHMISAGAR.—Then, Madam, political will is awfully lacking in tackling this problem is the sum total of the problem which the Government must be able to see through. The Bombay Government and the Madras Government, particularly the Bombay Government has come up with a piece of legislation which is wholesome. They have created a Monitoring Cell with all facilities like Radio and other tele-communications which monitor immediately the moment a new slum comes up and it is demolished without any hitch or hindrance I want such a law should be brought forward ; As Mr. Bommai said at the very ou set, we are going to support wholesale any stringent measure which would eliminate the slums. Otherwise, what will be the situation in Bangalore City? The permanent residents of Bangalore and the permanent residents of Karnataka will be in a hopless minority in Bangalore City. Tensions are already building up ; Political tensions are already building up and an Assam type of agitation is being publicly and openly talked about by the citizens of Bangalore who are burning with anger that they are being subjected to and being relegated to the position of the minorities in Bangalore City. This is a very dangerous situation and a dangerous situation in the capital City of Bangalore. I want the Hon Ministers and the entire Cabinet to be aware of this. They are also to be exploded. Let them also be aware of it. Let them unb rs and the seriousness of the problem. All of them will be wiped out politically or they will be at the mercy of these slum-dwellers for political patronage and political sustenance. This is the real situation. Let them understand it.

Madam Speaker, there are so many aspects of the matter. This is a very difficult problem. I understand ; but we have got to begin

somewhere and somehow. It has already been said by my friends. I do not want to repeat and repeat at length. The only thing the Government should do is to strengthen the hands of the officials even within the existing framework of the laws. Give them all powers they want and see that the slums do not come up. Then, come up with a piece of legislation which would give sufficient powers to the officials and other members of the enforcement staff to see that the slums do not come up in any part of the Bangalore City. Most of the problems of the Bangalore City like sanitation, health, drainage, motor transportation and other means of transportation would be solved if you contain the new slums coming up. It will be your endeavour. All that I can say ; I can shout because this is a ventilating chamber. I can shout and I cannot do anything more than that that I have done and I have been doing. Madam Speaker, I want this Minister to take up this question and solve it on a permanent basis. The credit will be yours. I don't want any credit for myself.

With these words, I whole-heartedly support the resolution moved by my friend Sri P. Ramdev.

Thank you.

† SRI P. K. RANGANATHAN (Shantinagar).—Madam Dy. Speaker, My hon. Friends have already spoken about the conditions of slums in Bangalore City. The slums are on the Corporation land or in the BDA land or in private lands. Slums are also there on the Government lands. While supporting the resolution of Sri Ramdev, I would like to give some suggestions. The point is, how for we have provided civic amenities to the slum-dwellers: For the last so many years, all political parties, whether it be Congress Party or Communist Party, are entirely depending upon the people living in slum areas mostly SCs and STs for the election purpose and once the election is over nobody goes to slum areas. As stated by Sri A Lakshmi Sagar, it is very difficult for the Government to solve this problem, because our legislation has not given sufficient powers to the Officers of the Corporation or B. D. A. or the Slum Clearance Board to act vigorously. I know there is a Slum Clearance Board. It is the look-out of the Slum Clearance Board to see that no new slums are coming up. The problem is, supposing the Chairman of the Slum Clearance Board or B. D. A. or the Commissioner of the Corporation, try to demolish certain unauthorised slums which have come up, then immediately, the slum-lords who collect money from the slum dwellers either in the name of Indira Gandhi Slum, Sanjay Gandhi Slum or Gundu Rao Slum, will go to concerned Minister and

see that a telephonic message is sent to the Commissioner of the Corporation or the Chairman of the B. D. A. or the Slum Clearance Board not to disturb those people.

The Slum Clearacne Board has to provide all amenities to the old slums and see that no new slum comes up. But, during the course of taking action by the concerned Authorities, some M L. As or M. Ps. or somebody who has got political influence meet the concerned Minister or the Chief Minister and see that the action proposed to be taken by the Authorities is stopped We should see that nobody interferes with the action that the Commissioner of the Corporation or the Chairman of the BDA or Slum Clearance Board takes.

Secondly, we have got certain programmes for the benefit of these people. When our Late President of India, Sri V. V. Giri was here, he had a programme. Once in a month, he used to go round the slums and see that the City was kept clean. He used to go along with the Officers and Ministers. On account of his personal visit to slums and different parts of the City, the Officers were forced to take proper action in this regard We have to take action to see that the civic amenities are provided to the existing slum dwellers. Madam Speaker, during election period, we have promised that we would give sites, we would provide all amenities like new type of latrines, bath rooms etc., but after the elections are over, nobody goes there. Now I request the Government to take drastic action against those people who are creating new slums.

Whether it is the Government or private agency, MLA or MLC, whoever he may be, stringent action should be taken aginst such people who support the growth of new slums. Sir, in Belgaum, the Corporation Commissioner and the Deputy Commissioner have taken up new schemes under 18% programme. But, here in Bangalore. I do not know, whether 18% budget is being used on slum clearance and other programmes. I think they have not used this 18% budget properly and it is a matter to be thought over. Particularly in slums if you could provide a small house with one light tile, one bulb, one hall and one plug, it would be sufficient. They do not ask you to provide big houses. In other States they have constructed beautiful community halls etc,, for these people, but here we have to do some thing to give more facilities. Therefore, I request the Minister concerned to visit slums along with the officers of the slum boards, Corporation, to see that the officers take more interest in providing amenities to these people. Another thing is that, whenever the Corporation or Slum Clearance Board or BDA proposes to take action immediately the slum lords/who are interested in keeping slums for their own benifits will go to the concerned Minister or MLA or MLC

or MP and bring pressure to stop the proposed action. Therefore, I request the Government to punish those persons who bring political pressure to prevent officers from taking action. I request the Government to direct the politicians not to interfere when the officers take action. The Government should think twice before interfering in the action to be taken by the officers. For instance, near Lalbagh the Slum Clearance Board, very recently was about to a particular slum and they wanted the Minister to inagurate a new scheme. In the meantime there was an order from the High Court staying the clearance operation. All these things are being done by slum lords. I agree that we must give more civic amenities to the people living in slums. Give them more facilities. Perhaps our on Minister might have visited so many slums and he also knows the fate of these slum dwellers. We go to the slum during elections to get votes. That is a different matter. What I want to say is that, the same enthusiasm the same promises must be carried out after the elections are over. We must take action to give them amenities. No doubt, as Mr. Sagar has said that the Bangalore City has dearth of water supply and slums are growing up. We cannot give them all facilities. But, such of those slums which are registered in the Corporation, in the BDA or slum Clearance Board must be given all facilities. We have certain programmes like environmental or developmental programmes for the beneifit of these slum dwellers, We have to implement all those programmes. Slum dwellers require hardly a tap, a latrine, a bath room etc., They do not require asphalted or chipcarpeted roads. I once again request the Government to provide basic amenities to slum dwellers. While supporting the resolution, I request the Government that speedy action should be taken to ameliorate the conditions of the slum dwellers. Thank you.

† ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಅಧ್ಯಕ್ಷರೇ, ಈ ಕೊಳಚೆ ಪ್ರದೇಶಗಳ ನಿರ್ಮೂಲನದ ಬಗ್ಗೆ ಮಾನ್ಯ ಸದಸ್ಯರುಗಳು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ, ಅವರು ಏನು ಹೇಳಿದ್ದಾರೆ ಅದನ್ನು ಪುನಃ ನಾನು ಹೇಳಲಿಕ್ಕೆ ಹೋಗುವುದಿಲ್ಲ. ಆದರೆ ನಾನು ೧೯೭೦ನೇ ಇಸವಿ ಯಲ್ಲಿ ಇದೇ ಖಾತೆಯ ಮಂತ್ರಿಯಾಗಿದ್ದಾಗ ಕೊಳಚೆ ಪ್ರದೇಶಗಳನ್ನು ನಿರ್ಮೂಲ ಮಾಡತಕ್ಕಂಥಾದ್ದು ಮತ್ತು ಕೊಳಚೆ ಪ್ರದೇಶಗಳ ಸ್ಥಳದಲ್ಲಿ ನಿರ್ಮೂಲ ಮಾಡಿದ ನಂತರ ಅದನ್ನು ಅಭಿವೃದ್ಧಿ ಮಾಡತಕ್ಕಂಥ ವಿಚಾರದಲ್ಲಿ ಸಾಕಷ್ಟು ಗಮನ ಕೊಟ್ಟಿದ್ದೆ ಎನ್ನುವುದು ತಮ್ಮೆಲ್ಲರಿಗೂ ಮನವರಿಕೆಯಾಗಿರಬೇಕು. ನಾನು ಈ ಖಾತೆಯನ್ನು ವಹಿಸಿಕೊಂಡಾಗ ೧೩೦ ಕೊಳಚೆ ಪ್ರದೇಶಗಳಿದ್ದವು. ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಮಾನ್ ನರಸಿಂಹಮೂರ್ತಿಯವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಮಾಡಿದ್ದಾರೆ. ಅವರ ಪ್ರಕಾರ ಈಗ ನಾನೂರಕ್ಕಿಂತ ಮೇಲೆ ಹೋಗಿವೆ ಎಂದಾಯಿತು. ಅಂದರೆ ಸಿಟಿಯಲ್ಲಿರತಕ್ಕವರು, ಕಾರ್ಪೊರೇಷನ್ ಅಧಿಕಾರಿಗಳು, ಟ್ರಸ್ಟ್‌ಬೋರ್ಡ್ ಅಧಿಕಾರಿಗಳು ಇದಕ್ಕೆ ಅವಕಾಶ ಮತ್ತು ಉತ್ತೇಜನ ಕೊಟ್ಟಿದ್ದಾರೆಂದು ಇದರಿಂದ ಸ್ಪಷ್ಟವಾಗಿ ಅರ್ಥವಾಗುತ್ತದೆ. ಕಾರ್ಪೊರೇಷನ್ನಿನ ವ್ಯವಹಾರಗಳನ್ನು ನಿರ್ವಹಿಸತಕ್ಕ ಜನ ಅಧಿಕಾರಿಗಳು ಇದರ ಕಡೆ ಗಮನ ಕೊಟ್ಟಿಲ್ಲ, ಇದನ್ನು ತಡೆಯಲಿಕ್ಕೆ ಗಮನಕೊಟ್ಟಿಲ್ಲ : ಕೊಳಚೆ ಪ್ರದೇಶ ಗಳು ಬಹಳ ವರ್ಷಗಳಿಂದ ಏನಿವೆ, ಅಲ್ಲಿರತಕ್ಕ ಜನಗಳಿಗೆ ಸಹಾಯ ಮಾಡಿ ಅವರಿಗೆ ವಸತಿಗಳನ್ನು ಒದಗಿಸಿಕೊಡುವ ವಿಚಾರದಲ್ಲಿ ಇವರು ಗಮನಕೊಟ್ಟಿಲ್ಲ ಎಂದು ಸ್ಪಷ್ಟವಾಗಿ ಅರ್ಥವಾಗುತ್ತದೆ. ಸರ್ಕಾರಿ

ಜಮೀನುಗಳಲ್ಲಿರತಕ್ಕ ಕೊಳಚೆ ಪ್ರದೇಶಗಳಲ್ಲಿ ಬಹಳ ವರ್ಷಗಳಿಂದ ಇರತಕ್ಕವರಿಗೆ ಸೈಟುಗಳನ್ನು ಕೊಡಬೇಕು ಎಂದು ಕಾರ್ಯಕ್ರಮ ಹಾಕಿಕೊಂಡು ಕೊಟ್ಟಿದ್ದೇವೆ.

(ಶ್ರೀ ಎಚ್. ಟಿ. ಕೃಷ್ಣಪ್ಪನವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಆಮೇಲೆ ಕಾರ್ಪೊರೇಷನ್ ಜಮೀನಿನಲ್ಲಿರತಕ್ಕ ಕೊಳಚೆ ಪ್ರದೇಶಗಳಲ್ಲಿರತಕ್ಕವರಿಗೆ ನಿವೇಶನಗಳನ್ನು ಕೊಟ್ಟು ಕೊಳಚೆ ಪ್ರದೇಶಗಳನ್ನು ನಿರ್ಮೂಲ ಮಾಡಬೇಕು ಎಂದು ಪ್ರಯತ್ನ ಪಟ್ಟಿದ್ದೇವೆ. ಆದರೆ ಖಾಸಗಿ ಜಮೀನಿನಲ್ಲಿರತಕ್ಕ ಕೊಳಚೆ ಪ್ರದೇಶಗಳಲ್ಲಿ ಈ ರೀತಿ ಮಾಡುವುದಕ್ಕೆ ಬಹಳ ಕಷ್ಟವಾಗಿರಬೇಕು. ಅದನ್ನು ಅಕ್ವೈರ್ ಮಾಡಲೇಬೇಕಾಗುತ್ತದೆ. ಆ ಒಂದು ಉದ್ದೇಶದಿಂದ ಸ್ಲಂ ಬೋರ್ಡ್ ಮಾಡಬೇಕು ಎಂದು ನಾನು ಮಂತ್ರಿಯಾಗಿದ್ದಾಗ ಮಾಡಿದೆ. ಈಗ ಅದನ್ನು ಏಕೆ ಮಾಡಿದೆ ಎಂದು ವ್ಯಸನವಾಗುತ್ತಿದೆ. ಅವತ್ತಿನಿಂದ ಇವತ್ತಿನವರೆಗೆ ಅದರ ವ್ಯಾಪ್ತಿಗೆ ಸೇರಿದ ಹಾಗೆ ಯಾವ ಅಧಿಕಾರವನ್ನೂ ಕೂಡ ಸರಿಯಾಗಿ ಉಪಯೋಗಿಸಲಿಲ್ಲ, ಹಣವೂ ಇಲ್ಲ, ಮಾಡುವುದಕ್ಕೆ ತಾಕತ್ತೂ ಇಲ್ಲ, ಇವರಿಗೆ ಸಾಕಷ್ಟು ಸಿಬ್ಬಂದಿಯೂ ಇಲ್ಲ ಸ್ಲಂ ಬೋರ್ಡ್ ಹಣವಿಲ್ಲದೆ ಏನೇನು ಕೆಲಸ ಸಾಧನೆ ಮಾಡಿರತಕ್ಕಂಥಾದ್ದು ಇಲ್ಲವೇ ಇಲ್ಲ. ಜಮೀನು ಅಕ್ವೈರ್ ಮಾಡುವುದು, ನಿವೇಶನ ಮಾಡುವುದು, ಸರ್ಕಾರದಿಂದ ಅದಕ್ಕೆ ವಿನಾಯಿತಿ ಮಾಡುವುದು. ಯಾರ್ಯಾರು ಮಂತ್ರಿಯಾಗಿದ್ದರು ಅವರು ವಿನಾಯಿತಿ ಮಾಡುವುದು. ವಿನಾಯಿತಿ ಮಾಡುವಾಗ ಅವ್ಯವಹಾರವಾಗಲಿ, ವ್ಯವಹಾರವಾಗಲಿ ಮಾಡತಕ್ಕಂಥಾದ್ದು ಕಣ್ಣಿಗೆ ಬಿದ್ದಿದೆ.

೧೧–೩೦ ಎ. ಎಂ.

ಈ ಸ್ಲಂ ಬೋರ್ಡ್ ಮಾಡಬಾರದಿತ್ತು ಎಂದು ನಾನು ಇವತ್ತಿನ ದಿವಸ ವ್ಯಸನ ಪಡುತ್ತಿದ್ದೇನೆ. ಕಾರಣವೇನೆಂದರೆ ಸುಮಾರು ಒಂದೂವರೆ ಕೋಟಿ ರೂಪಾಯಿಗಳನ್ನು ಅದಕ್ಕಾಗಿ ಖರ್ಚು ಮಾಡಿದ್ದೇವೆ. ಆಗ ಟ್ರಸ್ಟ್ ಬೋರ್ಡಿನವರು ಮತ್ತು ಕಾರ್ಪೊರೇಶನ್ನಿನವರು ಮತ್ತು ಸರ್ಕಾರದವರು ಸೇರಿ ಏನು ಕೊಳಚೆ ಪ್ರದೇಶಗಳಿತ್ತು, ಅವುಗಳನ್ನು ನಿರ್ಮೂಲನ ಮಾಡಬೇಕೆಂದು ಹೇಳಿ ಬಹಳ ಪ್ರಯತ್ನ ಮಾಡಿದ್ದೆವು. ಕೊಳಚೆ ಪ್ರದೇಶಗಳ ನಿರ್ಮೂಲ ಎಂದರೆ ಕೊಳಚೆ ಪ್ರದೇಶಗಳಲ್ಲಿರತಕ್ಕ ಗುಡಿಸಲುಗಳನ್ನು ಕಿತ್ತು ಹಾಕಿ ಆ ಸ್ಥಳಗಳಲ್ಲಿ, ಹೊಸದಾಗಿ ಮನೆಗಳನ್ನು ಕಟ್ಟಿಸಿ ಕೊಡತಕ್ಕಂಥದ್ದು, ಸಣ್ಣ ಸಣ್ಣ ಮನೆಗಳನ್ನು ಕಟ್ಟಿಕೊಟ್ಟು ಅವರಿಗೆ ಕೊಡತಕ್ಕ ವ್ಯವಸ್ಥೆಯನ್ನು ಮಾಡತಕ್ಕದ್ದು. ಅಲ್ಲಿ ಗುಡಿಸಲಿನಲ್ಲಿರತಕ್ಕವರು ಯಾರು ಯಾರಿದ್ದಾರೆ ಅವರಿಗೆ ರಸ್ತೆಗಳನ್ನು ಆಗಲೀ, ದೀಪದ ವ್ಯವಸ್ಥೆಯನ್ನಾಗಲೀ, ನೀರಿನ ವ್ಯವಸ್ಥೆಯನ್ನಾಗಲೀ ಮತ್ತಿತರ ಎಲ್ಲಾ ಸೌಲಭ್ಯಗಳನ್ನೂ ಅವರಿಗೆ ಒದಗಿಸಿ ಕೊಡಬೇಕು ಎನ್ನತಕ್ಕ ಉದ್ದೇಶದಿಂದ ಒಂದೂವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಸಾಧನೆ ಮಾಡಿದ್ದೆವು. ಮಹಾ ಸಾಧನೆಯನ್ನೇ ಮಾಡಿದ್ದೇವೆ. ಬೇಕಾದರೆ ಮಾನ್ಯ ಮಂತ್ರಿಗಳವರು ಆ ಕೊಳಚೆ ಪ್ರದೇಶಗಳಿಗೆಲ್ಲಾ ಹೋಗಿ ಭೇಟಿ ಕೊಟ್ಟು ಬರಬಹುದು. ಆದುದರಿಂದ ಇದರಲ್ಲಿ ಮಾನ್ಯ ಮಂತ್ರಿಗಳವರು ಆಸಕ್ತಿ ವಹಿಸದೇ ಹೋದರೆ, ಅಧಿಕಾರಿಗಳು ಮಾಡುತ್ತಾರೆಂದು ನೀವು ನಂಬಿ ಕೂತುಕೊಳ್ಳಬೇಡಿ. ಅಧಿಕಾರಿಗಳಿಂದ ಯಾರು ಕೆಲಸ ತೆಗೆದುಕೊಳ್ಳಬೇಕು? ತಾವು ಕೆಲಸವನ್ನು ತೆಗೆದುಕೊಳ್ಳಬೇಕು. ಮಂತ್ರಿವರ್ಯರಾಗಿರತಕ್ಕವರು ಯಾರಿದ್ದಾರೆ ಅವರು ಇದರಲ್ಲಿ ಹೆಚ್ಚಿನ ಆಸಕ್ತಿ ವಹಿಸಿ ತೆಗೆದುಕೊಳ್ಳಬೇಕು, ಇದರಲ್ಲಿ ದೇಶಾಭಿಮಾನ ಇರಬೇಕು. ನಮ್ಮ ನಗರವನ್ನಿದೆ ಇಲ್ಲಿರುವ ಎಲ್ಲಾ ಕೊಳಚೆ ಪ್ರದೇಶಗಳನ್ನೆಲ್ಲಾ ನಿರ್ಮೂಲನ ಮಾಡಿ ಬಹಳ ಶುಭ್ರತೆಯಿಂದ ಇಟ್ಟುಕೊಳ್ಳಬೇಕು ಎನ್ನುವ ಆಸಕ್ತಿ ಇಲ್ಲದೇ ಹೋದರೆ ಏನೇನೂ ಕೆಲಸ ಮಾಡುವುದಕ್ಕಾಗುವುದಿಲ್ಲ. ಅಧಿಕಾರ ವರ್ಗದವರು ತಾವು ಹೇಳಿದಂತೆ ಕೇಳುತ್ತಾರೆ, ಅದೇ ರೀತಿ ಮಾಡುತ್ತಾರೆ, ಆದರೆ ಅವರೇ ಮಾಡುತ್ತಾರೆಂದು ಬಿಟ್ಟರೆ ಅವರು ಏನೂ ಮಾಡುವುದಿಲ್ಲ. ತಮಗೆ ಒಂದೇ ಒಂದು ಉದಾಹರಣೆ ಹೇಳಬೇಕೆಂದರೆ ಬೆಂಗಳೂರು ನಗರದಲ್ಲಿ ಬಿನ್ನಿಮಿಲ್ ಇದೆ. ಅದರ ಹಿಂದುಗಡೆ ಒಂದು ದೊಡ್ಡ ಕೆರೆ ಇದೆ. ಆ ಕೆರೆಯನ್ನು ಮುಚ್ಚಿಸಬೇಕೆಂದು ಹೇಳಿ ನಾವು ಹಿಂದೆ ಪ್ರಯತ್ನ ಮಾಡಿದೆವು. ಅಲ್ಲಿ ಕಾರ್ಪೊರೇಷನ್ನಿನವರು ಮುಚ್ಚಿಕೊಂಡು ಬರುತ್ತಿರುವ ಹಾಗೆಲ್ಲಾ ನಮ್ಮ ಶ್ರೀ ಪಿ. ಕೆ. ರಂಗನಾಥನ್‌ರವರು ಹೇಳಿದ ಹಾಗೆ ಅಲ್ಲಿ ಯಾರೋ ಈ ಸ್ಲಂ ಏಜೆಂಟ್ಸ್ ಅಂತ ಯಾರಿದ್ದಾರೆ ಅವರು ಅಲ್ಲಿ ಗುಡಿಸಲುಗಳನ್ನು ಹಾಕಿಸುತ್ತಿದ್ದಾರೆ. ಕೇವಲ ೫೦೦, ೬೦೦ ರೂ.ಗಳಿಗೆಲ್ಲಾ ಮಾರುತ್ತಿದ್ದಾರೆ. ಅಲ್ಲಿ ಕೆರೆಯನ್ನು ಮುಚ್ಚಿಕೊಂಡ ಹಾಗೆಲ್ಲಾ ಇವರು ಗುಡಿಸಲುಗಳನ್ನು ಕಟ್ಟಿಕೊಂಡು ಬರುತ್ತಿದ್ದಾರೆ. ತಾವು ದಯಮಾಡಿ ಅಲ್ಲಿಗೆ ಹೋಗಿ ನೋಡಿಕೊಂಡು ಬನ್ನಿ ಈಗಾಗಲೇ ೩೦೦, ೪೦೦ ಗುಡಿಸಲುಗಳನ್ನು ಕಟ್ಟಿದ್ದಾರೆ. ಇವು ಹೊಸದಾಗಿ ಒಂದೇ ತರವದ ಸಾಮಾನುಗಳನ್ನು ಉಪಯೋಗಿಸಿಕೊಂಡು ಕಟ್ಟಿರತಕ್ಕ ಗುಡಿಸಲುಗಳು ಇದ್ದಾವೆ. ಅಂದರೆ ಇದರ

ಅರ್ಥವೇನು ? ಬಡವರು ಬಡವರು ಅಂತ ಹೇಳಿಬಿಟ್ಟು ಇವತ್ತಿನ ದಿವಸ ಯಾರು ಯಾರು ಅಲ್ಲಿ ಸಾಹುಕಾರರಿದ್ದಾರೆ ಅವರಿಗೆ ಉತ್ತೇಜನ ಕೊಡುತ್ತಿದ್ದೀರಿ. ಇದು ಕೇವಲ ೨-೩ ತಿಂಗಳೊಳಗೆ ಇಷ್ಟು ಗುಡಿಸಲುಗಳನ್ನು ಹಾಕಿದ್ದಾರೆಂದರೆ ಅರ್ಥವೇನು ? ಕಾರ್ಪೊರೇಷನ್ನಿನಲ್ಲಿರತಕ್ಕ ಅಧಿಕಾರಿಗಳು ಯಾರಿದ್ದಾರೆ ಅವರು ಇದರ ಕಡೆಗೆ ಗಮನ ಕೊಟ್ಟಿಲ್ಲವೆನ್ನುವುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಅಧಿಕಾರಿಗಳಿಗೆ ಕಂಪ್ಲೈಂಟು ಕೊಟ್ಟರೂ ಅವರು ಏನೂ ಕ್ರಮ ತೆಗೆದುಕೊಳ್ಳುತ್ತಿಲ್ಲ. ಅವರ ಈ ಒಂದು ಅಸಡ್ಡೆಯ ವರ್ತನೆ ನೋಡಿದಾಗ ಕಾರ್ಪೊರೇಷನ್ನಿನಲ್ಲಿರತಕ್ಕ ಅಧಿಕಾರಿಗಳು ಸಹ ಇದರಲ್ಲಿ ಶಾಮೀಲಾಗಿದ್ದಾರೋ ಇಲ್ಲವೋ ಎನ್ನುವುದಂತೂ ನನಗೆ ಅರ್ಥವಾಗುತ್ತಿಲ್ಲ. ಆದರೆ ಶಾಮೀಲು ಆಗದೇ ಹೋಗಿದ್ದರೆ ಇಂಥದ್ದು ಅಲ್ಲಿ ಬೆಳೆಯುವುದಕ್ಕೆ ಕಾರಣವೂ ಆಗುತ್ತಿರಲಿಲ್ಲ. ಇದನ್ನು ಒಂದು ಅಸಡ್ಡೆ ಎಂದು ಹೇಳಬೇಕೋ ಅಥವಾ ಅಸಭ್ಯ ವರ್ತನೆ ಎಂದು ಹೇಳಬೇಕೋ ತಿಳಿಯುತ್ತಿಲ್ಲ. ಮಾನ್ಯ ಶ್ರೀ ಲಕ್ಷ್ಮೀಸಾಗರ್‌ರವರು ಮಾತನಾಡುತ್ತಾ, ನಾನು ಬಹಳ ಸಿಟ್ಟಿನಿಂದ ಈ ಮಾತನ್ನು ಹೇಳುತ್ತಿದ್ದೇನೆಂದರು. ಆದರೆ ನಾನು ಇವತ್ತು ಇದರ ಬಗ್ಗೆ ಬಹಳ ಜಿಗುಪ್ಸೆಯಿಂದ ಹೇಳುತ್ತಿದ್ದೇನೆ. ಕಾರ್ಪೊರೇಷನ್ನಿನಲ್ಲಿರತಕ್ಕ ಅಧಿಕಾರ ವರ್ಗದವರೇನಿದ್ದಾರೆ ಅವರು ಅಷ್ಟು ಅಸಮರ್ಥರಾಗಿದ್ದಾರೆಯೋ? ಅಸಕ್ತರಾಗಿದ್ದಾರೆಯೋ ? ಇದರಿಂದಾಗಿ ಅವರ ಕೈಯಲ್ಲಿ ಆಗುವುದಿಲ್ಲವೆನ್ನುವುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಇದು ಎಷ್ಟು ಬೆಳೆಯುತ್ತಿದೆ ಎಂದರೆ ನಮಗೆ ಇದನ್ನು ನೋಡಿ ಬಹಳ ಆತಂಕವಾಗುತ್ತದೆ. ತಾವು ಒಂದು ಸಾರಿ ರೈಲ್ವೇ ಸ್ಟೇಷನ್ನಿನಲ್ಲಿ ಹೋಗಿ ನೋಡಿದರೆ ಗೊತ್ತಾಗುತ್ತದೆ. ತಮಿಳು ನಾಡಿನಿಂದ ದಿವಸವೂ ಎಷ್ಟೋ ಜನ ಹೊಸದಾಗಿ ಗಂಟು ಮೂಟೆಗಳನ್ನು ಕಟ್ಟಿಕೊಂಡು ಬಂದು ಇಲ್ಲಿರುವ ಗುಡಿಸಲುಗಳಿಗೆ ಹೋಗುತ್ತಿದ್ದಾರೆ. ಇವರನ್ನು ತಡೆಯುವವರೇ ಇಲ್ಲದ ಹಾಗಾಗಿದೆ, ಸ್ಲಂಗಳಲ್ಲಿ ಅವರ ಕಡೆಯವರು ಯಾರೋ ಸಂಬಂಧಿಕರು ಇರಬಹುದು ಅವರು ಕರೆಸಿಕೊಳ್ಳುತ್ತಿದ್ದಾರೆ.

ಶ್ರೀ ಎಸ್ ಆರ್ ಬೊಮ್ಮಾಯಿ.—ಇದು ಏನಾಗಿದೆ ಎಂದರೆ ಸಾಮಾನ್ಯ ಸದಸ್ಯರಾದಾಗ ಇದೆಲ್ಲಾ ಕಣ್ಣಿಗೆ ಬೀಳುತ್ತದೆ. ಅನಂತರ ಮಂತ್ರಿಗಳಾಗಿ ಬಿಟ್ಟರೆ ಅವರ ಕಣ್ಣಿಗೆ ಗೋಚರವಾಗುವುದಿಲ್ಲ ಒಂದು ತರಹ ಪರದೇ ಹಾಕಿ ಬಿಟ್ಟ ಹಾಗಾಗಿ ಬಿಡುತ್ತದೆಯೇನೋ ? ಆಗ ಯಾವುದೂ ಕಾಣುವುದಿಲ್ಲವೇನೋ ?

ಶ್ರೀ ಜೆ. ಎಚ್. ಪಟೇಲ್.—ಉಪಾಧ್ಯಕ್ಷರೇ, ಈ ವಿಷಯದ ಬಗ್ಗೆ ಒಂದು ಉದಾಹರಣೆಯನ್ನು ಹೇಳಬೇಕೆಂದರೆ ಅದು ಅಶ್ಲೀಲವಾಗುತ್ತದೆಯೇನೋ, ಆದರೂ ತಮಗೆ ಒಂದು ಕಥೆಯನ್ನು ಹೇಳುತ್ತೇನೆ. ಹಿಂದೆ ಕ್ರುಶ್ಚೇವ್‌ರವರು ಭಾರತಕ್ಕೆ ಬಂದಿದ್ದಾಗ ಅವರು ಬೆಂಗಳೂರಿಗೂ ಬಂದಿದ್ದರು. ಬೆಂಗಳೂರಿನಿಂದ ಮೈಸೂರಿಗೆ ಪ್ರಯಾಣ ಹೊರಟರು ಆಗ ಅವರ ಜೊತೆಯಲ್ಲಿ ದಿ. ಜವಹರಲಾಲ್ ನೆಹರೂರವರು ಹೊರಟರು. ಕ್ರುಶ್ಚೇವ್‌ರವರು ರೈಲಿನಲ್ಲಿ ಹೋಗುವುದು ಬೇಡ ಕಾರಿನಲ್ಲಿಯೇ ಹೋಗೋಣವೆಂದು ಹೇಳಿ ಕಾರಿನಲ್ಲಿ ಕುಳಿತು ಸುತ್ತಲಿನ ದೃಶ್ಯವನ್ನು ನೋಡುತ್ತಿದ್ದರು. ಬೆಂಗಳೂರಿನಿಂದ ಸ್ವಲ್ಪ ದೂರ ಹೊರಗಡೆ ಹೋದಾಗ ಅವರು ಒಂದು ದೃಶ್ಯವನ್ನು ನೋಡಿದರು. ನೋಡಿದ ತಕ್ಷಣವೇ, ನೆಹರೂರವರೇ ನೋಡಿ ಈ ತರಹ ಅಸಹ್ಯ ಮಾಡುತ್ತಿದ್ದಾರಲ್ಲಾ ಇವರು, ಎಷ್ಟೊಂದು ಗೊಬ್ಬರ ವೇಸ್ಟ್ ಮಾಡುತ್ತಿದ್ದಾರಲ್ಲಾ, ಇದು ನ್ಯಾಷನಲ್ ವೇಸ್ಟ್ ಅಲ್ಲವೇ, ನಮ್ಮ ದೇಶದಲ್ಲಿ ಹೀಗೇನಾದರೂ ಆಗಿದ್ದರೆ ತಕ್ಷಣವೇ ಗುಂಡು ಹಾಕಿಸಿಬಿಡುತ್ತವೆಂದು ಹೇಳಿದಾಗ, ನೆಹರೂರವರು ನಮ್ಮ ದೇಶದಲ್ಲಿ ಆ ರೀತಿ ಮಾಡುವುದು ಕಷ್ಟವಿದೆಂದು ಹೇಳಿಬಿಟ್ಟರು. ಆ ನಂತರ ಒಂದು ಸಾರಿ ರಷ್ಯಾಕ್ಕೆ ನೆಹರೂರವರು ಹೋಗುವ ಅವಕಾಶ ಬಂತು. ಅಲ್ಲಿ ಅವರು ತಾಷ್ಕೆಂಟಿನಿಂದ ೬೦ ಮೈಲಿ ದೂರದಲ್ಲಿರುವ ಒಂದು ಪ್ರಾಚೀನ ವಸ್ತು ಸಂಗ್ರಹಾಲಯವನ್ನು ನೋಡಲು ಹೋಗುತ್ತಿರುವಾಗ, ಇಲ್ಲಿಯೂ ಸಹ ನಮ್ಮ ದೇಶದ ತರಹ ಏನಾದರೂ ಇರಬಹುದೇ ಎಂದು ಬೈನಾಕ್ಯುಲರ್ ಹಾಕಿ ನೋಡುತ್ತಿದ್ದರು. ಆಗ ಸ್ವಲ್ಪ ದೂರದಲ್ಲಿ ಒಬ್ಬರು ಆ ರೀತಿ ಕೂತಿದ್ದನ್ನು ನೋಡಿದರು, ನೋಡಿದ ತಕ್ಷಣವೇ ಮಿ॥ ಕ್ರುಶ್ಚೇವ್ ನೋಡಿ ನಮ್ಮ ದೇಶದಲ್ಲಿ ಈ ತರಹ ಮಾಡಿದ್ದಕ್ಕೆ ಗುಂಡು ಹಾಕಿಸಿ ಬಿಡುತ್ತೇವೆಂದು ಹೇಳಿದಿರಿ, ಇದು ಅನಿವಾರ್ಯ ಹ್ಯೂಮನ್ ಪ್ರಾಬ್ಲಂ ಅದಕ್ಕೇನು ಮಾಡುವುದಕ್ಕಾಗುವುದಿಲ್ಲ ಎಂದಾಗ, ಅವರು ಕೂಡಲೇ ಕ್ರುಶ್ಚೇವ್‌ರವರು ಕಾರನ್ನು ನಿಲ್ಲಿಸಿ ತಮ್ಮ ರಕ್ಷಣಾ ಸಿಬ್ಬಂದಿಯವರಿಗೆ ಕೂಡಲೇ ಹೋಗಿ ಆ ವ್ಯಕ್ತಿ ಮೇಲೆ ಗುಂಡು ಹಾರಿಸಲು ಆಜ್ಞೆ ಮಾಡಿದರಂತೆ. ಅವರು ಹೋಗಿ ನೋಡಿಕೊಂಡು ಬಂದು ಸಾರ್ ಅವರ ಮೇಲೆ ಗುಂಡು ಹಾರಿಸಲು ಆಗುವುದಿಲ್ಲವೆಂದರಂತೆ. ಕಾರಣವೇನು ಅಂತ ಕೇಳಿದ್ದಕ್ಕೆ ಅವರು ಭಾರತದ ರಾಯಭಾರಿ ಕಛೇರಿಯಿಂದ ಬಂದಂಥವರು ಎಂದು ಹೇಳಿದರಂತೆ........

(ನಗು........)

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಉಪಾಧ್ಯಕ್ಷರೇ, ನಮ್ಮ ಶ್ರೀ ಬೊಮ್ಮಾಯ್‌ರವರು ಮಾನ್ಯ ಸದಸ್ಯರ ಬಗ್ಗೆ ಮತ್ತು ಮಂತ್ರಿಗಳ ಬಗ್ಗೆ ಬಹಳ ಚೆನ್ನಾಗಿ ವ್ಯಾಖ್ಯಾನ ಮಾಡಿದರು. ದಯಮಾಡಿ ಹಿಂದೆ ನಾನು ಮಂತ್ರಿಯಾಗಿದ್ದಾಗ ಏನೇನು ಕೆಲಸವನ್ನು ಮಾಡಿದ್ದೇವೆಂಬುದನ್ನು ನೋಡಿ ಹೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಜನರಲ್ ಆಗಿ ಹೇಳಿದ್ದು.

ಶ್ರೀ ಬಿ. ಬಸವಲಿಂಗಪ್ಪ.—ಇವತ್ತು ಶ್ರೀ ಧರ್ಮಸಿಂಗ್‌ರವರಿಗೆ ಒಳ್ಳೆಯ ಕೆಲಸಗಳನ್ನು ಮಾಡಬೇಕು ಎನ್ನತಕ್ಕ ಇಚ್ಛೆ ಇದೆ. ಆದುದರಿಂದ ಅವರು ಸ್ಲಂ ಪ್ರದೇಶಗಳಿಗೆಲ್ಲಾ ಭೇಟಿ ಕೊಟ್ಟು ಅಲ್ಲಿ ಎಲ್ಲಾ ಇಂಪ್ರೂವ್ ಮಾಡಬೇಕೆಂದು ಹೇಳುತ್ತೇನೆ. ಇವತ್ತು ಏನಾಗಿದೆ ಎಂದರೆ ಬೆಂಗಳೂರು ನಗರದಲ್ಲಿ ಎಲ್ಲೆಲ್ಲಿ ಸ್ಥಳವಿದೆ ಅದು ಕಾರ್ಪೊರೇಷನ್ನಿನ ಜಮೀನಾಗಿರಲ್ಲಿ ಇಲ್ಲವೇ ಟ್ರಸ್ಟ್ ಬೋರ್ಡಿನವರ ಜಾಗವಾಗಿರಲಿ ಅಲ್ಲೆಲ್ಲಾ ಗುಡಿಸಲುಗಳನ್ನು ಹಾಕಿಬಿಟ್ಟು ಅಲ್ಲಿಗೆ ತಮ್ಮ ನೆರೆ ಹೊರೆಯ ರಾಜ್ಯಗಳಲ್ಲಿರತಕ್ಕವರನ್ನು ಕರೆಸಿ ಕೊಳ್ಳುತ್ತಿದ್ದಾರೆ ಈ ರೀತಿ ಮಾಡುವುದಕ್ಕೆ ಹಿಂದೆ ಆಗುತ್ತಿರಲಿಲ್ಲ ಸ್ವಲ್ಪ ಬಿಗಿಯಿತ್ತು. ಆದರೆ ಈಗ ಸ್ವಲ್ಪ ಬಿಗಿ ತಪ್ಪಿ ಹೋಗಿರುವುದರಿಂದ ಈ ರೀತಿಯಾಗುತ್ತಿದೆ. ಟ್ರಸ್ಟ್ ಬೋರ್ಡಿನವರಾಗಲೀ ಇಲ್ಲವೇ ಕಾರ್ಪೊರೇಷನ್ನಿನವರಾಗಲೀ ಇದರ ಕಡೆಗೆ ಲಕ್ಷ್ಯವನ್ನೇ ಕೊಡುತ್ತಿಲ್ಲ. ಇದರ ಬಗ್ಗೆ ಮಾನ್ಯ ಮಂತ್ರಿ ಗಳವರು ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ಕೊಡಬೇಕು, ಇಲ್ಲದೇ ಹೋದರೆ ಬಹಳ ಕಷ್ಟವಾಗುತ್ತದೆ. ಅಧಿಕಾರಿಗಳು ಸರಿಯಾಗಿ ಕೆಲಸ ನಿರ್ವಹಿಸದೇ ಇರುವುದರಿಂದ ಇವತ್ತಿನ ದಿವಸ ನೂರಾರು ಸ್ಲಂಗಳು ಬೆಳೆಯುವುದಕ್ಕೆ ಕಾರಣವಾಗಿದೆಯೆಂದು ಹೇಳಿದರೆ ತಪ್ಪಾಗಲಾರದು. ಆದುದರಿಂದ ಮಾನ್ಯ ಮಂತ್ರಿ ಗಳವರು ನಮ್ಮ ಪಟ್ಟಣ ಹೇಗಾದರೂ ಇರಲಿ ನಾವು ಹೀಗೆಯೇ ಇರೋಣ ಅಂಥ ಇಚ್ಛೆ ಪಡದೇ ನಮ್ಮ ಪಟ್ಟಣವನ್ನು ಸ್ವಲ್ಪ ನಿರ್ಮಲವಾಗಿ ಇಡಬೇಕು, ಸುಂದರವಾಗಿ ಇಡಬೇಕು ಎಂದು ಪ್ರಯತ್ನ ಮಾಡುವ ಬಗ್ಗೆ ಮನಸ್ಸು ಮಾಡಬೇಕೆಂದು ಹೇಳುತ್ತೇನೆ.

ನಾನು ಸ್ವತಃ ಮಾಡಿದೆ, ಅದಕ್ಕೋಸ್ಕರ ಹೇಳುತ್ತಿದ್ದೇನೆ. ಸ್ಲಂ ಬೋರ್ಡನ್ನು ಮಾಡದೇ ಇದ್ದರೆ ಚನ್ನಾಗಿರುತ್ತಿತ್ತು ಅನ್ನಿಸುತ್ತದೆ. ಅದು ಇಲ್ಲದಿದ್ದರೆ ಚನ್ನಾಗಿ ಕೆಲಸ ನಡೆಯುತ್ತಿತ್ತು. ಈಗ ಇರತಕ್ಕ ಸ್ಲಂ ಬೋರ್ಡನ್ನು ಯಾರಾದರೂ ಅಧಿಕಾರಿಗಳಿಗೆ ವಹಿಸಿ, ಕಾರ್ಪೊರೇಷನ್ ಏರಿಯಾದಲ್ಲಿರತಕ್ಕ ಎಲ್ಲ ಕೊಳಚೆ ಪ್ರದೇಶದ ಜನರನ್ನು ಟ್ರಸ್ಟ್ ಬೋರ್ಡಿನವರ ವಶಕ್ಕೆ ಕೊಟ್ಟು, ಹೊಸದಾಗಿ ನಗರಕ್ಕೆ ಬಂದಿರುವವರನ್ನೆಲ್ಲ ವಾಪಸ್ಸು ಕಳುಹಿಸಿ, ಒಂದು ನಿಗದಿಯಾದ ಸಮಯದಲ್ಲಿ ಹೊರಗಿನಿಂದ ಯಾರ್‍ಯಾರು ಬಂದಿದ್ದಾರೆ (ಬಹಳ ದಿವಸಗಳಿಂದ ಇರುವವರಿಗೆ) ಅವರಿಗೆಲ್ಲ ವಸತಿ ಸೌಲಭ್ಯವನ್ನು ಕಲ್ಪಿಸುವ ಯೋಜನೆ ಯನ್ನು ಹಾಕದಿದ್ದರೆ ಬೆಂಗಳೂರು ನಗರವನ್ನು ಸರಿಯಾಗಿ ಕಾಪಾಡುವುದಕ್ಕಾಗುವುದಿಲ್ಲವೆಂದು ಸ್ಪಷ್ಟ ವಾಗಿ ಹೇಳಬಯಸುತ್ತೇನೆ. ಇನ್ನೊಂದು ಸಂಕಟವಾದ ವಿಚಾರವೇನೆಂದರೆ, ಸಿಟಿ ಮಾರುಕಟ್ಟೆಯ ಪ್ರದೇಶದಲ್ಲಿ ಕೊಳಚೆ ಪ್ರದೇಶದ ಜನರಿಗೆಂದು ಮಲ್ಟಿಸ್ಟೋರೀಡ್ ಬಿಲ್ಡಿಂಗನ್ನು ಲಕ್ಷಾಂತರ ರೂಪಾಯಿ ಗಳನ್ನು ಖರ್ಚು ಮಾಡಿ ಕಟ್ಟಲಾಗಿದೆ. ಆದರೆ ಬಡವರಿಗೆ ಗುಡಿಸಲಿನಲ್ಲಿ ಇದ್ದು ಇದ್ದು ಅಭ್ಯಾಸ. ಅವರಿಗೆಂದು ಕೊಟ್ಟಂತ ಮನೆಗಳಲ್ಲಿ ಅವಿನ್ಯೂ ರಸ್ತೆಯಲ್ಲಿರುವ ದೊಡ್ಡ ದೊಡ್ಡ ವ್ಯಾಪಾರಸ್ಥರು ಅವರಿಂದ ಬರೆಸಿಕೊಂಡು ಸೇರಿಕೊಂಡಿದ್ದಾರೆ. ಕೊಳಚೆ ಪ್ರದೇಶಗಳಲ್ಲಿ ವಾಸವಾಗಿದ್ದವರು ಯಾರೂ ಅಲ್ಲಿ ಇಲ್ಲ. ಬೇಕಾದರೆ ತಾವು ಹೋಗಿ ಇನ್ಸ್‌ಪೆಕ್ಷನ್ ಮಾಡಿ ನೋಡಿ ಹೀಗಾದರೆ, ಯಾರಿಗೆ ಮನೆಗಳನ್ನು ಕೊಟ್ಟಂತಾಯಿತು ? ಅನುಕೂಲಸ್ಥರಿಗೆ ಕೊಟ್ಟಂತಾಯಿತು. ಆ ಬಿಲ್ಡಿಂಗನ್ನು ಕಟ್ಟಿರುವವರ ಕಾರ್ಪೊರೇಷನ್ನಿನವರಾದ್ದರಿಂದ ಕಾರ್ಪೊರೇಷನ್ನಿನ ಅಧಿಕಾರಿಗಳು ಆ ಬಗ್ಗೆ ಏನು ಕ್ರಮ ತೆಗೆದುಕೊಂಡಿ ದ್ದಾರೆ ಎಂದು ಕೇಳುತ್ತೇನೆ. ಅವರನ್ನು ಹೊರಗೆ ಹಾಕಿದ್ದಾರೆಯೇ ? ಇಲ್ಲ. ಕೊಳಚೆ ಪ್ರದೇಶಗಳ ನಿರ್ಮೂಲನಕ್ಕೋಸ್ಕರವೆಂದು ಇಟ್ಟಿದ್ದ ಹಣದಲ್ಲಿ ಕಟ್ಟಿಸಿರುವ ಬಿಲ್ಡಿಂಗನ್ನು ಇವತ್ತಿನ ದಿವಸ ಉಪಯೋಗಿಸುತ್ತಿರುವವರೆಲ್ಲ ಸಾಹುಕಾರರೇ ವಿನಹ ಬಡವರಲ್ಲ. ಇದನ್ನೆಲ್ಲ ಕಣ್ಣಲ್ಲಿ ಕಣ್ಣಿಟ್ಟು ನೀವೇ ನೋಡಬೇಕು. ಇದುವರೆಗೆ ಈ ಬಗ್ಗೆ ಅಧಿಕಾರಿಗಳು ಏನೇನೂ ಗಮನ ಕೊಟ್ಟಿಲ್ಲ. ಆ ಅಧಿಕಾರಿಗಳನ್ನು ಜವಾಬ್ದಾರಿಯುತರು ಎಂದು ಅಲ್ಲಿ ನೇಮಿಸಿದ್ದರೂ ಸಹ ಅವರು ತಮ್ಮ ಜವಾಬ್ದಾರಿಯನ್ನು ಅರಿತು ನಿಷ್ಠೆಯಿಂದ, ತೆಗೆದುಕೊಂಡು ಸಂಬಳಕ್ಕಾದರೂ ಬೆಲೆ ಕೊಟ್ಟು ಕೆಲಸ ಮಾಡುತ್ತಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಇವತ್ತಿನ ದಿವಸ, ೧೯೭೧ ರಿಂದ ಈಚೆಗೆ ನಗರಕ್ಕೆ ಬಂದು ೪೦೦ ಕೊಳಚೆ ಪ್ರದೇಶಗಳಲ್ಲಿ ಯಾರ್‍ಯಾರು ಇದ್ದಾರೆ ಅವರನ್ನೆಲ್ಲ ವಾಪಸ್ಸು ಕಳುಹಿಸಿ ಎಂದು ಹೇಳುತ್ತೇನೆ. ಇವತ್ತು ಅವರುಗಳಿಗೆಲ್ಲ ಓಟಿನ ಹಕ್ಕನ್ನು ಕೊಡುತ್ತಿರುವುದರಿಂದ ಬೆಂಗಳೂರು ನಗರದಲ್ಲಿರುವ ಜನರ ಓಟಿನ ಹಕ್ಕು ಕಡಿಮೆಯಾಗಿ ಅವರೇ ಎಲ್ಲ ರಂಗಗಳಲ್ಲೂ ಮುಂದೆ ಬರುವುದಕ್ಕೆ ಅವಕಾಶವಾಗಿದೆ. ಕ್ರಮೇಣ ಅವರೇ ಕಾರ್ಪೊರೇಷನಿನ

ಅಧಿಕಾರವನ್ನು ಕಿತ್ತುಕೊಳ್ಳುವ ಪ್ರಸಂಗ ಕೂಡ ಬರಬಹುದು. ಆದ್ದರಿಂದ, ಈ ಬಗ್ಗೆ ತೀವ್ರವಾಗಿ ಗಮನ ಕೊಡಬೇಕೆಂದು ಹೇಳುತ್ತೇನೆ. ಈ ಎಲ್ಲ ವಿಚಾರಗಳ ಬಗ್ಗೆ ತಾವೇ ಸ್ವತಃ ಗಮನ ಕೊಟ್ಟು ಕೆಲಸ ಮಾಡಬೇಕು ಮತ್ತು ಅಧಿಕಾರಿಗಳಿಂದ ಕೂಡ ಮಾಡಿಸಬೇಕೆಂದು ಹೇಳುತ್ತೇನೆ ಈ ಸಂದರ್ಭದಲ್ಲಿ, ಮಾನ್ಯ ರಾಮದೇವ್‌ರವರು ಏನೊಂದು ನಿರ್ಣಯವನ್ನು ತಂದು ಒಳ್ಳೆಯ ಕೆಲಸ ಮಾಡಿದ್ದಾರೆ ಅದಕ್ಕೆ ನನ್ನ ಸಂಪೂರ್ಣ ಬೆಂಬಲವನ್ನು ಕೊಡುತ್ತಾ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಿ. ಎಂ. ಮತ್ತಿಕಟ್ಟಿ (ರೋಣ).—ಮಾನ್ಯ ಅಧ್ಯಕ್ಷರೇ, ಮಾನ್ಯ ರಾಮದೇವ್‌ರವರು ಬೆಂಗಳೂರು ನಗರದಲ್ಲಿರತಕ್ಕ ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ಜನತೆಯ ಅನುಕೂಲತೆಗಾಗಿ ಒಂದು ನಿರ್ಣಯವನ್ನು ತಂದಿದ್ದಾರೆ, ಇದರ ಬಗ್ಗೆ ಹಲವಾರು ಮಂದಿ ಹಿರಿಯ ಸದಸ್ಯರು ಮಾತನಾಡಿ ಕೊಳಚೆ ಪ್ರದೇಶವನ್ನು ನಿರ್ಮಾಣ ಮಾಡುವುದಕ್ಕೆ ಅವಕಾಶ ಕೊಡಬಾರದೆಂದು ತಿಳಿಸಿದ್ದಾರೆ. ಇವತ್ತು ಮೂಲಭೂತವಾದ ಸಮಸ್ಯೆಯ ಕಡೆ ಯಾರೂ ಲಕ್ಷ್ಯ ಕೊಟ್ಟಿಲ್ಲ ಎಂಬ ಮಾತನ್ನು ತುಂಬ ವಿಷಾದದಿಂದ ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ ಇವತ್ತಿನ ದಿವಸ, ನಗರ ಪ್ರದೇಶಗಳಲ್ಲಿ ಏತಕ್ಕಾಗಿ ಕೊಳಚೆ ಪ್ರದೇಶಗಳು ನಿರ್ಮಾಣವಾಗುತ್ತಿವೆ ಎಂಬುದನ್ನು ಯಾರೂ ವಿಚಾರ ಮಾಡುತ್ತಿಲ್ಲ. ಈ ದೇಶದ ಜವಾಬ್ದಾರಿಯನ್ನು ಹೊತ್ತಿರತಕ್ಕ ಶಾಸಕರಾಗಲಿ, ಯಾರೇ ಆಗಲೀ, ಅವರು ಸಮಾಜದ ಮೂಲಭೂತ ವಾದ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳದೆ ಹೋದರೆ ಈ ದೇಶಕ್ಕೆ ಮುಂದೆ ಭವಿಷ್ಯ ಇಲ್ಲವೆಂಬ ಮಾತನ್ನು ತುಂಬ ವಿಷಾದದಿಂದ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕೊಳಚೆ ಪ್ರದೇಶಗಳ ನಿರ್ಮಾಣಕ್ಕೆ ಈ ದೇಶದಲ್ಲಿರುವ ಅರ್ಥ ವ್ಯವಸ್ಥೆ ಏನಿದೆ ಅದೇ ಮೂಲ ಕಾರಣ ಎಂಬುದನ್ನು ಒತ್ತಿ ಹೇಳಲು ಇಷ್ಟ ಪಡುತ್ತಿದ್ದೇನೆ. ಇವತ್ತಿನ ದಿವಸ ಶೇಕಡ ೮೫ರಷ್ಟು ಜನ ಹಳ್ಳಿಯಲ್ಲಿ ವಾಸಿಸುತ್ತಿದ್ದಾರೆ ಮತ್ತು ಹಳ್ಳಿಯ ಆರ್ಥಿಕ ಪರಿಸ್ಥಿತಿ ಬಹಳ ಕೆಟ್ಟಿದೆ. ಅಲ್ಲಿ ಉದ್ಯೋಗದ ಅನುಕೂಲತೆ ಇಲ್ಲ ; ಎರಡು ಹೊತ್ತಿನ ಊಟಕ್ಕಾಗಿ ಪರದಾಡುವ ಪರಿಸ್ಥಿತಿ ಇದೆ. ಹೀಗಿರುವಾಗ, ಆ ಜನರು ಉದ್ಯೋಗಗಳನ್ನು ಹುಡುಕಿ ಕೊಂಡು ಬೆಂಗಳೂರು, ಹುಬ್ಬಳ್ಳಿ ಧಾರವಾಡದಂತಹ ನಗರ ಪ್ರದೇಶಗಳಿಗೆ ಬರುತ್ತಿದ್ದಾರೆ. ದಾಂಡೇಲಿಯಂತಹ ಪ್ರದೇಶಗಳಿಗೆ ಸಹ ಜನ ಹೋಗುತ್ತಿದ್ದಾರೆ. ಎಲ್ಲೆಲ್ಲಿ ಉದ್ಯೋಗ ಸಿಗುತ್ತದೋ ಅಂಥ ಕಡೆ ಹುಡುಕಿಕೊಂಡು ಹೋಗುತ್ತಾರೆ. ಕೆಲವರು ಅಧಿಕಾರಿಗಳ ಮನೆಯಲ್ಲಿ ಕಸ ಹೊಡೆದು ಕೊಂಡು ಮುಸುರೆ ತೊಳೆದುಕೊಂಡು ಹಾಗೂ ಇನ್ನೂ ಮುಂತಾದ ಹೀನ ಕೆಲಸಗಳನ್ನು ಮಾಡಿ ಕೊಂಡು ಬದುಕುವ ಪರಿಸ್ಥಿತಿ ಇದೆ. ಈ ಮಾತನ್ನು ನಾನು ತುಂಬಾ ನೊಂದ ಮನಸ್ಸಿನಿಂದ ಹೇಳು ತ್ತಿದ್ದೇನೆ. ಈ ನಮ್ಮ ದೇಶದಲ್ಲಿ ಆಗುತ್ತಿರತಕ್ಕ ಕೊಳಚೆ ಪ್ರದೇಶಗಳ ನಿರ್ಮಾಣಕ್ಕೆ ಮೂಲಭೂತವಾಗಿ ನಮಗಿಂತಲೂ ಮೊದಲು ಜವಾಬ್ದಾರಿಯನ್ನು ಹೊತ್ತವರೆಲ್ಲ ಜನರೂ ಕಾರಣೀಭೂತರು ಎಂಬ ಮಾತನ್ನು ವಿಷಾದದಿಂದ ಹೇಳುತ್ತಾ, ಇವತ್ತು ಈ ಪರಿಸ್ಥಿತಿ ಬದಲಾಗಬೇಕಾದರೆ ಗ್ರಾಮಾಂತರ ಪ್ರದೇಶಗಳನ್ನು ಹೆಚ್ಚು ಹೆಚ್ಚು ಉದ್ಯೋಗವಕಾಶಗಳನ್ನು ಕಲ್ಪಿಸಿಕೊಡಬೇಕೆಂದು ಹೇಳಬಯಸುತ್ತೇನೆ. ಅಲ್ಲಿ ಅವರಿಗೆ ಹೆಚ್ಚಿನ ಅನುಕೂಲತೆಗಳನ್ನು ನಿರ್ಮಾಣ ಮಾಡಿಕೊಟ್ಟರೆ ಆ ಜನರು ಪಟ್ಟಣ ಪ್ರದೇಶಗಳಿಗೆ ಬರುವುದನ್ನು ತಡೆಗಟ್ಟಬಹುದು. ಆದರೆ, ಈಗ ಬಂದಿದ್ದಾರಲ್ಲ ಅವರ ಪರಿಸ್ಥಿತಿ ಏನು ಎಂದು ಕೇಳಬಹುದು. ಅದಕ್ಕಾಗಿ ಹಿರಿಯ ಸದಸ್ಯರಾದ ಮಾನ್ಯ ಲಕ್ಷ್ಮೀಸಾಗರ್‌ರವರು ಸಿಟ್ಟು–ಕೋಪ–ದೋಷದಿಂದ ಮಾತ ನಾಡುತ್ತಾ ಎರಡು ದ್ವಂದ್ವ ನೀತಿಗಳನ್ನು ಹೇಳಿದರು. ಪರೋಕ್ಷವಾಗಿ ಮಾನ್ಯ ರಾಮದೇವ್‌ರವರು ತಂದ ನಿರ್ಣಯಕ್ಕೆ ವ್ಯತಿರಿಕ್ತವಾಗಿ ಮಾತನಾಡಿದ್ದಾರೆ ; ಮತ್ತು ಕಟು ಸತ್ಯವಾದ ವಿಚಾರಗಳನ್ನು ತಿಳಿಸಿದ್ದಾರೆ. ಪುನಃ ನಿರ್ಣಯಕ್ಕೆ ಬೆಂಬಲ ಕೊಡುತ್ತೇನೆಂಬ ಮಾತನ್ನು ಪಕ್ಷದ ಹಿತದೃಷ್ಟಿಯಿಂದ ಹೇಳಿರಬಹುದು. ಆದರೆ ದಿನಾಲೂ ನಿರ್ಮಾಣವಾಗುತ್ತಿರುವ ಕೊಳಚೆ ಪ್ರದೇಶಗಳನ್ನು ತಪ್ಪಿಸಬೇಕಾದರೆ ಕಟುವಾದ ಒಂದು ಕಾಯಿದೆಯನ್ನು ಸರ್ಕಾರದವರು ತರಲೇಬೇಕಾದುದು ನ್ಯಾಯಬದ್ಧವಾಗಿದೆ. ಮಾಜಿ ಮಂತ್ರಿಗಳಾದ ಮಾನ್ಯ ಬಸವಲಿಂಗಪ್ಪನವರು ಮಾತನಾಡುತ್ತಾ ಹಿಂದೆ ಇದ್ದ ೧೩೦ ಕೊಳಚೆ ಪ್ರದೇಶಗಳು ಇವತ್ತು ೪೦೦ಕ್ಕೆ ಏರಿವೆ ಎಂದರು. ಅಲ್ಲದೆ, ಸರ್ಕಾರವಾಗಲೀ, ಅಧಿಕಾರಿಗಳಾಗಲೀ ಅದರ ಬಗ್ಗೆ ಹೆಚ್ಚು ಗಮನ ವಹಿಸಿಲ್ಲ ಎಂಬ ಮಾತನ್ನು ಕೂಡ ತಿಳಿಸಿದ್ದಾರೆ. ಅವರ ಒಂದು ಕಾಲದಲ್ಲಿ ಗುಡಿಸಲು ಗಳಿದ್ದಂತಹ ಸ್ಥಳದಲ್ಲಿ ಹಾಕಿದಂತಹ ಅಭಿವೃದ್ಧಿ ಯೋಜನೆಗಳು ಕಾರ್ಯಗತವಾಗಲಿಲ್ಲವೆಂದು ಸಹ ಹೇಳಿದ್ದಾರೆ. ಇವತ್ತಿನ ದಿವಸ, ಸ್ಲಂ ಕ್ಲಿಯರೆನ್ಸ್ ಬೋರ್ಡ್ ಎಂದು ಏನು ಮಾಡಿದ್ದಾರೆ ಅದಕ್ಕೆ ಹೆಚ್ಚು ಅಧಿಕಾರವನ್ನು ಕೊಡದಿರುವುದರ ಜೊತೆಗೆ ಅದಕ್ಕೆ ಆರ್ಥಿಕವಾಗಿ ಹೆಚ್ಚಿನ ಅನುಕೂಲತೆಯನ್ನು ಕಲ್ಪಿಸದೆ ಇರುವುದರಿಂದ ಮತ್ತು ಕೊಳಚೆ ಪ್ರದೇಶಗಳನ್ನು ಬೇರೆ ಬೇರೆ ಅಧಿಕಾರದ ಕಕ್ಷೆಯಲ್ಲಿ ತಂದಿರು ವುದರಿಂದ ಬಹಳ ತೊಂದರೆಯಾಗಿದೆ. ಪುರಸಭೆಗಳಿಗೆ ಮತ್ತು ನಗರ ಸಭೆಗಳಿಗೆ ಕೆಲವೊಂದು ಸ್ಲಂಗಳನ್ನು

ಕೊಡಲಾಗಿದೆ ; ಹೀಗೆಯೇ ಬಿ.ಡಿ.ಎ. ಅವರಿಗೆ ಮತ್ತು ಸ್ಲಂ ಕ್ಲಿಯರೆನ್ಸ್ ಬೋರ್ಡಿನವರಿಗೆ ಕೆಲವೊಂದು ಸ್ಲಂಗಳನ್ನು ಕೊಡಲಾಗಿದೆ. ಈ ರೀತಿಯಾಗಿ ಸ್ಲಂಗಳು ಹರಿದು ಹಂಚಿ ಹೋಗಿರತಕ್ಕ ಪರಿಸ್ಥಿತಿ ಇರುವುದರಿಂದ ಅವುಗಳ ಕಡೆ ಲಕ್ಷ್ಯ ಕೊಟ್ಟು ವ್ಯವಸ್ಥಿತವಾಗಿ ಕೆಲಸ ಮಾಡದೆ ಇರತಕ್ಕ ಪರಿಸ್ಥಿತಿ ಇವತ್ತು ನಿರ್ಮಾಣವಾಗಿದೆ. ಇಂಥ ಒಂದು ಪರಿಸ್ಥಿತಿಯನ್ನು ಹೋಗಲಾಡಿಸಿ ಅವರಿಗೆ ಸೂಕ್ತವಾದ ವ್ಯವಸ್ಥೆಯನ್ನು ಮಾಡುವ ಸಲುವಾಗಿ ಎಲ್ಲ ಸ್ಲಂಗಳನ್ನು ಒಂದೇ ಅಧಿಕಾರದ ಕೆಳಗೆ ತರುವುದು ಒಳ್ಳೆಯದೆಂದು ಸಲಹೆ ಮಾಡುತ್ತೇನೆ. ಕೆಲವೊಂದು ಕಡೆ ಬೆಂಗಳೂರಿನ ನಾಗರೀಕರು ಚಿಂತೆಗೆ ಒಳಗಾಗತಕ್ಕ ಪರಿಸ್ಥಿತಿ ಕೂಡ ಇದೆ. ಕನ್ನಡ ನಾಡಿನ ಗಂಡುಮೆಟ್ಟಿನ ಭೂಮಿಯಲ್ಲಿ ಅದರಲ್ಲೂ ಕರ್ನಾಟಕದ ರಾಜಧಾನಿಯಾದ ಬೆಂಗಳೂರು ನಗರದಲ್ಲಿ ಶೇಕಡ ೫೦ಕ್ಕಿಂತ ಹೆಚ್ಚು ಜನರು ಬೇರೆ ಬೇರೆ ಭಾಷೆಗಳಲ್ಲಿ ಮಾತನಾಡುವುದನ್ನು ನೋಡುತ್ತಿದ್ದೇವೆ. ನಗರದ ಕೆಲವೊಂದು ಭಾಗಗಳಲ್ಲಿ ಕನ್ನಡದಲ್ಲಿ ಮಾತನಾಡಿದರೆ ತಿಳಿಯದೆ ಇರುವ ಜನರು, ಕನ್ನಡವನ್ನು ಮಾತನಾಡದೆ ಇರುವವರಿದ್ದಾರೆಂದರೆ ಅವರ ಪ್ರಭಾವವನ್ನೇ ಹೆಚ್ಚಾಗಿ ಬೀರತಕ್ಕ ಪರಿಸ್ಥಿತಿ ಬಂದಂತಾಗಿದೆ ಎಂದರೆ ಅತಿಶಯೋಕ್ತಿಯಾಗಲಾರದು. ಆದ್ದರಿಂದ ಈ ಬಗ್ಗೆ ಸೂಕ್ತ ಗಮನ ಹರಿಸಿ ಕ್ರಮ ತೆಗೆದುಕೊಳ್ಳಬೇಕು. ಸರ್ಕಾರ ಈ ದಿಸೆಯಲ್ಲಿ ಚಿಂತನೆಯನ್ನು ಮಾಡಬೇಕು. ಮಾನ್ಯ ವಿರೋಧ ಪಕ್ಷದ ಉಪಧುರೀಣರು ಒಂದು ನಿರ್ಣಯವನ್ನು ತಂದು ೧೯೭೨ಕ್ಕಿಂತ ಮೊದಲು ಇದ್ದಂಥವರಿಗೆ ಕೆಲವೊಂದು ಅನುಕೂಲತೆಗಳನ್ನು ಕಲ್ಪಿಸಿಕೊಡಬೇಕು ಎಂದು ಹೇಳಿದ್ದಾರೆ. ಕೊಳಚೆ ಪ್ರದೇಶಗಳು ಹೆಚ್ಚುವುದರಿಂದ ರಾಜ್ಯದ ಆರ್ಥಿಕ ಪರಿಸ್ಥಿತಿಗೆ, ನಗರಾಭಿವೃದ್ಧಿಗೆ ತೊಂದರೆಯಾಗುತ್ತದೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಈ ದೃಷ್ಟಿಯಿಂದ ಇದಕ್ಕೆ ಗಮನ ಕೊಡಬೇಕು. ೧೯೭೨ರಿಂದ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಸರ್ಕಾರ ಈ ಕೊಳಚೆ ಪ್ರದೇಶದ ಬಗ್ಗೆ ಚಿಂತನೆ ಮಾಡಿದೆ. ಜನರ ಸಾಮಾಜಿಕ ಸಮಸ್ಯೆಗಳನ್ನು ಅರ್ಥ ಮಾಡಿಕೊಂಡು ಈ ದಿಸೆಯಲ್ಲಿ ಕೆಲಸ ಮಾಡಿದೆ. ೧೯೭೨ ರಿಂದ ಇಲ್ಲಿಯವರೆಗೆ ಕರ್ನಾಟಕದಲ್ಲಿ ಜನಸಾಮಾನ್ಯರಿಗೆ ಅದರಲ್ಲೂ ಬಡವರು ಮತ್ತು ಕೊಳಚೆ ಪ್ರದೇಶದಲ್ಲಿ ವಾಸಿಸತಕ್ಕ ಜನರಿಗೆ ಅನುಕೂಲವಾಗುವಂಥ ಒಳ್ಳೆಯ ಕೆಲಸಗಳು ಬಹಳ ತೀವ್ರಗತಿಯಲ್ಲಿ ಆಗಿದೆ. ಈ ಸರ್ಕಾರದವರೂ ಈ ದಿಸೆಯಲ್ಲಿ ಕ್ರಮ ಕೈಗೊಂಡು ಹಲವಾರು ಯೋಜನೆಗಳನ್ನು ಹಾಕಿಕೊಂಡಿರುವುದರಿಂದ ಮಾನ್ಯ ರಾಮದೇವ್‌ರವರು ತಂದಿರುವ ನಿರ್ಣಯದ ಅವಶ್ಯಕತೆ ಇಲ್ಲ ಎಂಬುದನ್ನು ಪ್ರತಿಪಾದನೆ ಮಾಡಿ ಈ ನಿರ್ಣಯ ಅಷ್ಟು ಪ್ರಸ್ತುತವಲ್ಲ ಎಂದು ಹೇಳಿ ಇಷ್ಟು ಮಾತನಾಡಲು ಅವಕಾಶವನ್ನು ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

SRI B. BASAVALINGAPPA.—Mr. Speaker, I think we have had enough discussion. The Hon. Minister may reply and take up other resolutions.

MR. CHAIRMAN.—Sri Salappa wanted to speak. Now Sri Salappa will speak.

† ಶ್ರೀ ಐ. ಪಿ. ಡಿ. ಸಾಲಪ್ಪ (ಬಿನ್ನಿಪೇಟೆ) — ಸನ್ಮಾನ್ಯ ಸಭಾಧ್ಯಕ್ಷರೇ, ಈ ದಿವಸ ಬಹಳ ಪವಿತ್ರವಾದ ಒಂದು ಕೆಲಸವನ್ನು ಈ ಸದನ ತೆಗೆದುಕೊಂಡಿದೆ ಎಂದು ನನಗಾದರೂ ಬಹಳ ಆನಂದವಾಗಿದೆ. ನಾವು ಸದಾ ಕೊಳಚೆ, ಕೊಳಚೆ ಎಂದು ಹೇಳುತ್ತಿರುತ್ತೇವೆ. ಆದರೆ ಕೊಳಚೆಯಲ್ಲಿ ವಾಸ ಮಾಡತಕ್ಕ ಜನರು ಯಾರೆಂದರೆ ಈ ಸಮಾಜಕ್ಕೆ ಅಥವಾ ದೇಶಕ್ಕೆ ಸೇವೆ ಮಾಡುತ್ತಾ ಇರತಕ್ಕ ಬಡವರ್ಗ. ಈ ವರ್ಗದವರಿಗೆ ತಿನ್ನುವುದಕ್ಕೆ ಅನ್ನವಿಲ್ಲ, ಉಡುವುದಕ್ಕೆ ಬಟ್ಟೆ ಇಲ್ಲ ಇರುವುದಕ್ಕೆ ಮನೆ ಇಲ್ಲ, ಕಾಯಿಲೆ ಬಂದರೆ ತೋರಿಸಿ ಔಷದಿ ತೆಗೆದುಕೊಳ್ಳುವುದಕ್ಕೆ ದುಡ್ಡಿಲ್ಲ. ಅಂಥ ವರ್ಗದ ಜನ ಎಲ್ಲಾದರೂ ಆಶ್ರಯ ಸಿಗುತ್ತದೆ ಎಂದು ಹುಡುಕುತ್ತಾ ಬರುತ್ತಾರೆ. ಅಮ್ಮಾ ಅನ್ನ ಕೊಡಿ ಎಂದು ಬೇಡುತ್ತಾರೆ. ಎಂಜಲು ಹಾಕಿದರೂ ತಿನ್ನುತ್ತಾರೆ, ಬಿಸಿ ಹಾಕಿದರೂ ತಿನ್ನುತ್ತಾರೆ. ತಿನ್ನುವುದಕ್ಕೆ ಏನಾದರೂ ಹಾಕಿದರೆ ತಿನ್ನುತ್ತಾರೆ, ಇಲ್ಲ ಹೋಗು ಎಂದರೆ ಹೋಗುತ್ತಾರೆ. ಅಥವಾ ನಾಯಿಯನ್ನು ಛೂ ಬಿಟ್ಟರೂ ಹೋಗುತ್ತಾರೆ. ಇಂಥ ಮೂಕ ಜನರು ಕೊಳಚೆಯಲ್ಲಿ ವಾಸ ಮಾಡುತ್ತಿದ್ದಾರೆ. ಇವರಿಗೆ ಎಲ್ಲ ಸೌಲಭ್ಯಗಳನ್ನು ಮಾಡಿಕೊಡಬೇಕಾದ ಜನ ಕುರ್ಚಿ ಮೇಲೆ ಆರಾಮವಾಗಿ ಕುಳಿತುಕೊಂಡಿದ್ದಾರೆ. ಆದರೆ ಮನೆ ಕೆಲಸದಿಂದ ಬೀದಿ ಕೆಲಸದವರೆಗೆ ಹೇಲು ಬಾಚುವವರೆಗೆ ಕೆಲಸ ಮಾಡತಕ್ಕ ಪವಿತ್ರವಾದ ಜನ ಕೊಳಚೆ ಪ್ರದೇಶದ ನಿವಾಸಿಗಳು. ಆದರೆ ಇವತ್ತು ಅವರ ಗತಿ ಏನಾಗಿದೆ ? ಸ್ವಾತಂತ್ರ್ಯ ಬಂದು ೩೩ ವರ್ಷಗಳಾದ ಮೇಲೆ ನಾವು ನೋಡಿದಾಗ ನಾವು ನಿರೀಕ್ಷಿಸಿದಷ್ಟು ಅಭಿವೃದ್ಧಿಯಾಗಲಿಲ್ಲವಲ್ಲ ಎಂದು ನನಗಾದರೂ ದುಃಖ

ವಾಗುತ್ತಿದೆ. ಕರ್ನಾಟಕದಲ್ಲಿ ಇರತಕ್ಕ ಕೊಳಚೆ ಪ್ರದೇಶದ ಪೈಕಿ ಅರ್ಧಕ್ಕಿಂತ ಹೆಚ್ಚು ಭಾಗ ಬೆಂಗಳೂರಿನಲ್ಲಿದೆ. ಬೆಂಗಳೂರಿನಲ್ಲಿ ಕೊಳಚೆ ಪ್ರದೇಶವಿರತಕ್ಕ ಭಾಗ ನಿಜವಾಗಿಯೂ ನರಕ. ಯಾರಾದರೂ ನರಕವನ್ನು ನೋಡಬೇಕಾದರೆ ಸತ್ತಮೇಲೆ ನೋಡಬೇಕಾಗಿಲ್ಲ. ಈಗಲೇ ಬೆಂಗಳೂರಿನಲ್ಲಿ ನೋಡಬಹುದು. ಕಕ್ಕಸ್ಸಿನ ನೀರು ಹರಿಯುವ ಜಾಗದಲ್ಲೇ ಕುಡಿಯುವ ನೀರು. ಇದು ನಾವು ನೋಡುತ್ತಾ ಇರತಕ್ಕ ಚಿತ್ರ. ಇಂಥ ನೀರನ್ನು ಕುಡಿ ಎಂದು ಬಿಟ್ಟಿರತಕ್ಕ ಈ ಗಣ್ಯ ನಾಗರೀಕರನ್ನು ನೋಡಿದರೆ ನಮ್ಮ ನಾಗರೀಕತೆ ಎಷ್ಟು ಉಚ್ಚ ಮಟ್ಟಕ್ಕೆ ಹೋಗಿದೆ ಎಂಬುದು ಗೊತ್ತಾಗುತ್ತದೆ. ನಮ್ಮ ಬೆಂಗಳೂರು ನಗರದ ಕಾರ್ಪೊರೇಷನ್ ಕಛೇರಿಯಿಂದ ಕೇವಲ ಒಂದು ಫರ್ಲಾಂಗ್ ದೂರದಲ್ಲೇ ಖಾದರ್ ಷರೀಫ್ ಗಾರ್ಡನ್ ಎಂಬ ಪ್ರದೇಶ ಇದೆ. ಅಲ್ಲಿ ಕಕ್ಕಸ್ಸು ಇರತಕ್ಕ ಜಾಗದಲ್ಲೇ ಕುಡಿಯುವ ನೀರಿನ ಕೊಳಾಯಿ ಇದೆ. ಅಲ್ಲಿ ಕಕ್ಕಸ್ಸು ನೀರು ಎರಡೂ ಮಿಕ್ಸ್ ಆಗುತ್ತಿದೆ. ನಾನು ಒಂದು ಸಾರಿ ಅಲ್ಲಿ ಭೇಟಿ ಕೊಟ್ಟು ಬಂದು ಕಾರ್ಪೊರೇಷನ್ ಅಧಿಕಾರಿಗಳನ್ನು ಇದನ್ನು ಯಾವಾಗ ಕೊನೆಗಾಣಿಸುತ್ತೀರಿ ಎಂದು ಕೇಳಿದ್ದಕ್ಕೆ ಅವರು ಆದಷ್ಟು ಜಾಗ್ರತೆ ಈ ಕ್ರಮವನ್ನು ಕೊನೆಗಾಣಿಸುತ್ತೇವೆ ಎಂದು ಹೇಳಿದ್ದರು. ಆದರೆ ಇದುವರೆಗೆ ಏನೂ ಆಗಿಲ್ಲ ಇದನ್ನು ಉದಾಹರಣೆಯಾಗಿ ಕೊಟ್ಟೆ ಅಷ್ಟೆ. ಈ ರೀತಿ ನಗರದ ನಾನಾ ಭಾಗಗಳಲ್ಲಿದೆ. ಈ ಬಗ್ಗೆ ಅಧಿಕಾರಿಗಳು ಅಸಡ್ಡೆ ತೋರಿದ್ದಾರೆ. ಕೊಳಚೆ ಪ್ರದೇಶದ ಜನರ ಅಭಿವೃದ್ಧಿಗೆ ನಮ್ಮ ಸರ್ಕಾರ ಇಟ್ಟಿರುವ ಹಣ ಏನೇನೂ ಸಾಲದು. ಈ ರೀತಿ ಆದರೆ ಕೊಳಚೆ ಪ್ರದೇಶದ ಅಭಿವೃದ್ಧಿಯಾಗುವುದಕ್ಕೆ ಸಾಧ್ಯವಾಗುವುದಿಲ್ಲ. ಹಿಂದಿನಿಂದಲೂ ಇದೇ ರೀತಿ ಮಾಡಿಕೊಂಡು ಬಂದಿರುವುದರಿಂದ ಪರಿಸ್ಥಿತಿ ಹೀಗೇ ಮುಂದುವರೆಯುತ್ತಿದೆ. ನಮ್ಮ ನೆರೆ ರಾಜ್ಯವಾದ ತಮಿಳುನಾಡಿನಲ್ಲಿ ಸಾಕಾದಷ್ಟು ಅಭಿವೃದ್ಧಿ ಮಾಡಿದ್ದಾರೆ. ಅವರು ಹೇಗೆ ಮಾಡಿದ್ದಾರೆ? ಅವರಿಗೆ ಎಲ್ಲಿಂದ ಈ ಶಕ್ತಿ ಬಂತು? ದೇವರು ರಾತ್ರಿ ಹೊತ್ತು ಯಾರಿಗೂ ಗೊತ್ತಿಲ್ಲದಂತೆ ಬಂದು ಅವರಿಗೆಲ್ಲಾ ಮನೆಗಳನ್ನು ಕಟ್ಟಿಸಿ ಕೊಟ್ಟು ಹೋಗಿದ್ದಾನೆಯೇ? ಇಲ್ಲ ಅಲ್ಲಿರತಕ್ಕ ಸರ್ಕಾರವೇ ಈ ಜನರ ವಿಚಾರದಲ್ಲಿ ಆಸಕ್ತಿವಹಿಸಿಅಭಿವೃದ್ಧಿ ಮಾಡಬೇಕು ಕೊಳಚೆ ಪ್ರದೇಶದಲ್ಲಿ ವಾಸ ಮಾಡುವವರೂ ಇತರರಂತೆ ಮನುಷ್ಯರಾಗಿ ಬಾಳಬೇಕು, ಅವರಿಗೆ ಒಳ್ಳೆಯ ಮನೆಗಳಿರಬೇಕು ಎಂದು ಕೋಟ್ಯಾಂತರ ರೂಪಾಯಿ ಹಣ ಒದಗಿಸಿ ಮನೆಗಳನ್ನು ಕಟ್ಟಿಸಿಕೊಡುತ್ತಿದ್ದಾರೆ. ಅಲ್ಲಿ ಈ ಜನಗಳಿಗೆ ಕಟ್ಟಿಸಿಕೊಟ್ಟಿರತಕ್ಕ ಸಾವಿರಾರು ಮನೆಗಳನ್ನು ಕಣ್ಣಾರೆ ನೋಡಬಹುದಾಗಿದೆ. ಕೊರೆಯುವ ಛಳಿಯಲ್ಲಿ, ಉರಿಯುವ ಬಿಸಿಲಿನಲ್ಲಿ ಇದ್ದಂಥವರು ಈಗ ಅಲ್ಲಿ ನೆಮ್ಮದಿಯಿಂದ ಜೀವನ ನಡೆಸಬಹುದಾಗಿದೆ. ಆದರೆ ಅದೇರೀತಿ ನಮ್ಮ ರಾಜ್ಯದಲ್ಲಿ ಕೆಲಸ ಮಾಡಲಿಲ್ಲವಲ್ಲ ಎಂದು ನನಗಾದರೂ ದುಃಖವಾಗುತ್ತಿದೆ. ಕೊಳಚೆ ನಿರ್ಮೂಲನ ಮಂಡಲಿಯನ್ನು ಮಾಡಿದಾಗ ಮದ್ರಾಸಿಗಿಂತ ತೀವ್ರವಾಗಿ ಕರ್ನಾಟಕ ರಾಜ್ಯದಲ್ಲಿ ಈ ಕೊಳಚೆ ಪ್ರದೇಶದ ಅಭಿವೃದ್ಧಿ ಆಗುತ್ತದೆಂದು ನಾವು ನಿರೀಕ್ಷೆ ಮಾಡಿದ್ದೆವು. ಆದರೆ ಆ ರೀತಿ ಆಗಲಿಲ್ಲ. ಈ ಮಂಡಲಿಗೆ ಕೊಟ್ಟಿರತಕ್ಕ ಹಣದಲ್ಲಿ ಶೇಕಡ ೩೦ರಷ್ಟು ಹಣ ಅಲ್ಲಿನ ಸಿಬ್ಬಂದಿ ವರ್ಗಕ್ಕೆ ಖರ್ಚಾಗಿದೆಯೇ ವಿನಹ ಬಡವರ ಕಲ್ಯಾಣಕ್ಕೆ ಆಗಿಲ್ಲ ಎಂದು ನಾನು ಸ್ಪಷ್ಟವಾಗಿ ತಿಳಿದುಕೊಂಡಿದ್ದೇನೆ. ಮಾನ್ಯ ಧರ್ಮಸಿಂಗ್ ಅವರು ನಗರಾಭಿವೃದ್ಧಿ ಮಂತ್ರಿಗಳಾದ ಮೇಲೆ ನಾನೂ ಕೂಡ ಕರ್ನಾಟಕ ರಾಜ್ಯದಲ್ಲಿ ಪ್ರವಾಸ ಮಾಡಿದ್ದೇನೆ. ಅವರು ಹೋದಕಡೆಯಲ್ಲೆಲ್ಲಾ ಕೊಳಚೆ ಪ್ರದೇಶಗಳಿಗೆ ಭೇಟಿ ಕೊಟ್ಟು ಬರುತ್ತಾರೆ. ಬೆಂಗಳೂರಿಗೆ ಬಂದತಕ್ಷಣ ಕೊಳಚೆ ಪ್ರದೇಶಗಳಿಗೆ ಅಧಿಕಾರಿಗಳನ್ನು ಕಳುಹಿಸಿಕೊಟ್ಟು ಅಲ್ಲಿ ಏನು ಅಭಿವೃದ್ಧಿ ಆಗಬೇಕೋ ಅದನ್ನು ಮಾಡಲು ಯಾವರೀತಿ ಕಾರ್ಯಕ್ರಮ ಹಾಕಿಕೊಳ್ಳಬೇಕು ಎಂಬುದರ ಬಗ್ಗೆ ಸರ್ವೇ ಮಾಡಿಸಿದ್ದಾರೆ. ಇದರಿಂದ ಸರ್ಕಾರಕ್ಕೆ ಎಷ್ಟು ಹಣ ಅಭಿವೃದ್ಧಿಗೆ ಬೇಕಾಗಬಹುದು ಎಂಬ ಲೆಕ್ಕ ಸಿಗುತ್ತದೆ. ಕೊಳಚೆ ಪ್ರದೇಶದಲ್ಲಿ ವಾಸ ಮಾಡತಕ್ಕ ಜನ ಬಹಳ ನಿಕೃಷ್ಟವಾದ ಜನ. ಇಂಥ ಪ್ರದೇಶಗಳ ಜನರ ಬಗ್ಗೆ ಬಹಳ ವರ್ಷಗಳಿಂದ ಎಲ್ಲರೂ ಅಸಡ್ಡೆ ಮಾಡುತ್ತಿದ್ದಾರೆ. ಬೆಂಗಳೂರು ನಗರ ಸಭೆಯವರು ಒಂದು ಕಡೆ ಅಸಡ್ಡೆ ಮಾಡಿದರೆ ಬಿ.ಡಿ.ಎ ನವರು ಇವರಿಗಿಂತ ತೀರಾ ಅಸಡ್ಡೆ ಮಾಡಿದ್ದಾರೆ. ಇವರು ಕೊಳಚೆ ಪ್ರದೇಶ ಎಂದರೆ ಕೇರ್ ಮಾಡುವುದಿಲ್ಲ. ಬೆಂಗಳೂರು ನಗರ ಕಾರ್ಪೊರೇಷನ್ನಿನವರು ನೀರು, ಲೈಟು, ಚರಂಡಿಗೆ ಕಲ್ಲು ಚಪ್ಪಡಿ ಇಷ್ಟಾದರೂ ಹಾಕಿಕೊಟ್ಟಿದ್ದಾರೆ. ಆದರೆ ಬಿ.ಡಿ.ಎ ನವರಂತೂ ಏನೂ ಕೆಲಸ ಮಾಡಿಲ್ಲ. ಕಾರ್ಪೊರೇಷನ್ನಿನವರು ಮಾಡಿರುವುದರಲ್ಲಿ ಕೇವಲ ೧೦ ಪರ್ಸೆಂಟ್‌ನಷ್ಟು ಕೆಲಸವನ್ನೂ ಬಿ.ಡಿ.ಎ.ನವರು ಮಾಡಿಲ್ಲ. ಹೌಸಿಂಗ್ ಬೋರ್ಡಿನವರಂತೂ ಈ ಕೆಲಸಕ್ಕೆ ಕೈಹಾಕುವುದಿಲ್ಲ ಕೊಳಚೆ ನಿರ್ಮೂಲನಾ ಮಂಡಲಿಯಂತೂ ಈಗ ಜನ್ಮ ತಾಳಿದೆ. ಆ ಮಂಡಲಿಗೆ ಈಗ ಛೇರ್ಮನ್ನರಿಲ್ಲ. ಅದರ ಅಧಿಕಾರವನ್ನು ಯಾರ ಕೈಗೆ ಕೊಡುತ್ತಾರೋ ಗೊತ್ತಿಲ್ಲ. ನಾನು ಈ ಸಂದರ್ಭದಲ್ಲಿ ಮನವಿ ಮಾಡಿ ಕೊಳ್ಳುವುದೇನೆಂದರೆ ಮಾನ್ಯ ಮಂತ್ರಿಗಳಾದ ಧರ್ಮಸಿಂಗ್ ಅವರೇ ಅದರ ಛೇರ್ಮನ್ನರಾಗಿರಬೇಕು. ಅವರೇ ಛೇರ್ಮನ್ನರಾಗಿದ್ದುಕೊಂಡು ಜವಾಬ್ದಾರಿಯನ್ನು

ತೆಗೆದುಕೊಂಡರೆ ಬಹುಶಃ ಕೆಲಸಕಾರ್ಯಗಳು ವೇಗವಾಗಿ ಆಗುವುದಕ್ಕೆ ಸಾಧ್ಯ ಇದೆಯೆಂದು ನನಗಾದರೂ ಅನ್ನಿಸುತ್ತದೆ. ಯಾರೋ ಒಬ್ಬರನ್ನು ಛೇರ್ಮನ್ನರನ್ನಾಗಿ ಮಾಡುವುದು, ಮತ್ತೆ ಅವರನ್ನು ವಜಾ ಮಾಡುವುದು-ಹೀಗೆ ಮಾಡಿದರೆ ಪ್ರಗತಿ ದಾಯವಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಹಿಂದೆ ಕೆ.ಎಸ್.ಆರ್ ಟಿ.ಸಿ.ಗೆ ಸಾರಿಗೆ ಮಂತ್ರಿಗಳೇ ಛೇರ್ಮನ್ನರಾಗಿದ್ದರು. ಆಗ ಅಲ್ಲಿನ ಕೆಲಸಕಾರ್ಯಗಳು ಸುಸೂತ್ರವಾಗಿ ನಡೆಯುತ್ತಿತ್ತು. ಏನಾದರೂ ಲೋಪದೋಷಗಳಿದ್ದರೆ ಅದನ್ನು ಸರಿಪಡಿಸುವುದಕ್ಕೆ ಅನುಕೂಲವಾಗುತ್ತಿತ್ತು. ಆದ್ದರಿಂದ ಮಾನ್ಯ ಧರ್ಮಸಿಂಗ್ ಅವರಿಗೆ ಸ್ಲಂ ವಿಚಾರದಲ್ಲಿ ಬಹಳ ಅನುಕಂಪ, ಆಸಕ್ತಿ ಇರುವುದರಿಂದ ಇವರೇ ಅದರ ಛೇರ್ಮನ್ನರಾದರೆ ಬಹುಶಃ ಕೆಲಸಕಾರ್ಯಗಳು ಬಹಳ ಬೇಗ ಚೆನ್ನಾಗಿ ಆಗುತ್ತದೆ. ಈಗ ಅಲ್ಲಿ ಛೇರ್ಮನ್ನರು ಇಲ್ಲದೇ ಇರುವುದರಿಂದ ಮಾನ್ಯ ಮಂತ್ರಿಗಳೇ ಆ ಅಧಿಕಾರವನ್ನು ತೆಗೆದುಕೊಂಡು ಜವಾಬ್ದಾರಿ ವಹಿಸಿ ತಮ್ಮ ಕಾಲದಲ್ಲೇ ಸ್ಲಂ ಕ್ಲಿಯರೆನ್ಸ್ ಕೆಲಸವನ್ನು ಆರಂಭ ಮಾಡಬೇಕು.

12-00 ಮಧ್ಯಾಹ್ನ

ಕೊಳಚೆ ಪ್ರದೇಶಗಳ ವಿಚಾರ ಬಂದಾಗ, ಕೊಳಚೆ ಪ್ರದೇಶಗಳು ಯಾವ ರೀತಿ ಸೃಷ್ಟಿಯಾಗುತ್ತವೆಂದು ಅನೇಕ ಮಾನ್ಯ ಸದಸ್ಯರುಗಳು ಹೇಳುತ್ತಾರೆ. ಇದಕ್ಕೆ ಕೆಲವು ರಾಜಕೀಯ ಪಕ್ಷಗಳೂ ಕಾರಣವಾಗಿವೆ. ಒಂದೇ ರಾಜಕೀಯ ಪಕ್ಷ ಇದಕ್ಕೆ ಕಾರಣವೆಂದು ಕೆಲವರು ಹೇಳಿದ್ದರಿಂದ ನಾನು ಈಗ ಮಧ್ಯೆ ಪ್ರವೇಶಿಸಬೇಕಾಗಿ ಬಂದಿದೆ. ಕೊಳಚೆ ಪ್ರದೇಶಗಳ ನಿರ್ಮಾಣಕ್ಕೆ ಒಂದೇ ರಾಜಕೀಯ ಪಕ್ಷ ಕಾರಣವಲ್ಲ; ಅನೇಕ ರಾಜಕೀಯ ಪಕ್ಷಗಳು ಕಾರಣವಾಗಿವೆ. ಕೆಲಸಕಾರ್ಯಗಳಿಲ್ಲದೆ ಬೀದಿಯಲ್ಲಿ ಸುತ್ತುತ್ತಾ ಇರುವವರು ಅವರನ್ನು ಗುಂಡಾಗಳೆಂದು ಕರೆಯಬೇಕೋ ಅಥವಾ ಪುಡಾರಿಗಳೆಂದು ಕರೆಯಬೇಕೋ ಅಥವಾ ಕೊಳಚೆ ಪ್ರದೇಶಗಳ ಹುಟ್ಟುಗಾರರೆಂದು ಕರೆಯಬೇಕೋ ತಿಳಿಯದು ಒಂದು ಗುಂಪು ಕಟ್ಟಿಕೊಂಡು ಖಾಲಿ ಪ್ರದೇಶ ಎಲ್ಲಿದೆ ಎನ್ನುವುದನ್ನು ಹುಡುಕುತ್ತಾರೆ. ನಂತರ ಅಲ್ಲಿ ಮನೆ ಕಟ್ಟುವುದಕ್ಕೆ ಒಬ್ಬೊಬ್ಬರಿಂದ ನೂರು-ಇನ್ನೂರು ರೂಪಾಯಿಗಳನ್ನು ವಸೂಲ್ಮಾಡುತ್ತಾರೆ. ಹಣವನ್ನು ವಸೂಲ್ಮಾಡುವುದಕ್ಕೆ ಒಂದು ಗುಂಪಿರುತ್ತದೆ. ಅದಕ್ಕೊಬ್ಬ ನಾಯಕನಿರುತ್ತಾನೆ. ಅವನನ್ನು "ಬಾಸ್" ಎಂದು ಕರೆಯುತ್ತಾರೆ. "ಬಾಸ್ ಬಂದರಾ? ತಿಂಡಿ ತಿಂದರಾ? ಊಟ ಮಾಡಿದರಾ? ಕುಡಿಯುವುದಕ್ಕೆ ಕೊಟ್ಟಿರಾ? ಇವತ್ತು ಎಲ್ಲಿಗೆ ಹೋಗಬೇಕು? ದುಡ್ಡು ಕೊಟ್ಟಿರಾ? ಎನ್ನುವ ಮಾತುಗಳು ಆ ಗುಂಪಿನಲ್ಲಿ ಕೇಳಿಬರುತ್ತವೆ! ದಿನಕ್ಕೆ ಒಂದೆರಡು ರೂಪಾಯಿ ಕೂಲಿ ಸಂಪಾದಿಸಿಕೊಂಡು ಬಂದು ಅಡುಗೆ ಮಾಡಿ ತಿನ್ನುವುದಕ್ಕೂ ಅವಕಾಶ ಕೊಡದೆ ಬಡವರಲ್ಲಿರುವ ಹಣವನ್ನು ಇವರು ಕಿತ್ತುಕೊಳ್ಳುತ್ತಾರೆ. ಭಟ್ಟಿ ಸಾರಾಯಿ ಅಂಗಡಿಗಳು ಕೊಳಚೆ ಪ್ರದೇಶಗಳಲ್ಲಿ ತವರು ಮನೆಗಳಾಗಿವೆ. ಅವುಗಳನ್ನು ಪೋಲೀಸರು ತಡೆಯುವುದಕ್ಕೆ ಪ್ರಯತ್ನಿಸುವುದಿಲ್ಲ. ಅಷ್ಟೇ ಅಲ್ಲ, ಅವರನ್ನು ಮುಟ್ಟುವುದಕ್ಕೂ ಇವರು ಹೋಗುವುದಿಲ್ಲ. ಅವರು ಇವರ ಸ್ನೇಹಿತರು. ಅವರು ಇವರ ಸ್ನೇಹಿತರಾಗಿರುವವರೆಗೆ ಅಲ್ಲಿಂದ ಭಟ್ಟಿ ಸಾರಾಯಿ ಅಂಗಡಿಗಳು ಹೋಗುವುದಿಲ್ಲ. ಅವು ಹೋಗುವವರೆಗೆ ಅಲ್ಲಿನ ಜನ ಸುಧಾರಿಸುವುದಿಲ್ಲ. ಭಟ್ಟಿ ಸಾರಾಯಿ ಅಂಗಡಿಗಳನ್ನು ಅಲ್ಲಿಂದ ತೆಗೆಸಲು ನಾನು ಸಾಕಷ್ಟು ಸಲ ಪ್ರಯತ್ನ ಮಾಡಿದ್ದೇನೆ. ಆದರೆ, ಅದು ಆಗುತ್ತಾ ಇಲ್ಲ. ಇದು ನನ್ನ ಅನುಭವ. ಇಂದು ನನ್ನ ಮನೆಯ ಮುಂದೆಯೇ ಭಟ್ಟಿ ಸಾರಾಯಿ ಮಾರುತ್ತಾರೆ'. ಈ ವಿಷಯವನ್ನು ಪೋಲೀಸ್ ಕಮಿಷನರ್ ಅವರ ಗಮನಕ್ಕೂ ತಂದಿದ್ದೇನೆ; ಸಂಬಂಧಪಟ್ಟ ಎಲ್ಲ ಅಧಿಕಾರಿಗಳ ಗಮನಕ್ಕೂ ತಂದಿದ್ದೇನೆ. ಆದರೂ ಏನೂ ಆಗಿಲ್ಲ. ಇದರಿಂದಾಗಿ ಅಲ್ಲಿ ಮಾರುವವರು ನನ್ನನ್ನು ಕೇರ್ ಮಾಡುವುದೇ ಇಲ್ಲ. ನನ್ನ ಎದುರಿಗೆ ಧೈರ್ಯವಾಗಿ ಮಾರುತ್ತಾರೆ. "ವ್ಯವಹಾರವೋ ಅಥವಾ ಅವ್ಯವಹಾರವೋ" ಎಂದು ಮಾನ್ಯ ಬಸವಲಿಂಗಪ್ಪನವರು ಹೇಳಿದಂತೆ ಇದು ನಡೆಯುತ್ತಿದೆ ನನ್ನೆದುರಿಗೇ ನಡೆಯುತ್ತಿರುವುದನ್ನು ನಾನು ಕಣ್ಣುತುಂಬ ನೋಡುತ್ತಿದ್ದೇನೆ ಬೇಸರವಾಗಿ ಬಿಟ್ಟಿದ್ದೇನೆ. ಈ ರೀತಿಯಾಗಿ ಬಡಜನರ ಶೋಷಣೆ ನಡೆಯುತ್ತಾ ಹೋದರೆ ಈಗಿರುವ ಕೊಳಚೆ ಪ್ರದೇಶಗಳ ಜೊತೆಗೆ ಮುಂದಿನ ವರ್ಷ ಇನ್ನಷ್ಟು ಜಾಸ್ತಿಯಾಗುತ್ತವೆ. ಭಟ್ಟಿ ಸಾರಾಯಿ ಅಂಗಡಿಗಳ ಬಗ್ಗೆ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ: ನಿರ್ದಾಕ್ಷಿಣ್ಯವಾಗಿ ಅವರನ್ನು ಬಲಿ ಹಾಕಿ ಭಟ್ಟಿ ಸಾರಾಯಿ ವ್ಯಾಪಾರವನ್ನು ತಡೆಗಟ್ಟದಿದ್ದರೆ ಬಡ ಜನರ ನಾಶಕ್ಕೆ ನಾವೇ ಕಾರಣವಾಗಬೇಕಾಗುತ್ತದೆ. ಇದರ ಬಗ್ಗೆ ಸರ್ಕಾರ ತೀವ್ರ ಗಮನ ಕೊಡಬೇಕು. ಇಂದು ಬೆಂಗಳೂರು ನಗರದಲ್ಲಿ ಸುಮಾರು ನಾಲ್ಕು ನೂರು ಕೊಳಚೆ ಪ್ರದೇಶಗಳಿಗಿವೆ ಎಂದು ಹೇಳುತ್ತಿದ್ದಾರೆ, ಅಂದರೆ, ಬೆಂಗಳೂರಿನ ಅರ್ಧ ಭಾಗವನ್ನು ಇವು ಆಕ್ರಮಿಸಿ

ದಂತಾಯಿತು. ಬೆಂಗಳೂರು ನಗರಕ್ಕೆ ಸುಮಾರು ಆರು ಸಾವಿರ ಜನ ಪೌರಕಾರ್ಮಿಕರಿದ್ದಾರೆ. ಇವರನ್ನು ನಗರದ ಜನ ಸಂಖ್ಯೆಯ ಹತ್ತು-ಹದಿನೈದು ಲಕ್ಷ ಪ್ರಜೆಗಳಿಗೆ ಮಾತ್ರ ನೇಮಿಸಿದ್ದಾರೆ. ಕೊಳಚೆ ಪ್ರದೇಶದಲ್ಲಿ ವಾಸ ಮಾಡುತ್ತಿರುವ ಸುಮಾರು ಏಳೆಂಟು ಲಕ್ಷ ಜನರಿಗಾಗಿ ಒಬ್ಬ ಪೌರಕಾರ್ಮಿಕನೂ ಇಲ್ಲ. ಇದು ಯಾವ ಧರ್ಮ ? ಯಾವ ಧರ್ಮದಲ್ಲಿ ಹೀಗೆಂದು ಬರೆದಿದೆ ? ಶೂದ್ರರು ವೇದ ಕೇಳಬಾರದೆಂದು ಬರೆದಿರುವಂತೆ ಇದನ್ನೇನಾದರೂ ಧರ್ಮದಲ್ಲಿ ಬರೆದಿದೆಯೇ? ಕೊಳಚೆ ಪ್ರದೇಶಗಳಲ್ಲಿ ಯಾರನ್ನೂ ಬಿಟ್ಟು ಕೆಲಸ ಮಾಡಿಸಬೇಡಿ ಎಂದು ಯಾವುದೋ ಧರ್ಮದಲ್ಲಿ ಬರೆದಿರುವುದರಿಂದ ಹೀಗೆ ಮಾಡುತ್ತಿರಬಹುದೆಂದು ನನಗೆ ಸಂಶಯವುಂಟಾಗುತ್ತದೆ. ಹತ್ತು ಲಕ್ಷ ಪ್ರಜಾಸಂಖ್ಯೆಗೆ ಆರು ಸಾವಿರ ಜನ ಪೌರಕಾರ್ಮಿಕರು ಕೆಲಸ ಮಾಡುತ್ತಿದ್ದರೆ ಸುಮಾರು ಆರೇಳು ಲಕ್ಷ ಜನ ವಾಸಿಸುವ ಕೊಳಚೆ ಪ್ರದೇಶಗಳಿಗೆ ಒಬ್ಬರೂ ಪೌರಕಾರ್ಮಿಕರಿಲ್ಲದಿರುವುದನ್ನು ನೋಡಿದರೆ ನಾವೇನು ಮನುಷ್ಯರೆ, ನಮಗೆ ಮನಃಪತ ಇದೆಯೆ, ನಾಗರೀಕತೆ ನಮ್ಮಲ್ಲಿದೆಯೇ ಎಂದು ಪ್ರಶ್ನಿಸಿಕೊಳ್ಳಬೇಕಾಗಿದೆ. ನಿಜವಾಗಲೂ ನಾವು ಪ್ರಜಾಪ್ರಭುತ್ವದಲ್ಲಿದ್ದೇವೆಯೋ ಅಥವಾ ಬೇರೆ ಯಾವುದಾದರೊಂದು ಒಂದು ವ್ಯವಸ್ಥೆಯಲ್ಲಿದ್ದೇವೆಯೋ ಎಂದು ಯೋಚನೆ ಮಾಡಬೇಕಾಗಿದೆ. ಅಲ್ಲಿ ಬೀದಿ ಗುಡಿಸುವವರಿಲ್ಲ, ಕಸ ಎತ್ತುವವರಿಲ್ಲ. ದೀಪ, ನೀರಿನ ವ್ಯವಸ್ಥೆನ ಮೊದಲೇ ಇಲ್ಲ. ಶಾಲೆ ಗೋಜಿಗೆ ಯಾರೂ ಹೋಗುವುದಿಲ್ಲ. ಬೆಂಗಳೂರು ನಗರದಲ್ಲಿ ಏನೇನು ಕೊಳೆತು ಹೋಗುತ್ತದೆ ಕೊಳೆತ ತರಕಾರಿ, ಮೀನು, ಮಾಂಸ ಅವೆಲ್ಲ ಅಲ್ಲಿ ಮಾರಾಟವಾಗುತ್ತವೆ. ಅವರನ್ನು ಈ ರೀತಿ ಎರಡನೆ ದರ್ಜೆ ಜನರನ್ನಾಗಿ ಬೆಳೆಸುತ್ತಾ ಹೋದರೆ ಪ್ರಜಾಪ್ರಭುತ್ವ ವ್ಯವಸ್ಥೆ ಕಳಂಕವಾಗುತ್ತದೆ. ಹೊರದೇಶಗಳವರು ನಮ್ಮನ್ನು ನೋಡಿ ನಗುತ್ತಾರೆ. ಇದಕ್ಕೆಲ್ಲ ಅವಕಾಶ ಕೊಡಬೇಡಿ. ನಾಗರೀಕ ಸಮಾಜದಲ್ಲಿ ಅವರೂ ಸಹ ನಾಗರೀಕರಾಗಿ ಬಾಳಲು ಎಲ್ಲ ಸೌಲಭ್ಯಗಳನ್ನೂ ಒದಗಿಸಿಕೊಡುವುದು ನಮ್ಮ ಆದ್ಯ ಕರ್ತವ್ಯ. ಅವರನ್ನು ನಾವು ಮರೆಯಬಾರದು ಎಂದು ಹೇಳಿ, ನನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಪ್ರಭಾಕರ್ (ನೆಲಮಂಗಲ).— ಮಾನ್ಯ ಅಧ್ಯಕ್ಷರೇ, ಕೊಳಚೆ ಪ್ರದೇಶಗಳ ನಿರ್ಮೂಲನದ ಬಗ್ಗೆ ಶ್ರವಣಾವಕಾಶ ಸಮಯೋಚಿತವಾಗಿ ಒದಗಿದೆ. ಕೊಳಚೆ ಪ್ರದೇಶಗಳ ನಿರ್ಮೂಲನದ ಬಗ್ಗೆ ಮಾತಿಗೆ ಅವಕಾಶವಾಯಿತೆ ವಿನಹ ನಾವು ಹೇಳಿದ್ದೆಲ್ಲ ಕಾರ್ಯರೂಪವಾಗಿ ಕೊಳಚೆ ಪ್ರದೇಶ ವಾಸಿಗಳು ಮಾನವರಾಗಿ ಬಾಳುವುದಕ್ಕೆ ಅವಕಾಶವಾಗಿಲ್ಲ. ಇದಕ್ಕೆ ಯಾರು ಹೊಣೆ? ಮಿತ್ರರಾದ ಬಸವಲಿಂಗಪ್ಪನವರು ಮಾಡಿದ ಕೆಲಸವನ್ನು ಉದಾಹರಣೆಯಾಗಿ ತೆಗೆದುಕೊಂಡು ಖುದ್ದು ಶ್ರದ್ಧೆವಹಿಸಿ ಮಾಡಿದರೆ ಇವರ ಸುಧಾರಣೆಯಾಗುತ್ತದೆಯೇ ಹೊರತು ಅಧಿಕಾರಿ ಸರಣಿ ಜೋಡಿಸಿಟ್ಟು ಅವರನ್ನು ಬ್ಯುರೋಕ್ರಾಟ್ಸ್, ಅಂತೋ ಕ್ರ್ಯಾಟ್ಸ್, ಇಂತೋ ಕ್ರ್ಯಾಟ್ಸ್ ಎಂದು ಕರೆಯುವುದರಿಂದ ಪ್ರಯೋಜನವಾಗುವುದಿಲ್ಲ. ಇದು ಜಗತ್ತಿಗೇ ಗೊತ್ತಿರುವ ವಿಷಯ. ಮಾನ್ಯ ಬಸವಲಿಂಗಪ್ಪನವರು ಮಾಡಿದ ಒಂದೆರಡು ಸಾಧನೆಗಳು ನನಗಿನ್ನೂ ನೆನಪಿದೆ. ತಲೆಯ ಮೇಲೆ ಮಲ ಹೊರುವುದು ತಪ್ಪು ಎಂದು ಅವರು ಹೇಳಿ ಅದನ್ನು ನಿಲ್ಲಿಸಿದರು. ಅದು ಭಗೀರಥ ಪ್ರಯತ್ನ, ಅದನ್ನು ನೀವು ಮಾಡಬೇಡಿ, ನಿಮ್ಮನ್ನು ಯಾರಾದರೂ ಎಳೆದು ಆಚೆಗೆ ಹಾಕಿಬಿಟ್ಟಾರು, ಹುಷಾರ್ ಎಂದು ಅವರಿಗೆ ಕೆಲವರು ಹೇಳುತ್ತಿದ್ದರಂತೆ ಆದರೂ ಮಾನ್ಯ ಬಸವಲಿಂಗಪ್ಪನವರು ಧೈರ್ಯ ಮಾಡಿ ಅದನ್ನು ನಿಲ್ಲಿಸಿದರು. ಅವರದು ನಿಜವಾಗಿಯೂ ಧೈರ್ಯವಾಣಿ. ಯಾರು ಕೊಳಚೆ ಪ್ರದೇಶಗಳಲ್ಲಿದ್ದಾರೆ ಅವರ ಜೀವನ ಮಟ್ಟ ಸುಧಾರಣೆಯಾಗಬೇಕು, ಅವರು ಅಭಿವೃದ್ಧಿಯಾಗಬೇಕೆನ್ನುವ ತತ್ವ ಇದರಲ್ಲಿ ಅಡಗಿದೆ. ಇದು ನಿರ್ವಿವಾದ. ಇದರಲ್ಲಿ ಯುಕ್ತಿಣೆ ಇಲ್ಲ. ಇದು ಸರಿಯಾದ ವಿಚಾರ. ಹತ್ತಾರುಜನ — ಹೀಗೆ ಬರುವವರು ಹೋಗುವವರೆಲ್ಲ ಧೈರ್ಯ ಮಾಡಿ ಒಳ್ಳೆಯ ಕೆಲಸ ಮಾಡುತ್ತಾ ಹೋದರೆ ಇದು ಸಾಧ್ಯವೆ ಹೊರತು ಯಾರ ಮೇಲೋ ಜವಾಬ್ದಾರಿ ಹಾಕಿ ಕುಳಿತುಕೊಂಡರೆ ಆಗುವುದಿಲ್ಲ. ಎಲ್ಲರೂ ಹಾಲು ತಂದು ಹಾಕುತಿರುವಾಗ ಒಬ್ಬ ಮಾತ್ರ ನೀರು ತಂದು ಹಾಕಿದರೆ, ಇಂತಹವನೇ ನೀರು ತಂದು ಹಾಕಿದ ಎಂದು ಯಾರಿಗೆ ಗೊತ್ತಾಗುತ್ತದೆ? ಯಾರಿಗೂ ಕಾಣದಂತೆ ಮರೆಯಲ್ಲಿ ನೀರನ್ನು ಸುರಿಸಿ ಅವನು ಕಾಸು ತೆಗೆದುಕೊಂಡು ಹೋಗುತ್ತಾನೆ, ''ನಾನು ಅವನಿಗಿಂತ ಮೇಲು'' ಎನ್ನುವ ವರ್ತನೆ ಮನುಷ್ಯ ಬಾಳಿಗೆ ಬಲುಸುಲಭ. ಆದರೆ, ಮಾನ್ಯ ನಿಜಲಿಂಗಪ್ಪನವರು ಹಿಂದೆ ಹೇಳುತ್ತಿದ್ದರು. ''ನಾವು ಪ್ರಜಾ ಸೇವಕರು ಎಂದು. ಇದರ ಅರ್ಥ ಪ್ರಜೆಗಳು ನೇರವಾಗಿ ನಮಗೆ ಸಂಬಳವನ್ನು ಕೊಡದಿದ್ದರೂ ಸೇವೆ ಎನ್ನುವ ಮಾತು ಬಂದಾಗ ''ನಾನು ಎಲ್ಲರಿಗಿಂತ ಕಿರಿಯವ'' ಎನ್ನುವ ಭಾವನೆ ಬರಬೇಕು. ಇದು ಯಾರಿಗೆ ಬರಬೇಕು? ಯಾರಿಗಿಲ್ಲ ಅವರಿಗೆ ಬರಬೇಕು. ಅದಿಲ್ಲದಿದ್ದರೆ ಯಾರು ಮಂತ್ರಿಯಾದರೇನು? ಯಾರು ಐ.ಎ.ಎಸ್. ಅಧಿಕಾರಿಯಾದರೇನು? ಯಾರು ಅಯ್ಯೋ

ಅಧಿಕಾರಿಯಾದರೇನು ಅವರಲ್ಲಿ ಆ ಭಾವನೆ ಬರದಿದ್ದರೆ ಸಮಾಜದ ಗತಿ ಮುಗಿಯಿತು. ಜನರಲ್ಲಿ ಕ್ಷೋಭೆಯುಂಟಾಗಿ ಸರ್ಕಾರ ತತ್ತರಿಸುತ್ತದೆ. ಸದ್ಯದ ವಿದ್ಯಮಾನಗಳನ್ನೆಲ್ಲ ನೋಡುತ್ತಾ ಹೋದರೆ there is something wrong at all levels in our society ಎಂದು ಗೊತಾಗುತ್ತದೆ. ಇದನ್ನೆಲ್ಲ ಕಂಡರೂ ಕಾಣದ ಹಾಗೆ ಹೋಗುವುದು ಒಂದು ವಿಧಾನ.

ಪ್ರೋಗ್ರೆಸ್, ಗ್ರೋತ್ ಮತ್ತು ಆರೇಂಜ್‌ಮೆಂಟ್ it has got a definite life history growth. ಇಂದಿನ ಸಮಾಜದ ಮೇಲೆ ಎಲ್ಲಾ ಹೊರೆಯನ್ನು ಹಾಕುವುದಕ್ಕೆ ಪ್ರಯತ್ನ ಮಾಡುತ್ತೇವೆ. ನಮ್ಮ ದೇಶದ ಚೌಕಟ್ಟು ಯದ್ವತದ್ವ ಇದೆ, ನಮ್ಮ ಸಮಾಜದಲ್ಲಿರತಕ್ಕ ನ್ಯೂನತೆಗಳನ್ನು ಬಹಿರಂಗಪಡಿಸುವುದರಲ್ಲಿ ನಾವು ಹಿಂದೆ ಇದ್ದೇವೆ. ನಾನು ವಿಚಾರಕ್ಕೆ ಬರುತ್ತೇನೆ, ದಿವಂಗತ ರಾಧಾಕೃಷ್ಣನ್‌ರವರು ಕೊಳಚೆ ಪ್ರದೇಶಗಳ ನಿರ್ಮೂಲನದ ಬಗ್ಗೆ ಒಂದು ಮಾತು ಹೇಳಿದ್ದಾರೆ. Remove all slums Before that, remove your mental slums''. ಅಂತ ಹೇಳಿದ್ದಾರೆ. ಬಡತನದಲ್ಲಿ ಏತಕ್ಕೆ ಇದ್ದೀಯಾ ಎಂದು ಪ್ರಶ್ನೆ ಮಾಡಿದರೆ, ನಾನ ಬಡವನಾಗಿಯೇ ಇರುವುದು ನನ್ನ ಚಾಳಿ ಅಂದರೆ ಏನು ಮಾಡುವುದು ಇವತ್ತು ಬೆಂಗಳೂರು ನಗರದಲ್ಲಿ ಕೊಳಚೆ ಪ್ರದೇಶಗಳು ಬೆಳದಿವೆ, ಇವುಗಳಿಗೆ ಪರಿಹಾರ ಕಂಡುಹಿಡಿಯಬೇಕು. ಇದರ ಜವಾಬ್ದಾರಿಯನ್ನು ಸರ್ಕಾರದ ಮೇಲೆ ಹಾಕುತ್ತೇವೆ. ದುಡ್ಡು ಸಾಲದು ಅಧಿಕಾರ ಸಾಲದು ಎಂದು ಹೇಳುವುದಕ್ಕೆ ಪ್ರಯತ್ನ ಮಾಡುತ್ತೇವೆ, ಇದು ಚಿಚಿಕೆಗೇಡಿನ ಮಾತು. ಬಡ್ಜೆಟ್ ಮಾಡುವವರು, ಪ್ಲಾನ್ ಮಾಡುವವರು Here it is a kind of tragedy — - ಕಾನೂನು ಮಾಡುವವರು ಮಾಡುತಿಲ್ಲ, ದುಡ್ಡು ಕೊಡುವವರು ಕೊಡುತ್ತಿಲ. ಕೊಳಚೆ ಪ್ರದೇಶಗಳು ನಮ್ಮ ಹತ್ತಿರ ಬರುವುದೇ ಬೇಡ ಅನ್ನುವವರು ಇದ್ದಾರೆ. ಈಗ ಇಷ್ಟೆಲ್ಲಾ ಜನ ಸದಸ್ಯರು ಮಾತನಾಡಿದ್ದಾರೆ, ಮಂತ್ರಿಗಳು ಏನು ಉತ್ತರ ಹೇಳುತ್ತಾರೋ, ನಾನು ಹೇಳುವುದಕ್ಕಾಗುವುದಿಲ್ಲ. ಆದರೆ ಹಿಂದೆಲ್ಲಾ ನೀವೆ ಇದ್ದಿರಲ್ಲ, ನೀವುಗಳು ಏತಕ್ಕೆ ಈ ಕೆಲಸ ಮಾಡಲಿಲ್ಲ ಅಂತ ಎಲ್ಲೋ ಒಂದು ಕಡೆ ಸೇರಿಸುತ್ತಾರೆ. ಇದರ ಅರ್ಥ ಮಾನ್ಯ ಬಸಪಲಿಂಗಪ್ಪನವರು ೧೦ ವರ್ಷಗಳು ಇದ್ದರೆ ಹತ್ತನೇ ಒಂದು ಭಾಗ ರಿಮೂವ್ ಆಗುತ್ತೆ. ಅಂಥ ವ್ಯವಸ್ಥೆ ಇಲ್ಲದಿರುವಾಗ ಇಂಥ ಬೃಹದಾಕಾರವಾದ ಸಮಸ್ಯೆಯನ್ನು ಎಷ್ಟು ಜನ ಮಂತ್ರಿಗಳು, ಎಷ್ಟು ಸರ್ಕಾರಗಳು ಕೆಣುಕಿದರೂ ಕೂಡ ನಿವಾರಣೆ ಮಾಡುವುದಕ್ಕಾಗುವುದಿಲ್ಲ. ನಾವುಗಳು ಇವತ್ತು ಯೋಜನಾ ಯುಗದಲ್ಲಿದ್ದೇವೆ. ಇಷ್ಟು ವರ್ಷದಲ್ಲಿ ಇಂಥ ಕೆಲಸಗಳನ್ನು ಮಾಡದೇ ಇದ್ದರೆ ಸಂಬಳವೂ ಇಲ್ಲ, ಪ್ರೊಮೋಷನ್ನೂ ಇಲ್ಲ ಎನ್ನುವುದನ್ನು ನಾವು ಕ್ಲಿಯರ್ ಆಗಿ ತೋರಿಸಬೇಕು. ಮಂತ್ರಿಮಂಡಲದಲ್ಲಿ ನನಗೂ ಸ್ವಲ್ಪ ಅನುಭವ ಇದೆ. ಯಾರ ಸ್ವಭಾವಕ್ಕೆ ಯಾವ ಕೆಲಸದಲ್ಲಿ ಶಕ್ತಿ ಇದೆಯೆನ್ನುವುದನ್ನು ನೋಡಿ ಪ್ರಪಂಚದಲ್ಲಿ ಎಲ್ಲೂ ಮಂತ್ರಿಗಳನ್ನು ಕೊಟ್ಟಿದ್ದು ನನಗೆ ಗೊತ್ತಿಲ್ಲ. ಏನೋ ಮಂತ್ರಿಮಾಡಬೇಕು ಮಾಡಿಕೊಂಡು ಹೋಗುತ್ತಾರೆ. ಒಂದು ಪಕ್ಷ ಕೊಟ್ಟರೂ ಪ್ರಾಮಾಣಿಕತೆಯಿಂದ ಸೇವೆ ಮಾಡುವುದಕ್ಕಾಗುವುದಿಲ್ಲ. ಪ್ರಾಮಾಣಿಕತೆಯಿಂದ ಮಾಡುವುದಕ್ಕೆ ಹೋದರೆ ಯದ್ವಾತದ್ವಾ ಆಗುತ್ತದೆ. ತಳಕು ಮತ್ತು ಮೆರಗಿನಿಂದ ರಿಪೋರ್ಟ್ ಕೊಡತಕ್ಕ ಅಧಿಕಾರಿಗಳಿಗೆ ಪ್ರೊಮೋಷನ್ ಕೊಟ್ಟರೆ ಸರ್ಕಾರ ತಲೆಕೆಳಗಾಗುತ್ತದೆ. ಬುದ್ಧಿವಂತನೂ ಒಂದೇ, ದಡ್ಡನೂ ಒಂದೇ ದಂಡಿಯುವವನೂ ಒಂದೇ ಆರಾಮವಾಗಿ ಕಾಲಕಳೆಯುವವನೂ ಒಂದೇ ಮಾಡಿದರೆ ಹೇಗೆ ? ಕೊಳಚೆ ನಿರ್ಮೂಲನೆಗೆ ಸಂಬಂಧಪಟ್ಟಂತೆ ಒಬ್ಬ ದಕ್ಷ ಅಧಿಕಾರಿ ನೇತೃತ್ವದಲ್ಲಿ ಒಂದು ಇಲಾಖೆಯನ್ನು ಮಾಡಿ ಅಧಿಕಾರವನ್ನು ಕೊಟ್ಟು ನೋಡಿರಿ. ಮಾಮೂಲು ಆದರೆ there is something fundamentally wrong in the administrative approach. ಮಾದರಿ ಮನೆ ಬೇಕು ಎರಡು ಕಾರುಗಳು ಬೇಕು ಭೂಮಿಯಮೇಲೆ ವಾಸ ಮಾಡುವವನಲ್ಲ, ಕೊಳಚೆ ಪ್ರದೇಶಗಳಿಗೆ ಹೋಗುವುದಕ್ಕಾಗುವುದಿಲ್ಲ. ಅಲ್ಲಿ ದುರ್ವಾಸನೆ ಬರುತ್ತದೆ ಎನ್ನುವವರನ್ನು ಹಾಕುವುದಕ್ಕೆ ಹೋಗಬೇಡಿ. ಆದಕ್ಕಾಗಿಯೇ ನಾವುಗಳು ಅವಾತರಗಳ ರಹಸ್ಯವನ್ನು ತಿಳಿಯಬೇಕು, ದೇವರು ಏತಕ್ಕೆ ಬರಬೇಕು, ತಮಾಷಗೆ ಬರುತ್ತಾನೆಯೆ ಅಪರೇಷನ್ ಮಾಡತಕ್ಕ ಡಾಕ್ಟರು ಮೊದಲು ತನ್ನ ಹೊಟ್ಟೆಯನ್ನು ಕೊಯ್ದುಕೊಳ್ಳುತ್ತಾನೆಯೋ ಸೇಕ್ಸಿಪಿಯರ್ ಪ್ಲೇಗ್ ಬಗ್ಗೆ ವಿವರಣೆ ಕೊಟ್ಟಿದ್ದಾರೆ, ಹಾಗದರೆ ಅವನಿಗೆ ಪ್ಲೇಗ್ ಬಂದಿತ್ತು ಎಂದು ಭಾವಿಸುತ್ತೀರಾ ಇಲ್ಲಿ ಇವರ ಕರ್ತವ್ಯ ಏನು ಏನು ಸಾಧನೆ ಮಾಡಬೇಕು ಎಂಬುದನ್ನು ಯೋಚನೆ ಮಾಡಬೇಕು. ಕೊಳಚೆ ನಿರ್ಮೂಲನ ಮಂಡಲಿಯನ್ನು ಯಾರ ಕೈಗೂ ಕೊಡದಕ್ಕೆ ಆಗದೇ ಇದ್ದರೆ ಮುಖ್ಯಮಂತ್ರಿಗಳೇ ಇಟ್ಟುಕೊಳ್ಳಲಿ. ನನ್ನ ಕೈಯಲ್ಲಿ ಸರ್ವಶಕ್ತಿ ಇದೆ ಅಂದಮಾತ್ರಕ್ಕೆ ಪ್ರಗತಿ ಆಗಂವುದಿಲ್ಲ. ಮಂತ್ರ ತಂತ್ರದಿಂದ ಪ್ರಗತಿ ಮಾಡುವುದಕ್ಕೆ

ಆಗುವುದಿಲ್ಲ. ಪ್ರಗತಿ ಆಗದೇ ಇದ್ದರೆ ಜನ ನೋಡಿಕೊಳ್ಳುತ್ತಾರೆ. ಕೊಳಚೆ ಪ್ರದೇಶಗಳ ಬಗ್ಗೆ ಮಾತನಾಡುವುದಕ್ಕೆ ೭ ವರ್ಷಗಳು ಸಾಲದು. ಮೊನ್ನೆ ಬೆಂಗಳೂರಿನಲ್ಲಿ ನೀರಿಗೆ ತೊಂದರೆ ಬಂದಾಗ, ಶ್ರೀಕಂಠಯ್ಯನವರು ಮಂತ್ರಿಗಳಾಗಿದ್ದಾಗ ಬೋರ್‌ವೆಲ್‌ಗಳನ್ನು ಹಾಕಿ ನೀರಿನ ತೊಂದರೆ ನಿವಾರಣೆ ಮಾಡಬೇಕೆಂದು ತೀರ್ಮಾನ ಮಾಡಿದ್ದೆವು, ಅದು ಕಾರ್ಯರೂಪದಲ್ಲಿದೆಯೋ ಇಲ್ಲವೋ ಗೊತ್ತಿಲ್ಲ. ನಾವು ಇರತಕ್ಕ ಮನೆ ಎತ್ತರ ಪ್ರದೇಶದಲ್ಲಿದೆ ಮೊನ್ನೆ ಬೆಂಗಳೂರಿನಲ್ಲಿ ನೀರಿಗೆ ತೊಂದರೆಯಾದ ಸಮಯದಲ್ಲಿ ನಾನು ಊಟವಿಲ್ಲದೆ ಬಂದಿದ್ದೆ. ಬೋರ್ ಹಾಕಿಸಿಕೊಡಿ ಎಂದು ಜನ ನನ್ನನ್ನು ಕೇಳುತ್ತಿದ್ದರು, ಆದರ ಬಗ್ಗೆ ಪತ್ರ ಬರೆದೆ, ಇನ್ನೂ ಉತ್ತರವೂ ಇಲ್ಲ, ದಾಕ್ಷಿಣ್ಯವೂ ಇಲ್ಲ. ನಾವುಗಳು ವಿರೋಧಪಕ್ಷದ ಸಹಕಾರ ಕೋರುತ್ತೇವೆ. ಅದನ್ನು ತೆಗೆದುಕೊಳ್ಳುವುದಕ್ಕೆ ಶಕ್ತಿ ಇರಬೇಕು. ನಮಗೆ ಜನಗಳುಬಂದು ಬೋರ್ ಹಾಕಿಸಿಕೊಡಿ ಎಂದು ಹೇಳುತ್ತಾರೆ. ನಾನು ಮೂರು ಅಡಿ ಜಾಗ ಕೊಡುತ್ತೇನೆ ಬೋರ್ ತೆಗೆಸಿ ಎಂದು ಹೇಳಿದರೆ, ಅದು ಹೌಸಿಂಗ್‌ಬೋರ್ಡಿಗೆ ಸೇರಿದೆ, ಅವರು ಅವಕಾಶ ಕೊಡುತ್ತಾರೋ ಇಲ್ಲವೋ ಗೊತ್ತಿಲ್ಲ. ಪೊಲಿಟಿಕಲ್ ವ್ಯೂ, ಪೊಲಿಟಿಕಲ್ ಲುಕ್, ಪೊಲಿಟಿಕಲ್ ಬ್ಯಾಲೆನ್ಸ್ Where there is need for service we must forget everything except pure attitude for service. ಐ.ಪಿ.ಡಿ. ಸಾಲಪ್ಪನವರು ಕೊಳಚೆ ಪ್ರದೇಶಗಳವರಿಗೆ ನೀರು ಕೊಡಿ, ದೀಪ ಕೊಡಿ ಎಂದು ಹೇಳುತ್ತಾರೆ. ಆದರೆ ನಿರಂತರವಾಗಿ ಬೆಳೆಯುತ್ತಿರುವ ಕೊಳಚೆ ಪ್ರದೇಶಗಳನ್ನು ನಿವಾರಣೆ ಮಾಡಲು ಮತ್ತು ಅಭಿವೃದ್ಧಿ ಮಾಡಲು ಎಷ್ಟು ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕು There is economy. How much planning There is responsibility. How much execution ? There must be the will. ಎಷ್ಟು ದುಡ್ಡು ಖರ್ಚು ಮಾಡಿದರೂ ಈ ಬೃಹದಾಕಾರವಾದ ಸಮಸ್ಯೆಯನ್ನು ಹೋಗಲಾಡಿಸುವುದು ಕಷ್ಟವಾಗಿದೆ. ವರ್ಷಕ್ಕೆ ಇಷ್ಟಿಷ್ಟು ಕೊಳಚೆ ಪ್ರದೇಶಗಳನ್ನು ಅಭಿವೃದ್ಧಿ ಮಾಡುವ ಬಗ್ಗೆ ಪ್ಲಾನ್ ಮಾಡುವುದು ಸೂಕ್ತ.

ಅಧ್ಯಕ್ಷರೆ, ಒಬ್ಬ ಮನುಷ್ಯ ಒಂದು ದಿವಸಕ್ಕೆ ಒಂದು ಪಾವು ಅಕ್ಕಿ ಊಟ ಮಾಡುವುದು ಇದ್ದಾಗ ಹತ್ತು ಪಲ್ಲ ಅಕ್ಕಿ ಊಟ ಮಾಡುತ್ತಾನೆ ಅಂದರೆ ಆವನನ್ನು ಹುಚ್ಚು ಆಸ್ಪತ್ರೆಗೆ ಕಳುಹಿಸಬೇಕು ಅಂತ ಹೇಳುವುದು ಅಲ್ಲ. ಅವನು ಒಂದು ದಿವಸಕ್ಕೆ ಒಂದು ಪಾವು ಅಕ್ಕಿ ಊಟ ಮಾಡಿದರೆ ಇಪ್ಪತ್ತೈದು ವರ್ಷಕ್ಕೆ ಎಷ್ಟು ಊಟ ಮಾಡುತ್ತಾನೆ ಅಂತ ಗುಣಿಸುವುದೇ ಪ್ಲಾನಿಂಗ್. This is a kind of wonderful planning. ಈಗ ಬೋರ್ಡ್‌ಗೆ ಅಧಿಕಾರ ಇಲ್ಲ ಅಂದರೆ, ಬೋರ್ಡ್ ಕಾನ್‌ಸ್ಟಿಟ್ಯೂಟ್ ಮಾಡುವಾಗ ಯೋಚನೆ ಮಾಡಿರಲಿಲ್ಲವೇ?

ಛೇರ್‌ಮನ್.—ಮಾನ್ಯ ಸದಸ್ಯರಿಗೆ ಇನ್ನು ಎಷ್ಟು ಕಾಲ ಬೇಕಾಗುತ್ತದೆ ತಿಳಿಸಬೇಕು.

ಶ್ರೀ ಐ.ಪಿ.ಡಿ. ಸಾಲಪ್ಪ.—ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಪ್ರಭಾಕರ್ ಅವರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ, ಆದ್ದರಿಂದ ಅವರಿಗೆ ಸ್ವಲ್ಪ ಹೆಚ್ಚು ಸಮಯ ಕೊಡಬೇಕು.

ಶ್ರೀ ಕೆ. ಪ್ರಭಾಕರ್.—ಅಧ್ಯಕ್ಷರೆ, ತಾವು ಎಷ್ಟಕ್ಕೆ ನಿಲ್ಲಿಸಬೇಕು ಅಂತ ಹೇಳಿದರೆ ನಾನು ಅಷ್ಟಕ್ಕೆ ಅಡ್ಜಸ್ಟ್ ಮಾಡಿಕೊಳ್ಳುತ್ತೇನೆ. ಅಧ್ಯಕ್ಷರೆ, ಪ್ಲಾನಿಂಗ್ ರಿಪೋರ್ಟ್‌ನಲ್ಲಿ ಏನು ಬರೆಯುತ್ತಾರೆ. Our ambitions are greater. Our abilities are more greater. But still our achivement is questionable. Who is responsible ? ಇದನ್ನು ಬೆಂಗಳೂರಿಗೆ ಅಪ್ಲೈ ಮಾಡಿಕೊಳ್ಳಿ. ಈಗ ಬೋರ್ಡ್‌ಗೆ ಪವರ್ ಇಲ್ಲ ಎನ್ನುವುದನ್ನು ಒಪ್ಪಿಕೊಳ್ಳುವುದಿಲ್ಲ. ಅವರು ದ್ರೋಹಿಗಳು ಅಂತಲೂ ಹೇಳುವುದಿಲ್ಲ. ನಮಗೆ ಕಷ್ಟ ಬಂದಾಗ ನಮ್ಮ ಸೇವೆಗೆ ಬಂದರೆ ಸಾಕು ಅಂತ ಬೆಳೆಸಿದ್ದಾರೆ. ಇವೊತ್ತು ಬಡವ ಬಡವನೇ ಅಂತ ಹೇಳುವುದಕ್ಕೆ ಹೋದರೆ ಅದೃಷ್ಟ ಮುಂದೆ ತರುತ್ತಾರೆ ಬಟ್ಟೆ ಕೊಟ್ಟೆವು, ಭೂಮಿ ಕೊಟ್ಟೆವು, ಎಲ್ಲ ಕೊಟ್ಟರೂ ಅವನ ಅದೃಷ್ಟ ಮೇಲೆ ಬರಲಿಲ್ಲ ಅಂತ ಹೇಳುತ್ತಾರೆ. ಈ ಚೆಕ್‌ಮೇಟ್ ಪಾಲಿಸಿ ಆ್ಯಟಿಟ್ಯೂಡ್ ಅಡ್ಮಿನಿಸ್ಟ್ರೇಷನಲ್ಲಿ ಬೇಡ. ಸರ್ಕಾರದಲ್ಲಿ ದಕ್ಷತೆ ಇದ್ದರೆ ಏನು ಮಾಡಬೇಕು ಕೂಡಲೇ ಒಂದು ಇಲಾಖೆ ತೆರೆಯಿರಿ ಅಲ್ಲಿ ಒಳ್ಳೆಯ ಒಳ್ಳೆಯ ಅಧಿಕಾರಿಗಳನ್ನು ಇಡಿ ಅಂತ ಒಬ್ಬರು ಹೇಳಿದರೆ, ಇನ್ನೊಬ್ಬರು ಎಂ.ಎಲ್.ಎ ಗಳನ್ನು ಸೇರಿಸಿ ಅಂತ ಹೇಳಿದರು. ಆದುದರಿಂದ ಇದರ ಬಗ್ಗೆ ಒಂದು ಪರಫೆಕ್ಟ್ ಸರ್ವೆ ಮಾಡಿ ಒಂದು ಇಲಾಖೆಯನ್ನು ತೆರೆಯಿರಿ. ಇವೊತ್ತು ಈ ಕೊಳಚೆ ಪ್ರದೇಶಗಳಲ್ಲಿ ಚೌಕಾಸಿ ಜನರು ಲೀಡರ್‌ಗಳು ದುಡ್ಡು ತೆಗೆದುಕೊಳ್ಳುವುದು ಇದೆ ಅಂತ ಹೇಳುತ್ತಾರೆ. ಇದು ಇದೆಯೋ ಇಲ್ಲವೋ ಗೊತ್ತಿಲ್ಲ. ಆದರೂ ಈ ಸಂದರ್ಭದಲ್ಲಿ ಇದನ್ನು ಹೇಳಲಿಕ್ಕೆ ಸಾಧ್ಯ. ಏಕೆಂದರೆ ಈ ಕೊಟ್ಟಿದ್ದು, ತೆಗೆದುಕೊಂಡಿದ್ದು ಮಾಡಿ

ಅಭ್ಯಾಸ ಇಲ್ಲ. ಸಮಾಜ ಸುಧಾರಕರು ಅಂದರೆ ನೊಂದ ಮನಸ್ಸನ್ನು ಅರ್ಥಮಾಡಿಕೊಂಡು ಕೇಳುವವರ ಿ ಸಮಾಜ ಸುಧಾರಕರು. ಮೊನ್ನೆ ಮಾನ್ಯ ಮುಖ್ಯ ಮಂತ್ರಿಗಳು ಸಂಸ್ಕೃತಿ ವಿಚಾರದಲ್ಲಿ ಈ ಪ್ರಚಾರಕರಿಗೆ ಮೆನ್ ಆಫ್ ಲೆಟರ್ ಒಂದು ನೂರು ರೂಪಾಯಿ ಇದ್ದುದು ಎರಡು ನೂರು ರೂಪಾಯಿಗೆ ಮಾಡಿದರು. ಆಗ ಕೆಲವರು ಅವರಿಗೆ ಹೆಚ್ಚು ಮಾಡಿದ್ದು ಒಳ್ಳೆಯದು ಅಂತ ಹೇಳಿದರು. ಇನ್ನು ಕೆಲವರು ಅವರಿಗೆ ಹೆಚ್ಚು ಮಾಡಬಾರದಿತ್ತು ಅಂತ ಹೇಳಿದರು. ಅವರು ಹೊಟ್ಟೆಗಿಲ್ಲದ ಜನ ಹೆಚ್ಚು ತೆಗೆದುಕೊಳ್ಳಲಿ ಅಂತ ಕೆಲವರು. ಇವರ ಅಭಿಪ್ರಾಯ ಏನು ನಾವು ಧೈರ್ಯ ಮಾಡಿಕೊಟ್ಟಿದ್ದೇವೆ. ನೀವು ತೆಗೆದು ಕೊಳ್ಳಿ ಆದರೆ ನೀವು ಮಾತ್ರ ನಮ್ಮ ಸಹಾಯಕ್ಕೆ ಬರಬೇಕು ನಮ್ಮ ರಾಜಕೀಯ ತತ್ವಗಳನ್ನು ಪ್ರಚಾರ ಮಾಡಿಕೊಂಡು ಬರಬೇಕು ಎಂದು ಹೇಳಿಕೊಂಡು ಬಂದಿದ್ದಾರೆ. ಹಾಗೆ ನಾವು ಏನು ತಪ್ಪು ಮಾಡುತ್ತೇವೆ ಎನ್ನುವುದನ್ನು ಹೇಳಿ ಎಂದು ಹೇಳಿದ್ದಾರೆ, ಅದನ್ನು ನಾವು ಯೋಚನೆ ಮಾಡಬೇಕು. ಅವರನ್ನು ಬಿಟ್ಟು ಬೇರೆ ದಾರಿಯಲ್ಲಿ ಸರ್ಕಾರ ಯೋಚನೆ ಮಾಡಲಿಕ್ಕೆ ಆಗುವುದಿಲ್ಲವೆ ? ಒಬ್ಬ ಅಗಸಮಾರನ ಮಾತನ್ನು ಕೇಳಿ ಶ್ರೀರಾಮ ಗರ್ಭ ದರಿಸಿದ್ದಂತಹ ಸೀತಾಮಾತೆಯನ್ನು ಕಾಡಿಗೆ ಕಳುಹಿಸಿದ ಅಂತ ಹೇಳುತ್ತಾರೆ.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಸದಸ್ಯರು ಯಾರನ್ನು ಕಳುಹಿಸಬೇಕು ಅಂತ ಹೇಳುತ್ತಿದ್ದೀರಿ ?

ಶ್ರೀ ಕೆ. ಪ್ರಭಾಕರ್.—ಇರೀವವರೆಲ್ಲರೂ ಸುಖವಾಗಿರಬೇಕು ಅಂತ ನನ್ನ ಅಭಿಪ್ರಾಯ. ಆದರೆ ಇವರು ಈ ಪ್ರಚಾರ ಕಾರ್ಯವನ್ನು ಅವರಿಗೆ ಒಪ್ಪಿಸಿದ್ದಾರೆ. ಅಪೋಸಿಷನ್‌ನವರು ಏನು ಹೇಳುತ್ತಾರೆ ಎನ್ನುವುದನ್ನು ಕೇಳಬೇಕು ಈಗ ಇದು ಏನಾಗಿದೆ ಅಂದರೆ ಒಂದು ಹೋಟಲಿಗೆ ಹೋದಾಗ ದುಡ್ಡು ಕೊಡುವವರು ಯಾರು ಅಂತ ಬಂದಾಗ ಒನ್ ಬೈಟು ಕೊಡ್ರಿ ಅಂತ ಹೇಳುತ್ತಾರೆ. ಮತ್ತೊಬ್ಬರು ಒನ್ ಬೈ ಥ್ರಿ ಕೊಡ್ರಿ ಅಂತ ಹೇಳುತ್ತಾರೆ. ಆದ್ದರಿಂದ ಅಪೋಸಿಷನ್ ನವರು ಏನು ಹೇಳುತ್ತಾರೆ ಸತ್ಯಾಂಶ ಏನು ಇದೆ ಅಂತ ತಿಳಿಯಬೇಕು. ತಾವು ಅವರಿಗೆ ದುಡ್ಡು ಕೊಟ್ಟು ಅವರಿಂದ ಹೇಳಿಸಿಕೊಳ್ಳಬೇಕಾಗಿಲ್ಲ ಒಟ್ಟು ಇಷ್ಟೇ ಇದರ ಸಾರಾಂಶ. ಒಂದು ವೇಳೆ ನಾವು ಹೇಳಿದ್ದನ್ನು ಮಾಡಿದಿರಿ ಅಂತ ತಿಳಿದುಕೊಳ್ಳಿ, ಏಕೆಂದರೆ ನಾವು ಆ ಕಡೆಗೆ ಹೋಗಿ ಬಂದಿದ್ದೇವೆ, ಮತ್ತೆ ಹೋಗಬಹುದು. ನಾವು ಅಲ್ಲಿಗೆ ಹೋದಾಗ ಇದು ತಮಗೂ ಅನ್ವಯಿಸುತ್ತದೆಯೋ ಅಂದರೆ ಅಕ್ಷರಶಃ ಅನ್ವಯಿಸುತ್ತದೆ ಎಂದು ಹೇಳುತ್ತೇನೆ. ಹಿಂದೆ ಮಾನ್ಯ ರಾಮಕೃಷ್ಣ ಅವರು ಭಾಷಣ ಮಾಡುವ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದ್ದರು ಅದು ಏನು ಅಂದರೆ, ನಿಮ್ಮ ಕೋಟು ಬಹಳ ಲಕ್ಷಣ ಇದೆ ಆದರೆ ನಿಮ್ಮ ಕೈಯಲ್ಲಿರುವ ಗ್ರಾಮಪಂಚಾಯಿತಿಗಳು ಇಷ್ಟು ಲಕ್ಷಣವಾಗಿಲ್ಲ ಅಂತ ಹೇಳಿದರು. ಈಗ ನಾನು ಅವರಿಗೆ ಅದೇ ಮಾತನ್ನು ಕೇಳಬಹುದು. ಏಕೆಂದರೆ ಅವರು ಮೊದಲನೆಯದಾಗಿ ಬೆಂಗಳೂರಿನ ಮಂತ್ರಿಗಳು ಎರಡನೇಯದಾಗಿ ಕರ್ನಾಟಕದವರು ಅಂತ ಇಟ್ಟುಕೊಂಡರೆ ಈಗ ಅವರು ಏನು ಮಾಡುತ್ತಾರೆ ಎಂದು ಕೇಳಬೇಕಾಗುತ್ತದೆ. ನಾನು ಜವಾಬ್ದಾರಿಯಿಂದ ಮಾತನಾಡುವುದರಿಂದ ಎಲ್ಲವನ್ನೂ ಮೂರು ದಿವಸದಲ್ಲೇ ಮಾಡಿ ಮುಗಿಸಲಿಕ್ಕೆ ಸಾಧ್ಯ ಅಂತ ಹೇಳುವುದಿಲ್ಲ. In politics what counts is practicability, not so much of political theory. ಈ ದಿಸೆಯಲ್ಲಿ ಒಂದು ಇಲಾಖೆ ತೆರೆಯಬೇಕು ಅಂದರೆ ಅದಕ್ಕೆ ಒಂದು ಸರ್ವೆ ಡಿಪಾರ್ಟ್‌ಮೆಂಟ್ ಬೇರೆ ಇರಬೇಕು, ಟೈಮ್‌ಬೌಂಡ್ ಪ್ರೋಗ್ರಾಂ ಬೇಕಾಗುತ್ತದೆ. ಇದೆಲ್ಲಾ ಬೇಡ ಬೆಂಗಳೂರಿನಲ್ಲಿ ಸ್ವೇಚ್ಛೆಯಾಗಿ ಹುಟ್ಟಿ ಬೆಳೆಯುತಕ್ಕ ಸ್ಲಮ್‌ಗಳಿಗೆ ಒಂದು ಪರ್‌ಮಿಟ್ ಇರಬೇಕು ಅಂದರೆ ಮಂತ್ರಿಗಳು ಟೂರ್ ಹೋಗಿರುವಾಗ ನೀವು ಹೋಗಿ ವಾಪಸ್ಸು ಬರುತ್ತೀರಾ ಎಂದು ಕೇಳುತ್ತಾರೆ. ಆಗ ಎಲ್ಲದ್ದಕ್ಕೂ ಪರ್‌ಮಿಟ್ ಬೇಕಾಗುತ್ತದೆ. ಪರ್‌ಮಿಟ್ ಅವರಿಗೆ ಯಾವ ರೀತಿ ಕೊಡಬೇಕು ಇದೊಂದು ದೊಡ್ಡ ಪ್ರಾಬ್ಲಮ್ ಆಗುತ್ತದೆ ಸ್ಲಮ್ ಜನರು ಅಂದರೆ ಜನರು ಅಂದರೆ ಪೋಸ್ಟ್ ಆಫೀಸ್‌ಗೆ ಹಾಕಿದ ಲೆಟರ್‌ನ ಹಾಗೆ ಓಡಾಡಿಸುವುದು ಅಲ್ಲ ಅವರಿಗೆ ಕುಡಿಯುವ ನೀರು, ರಸ್ತೆ ಸೌಕರ್ಯ, ದೀಪದ ಸೌಕರ್ಯ ಅಂಗಡಿಗಳು, ಜ್ಞಾನ ಮಂದಿರ ಬೇಕಾಗುತ್ತದೆ. ಆದರೆ ಹೆಂಡದ ಅಂಗಡಿ ಬೇಡ ಅಂತ ಹೇಳುವುದನ್ನು ಎಲ್ಲರೂ ಒಪ್ಪುತ್ತಾರೆ. ಅವರಿಗೆ ವರ್ಕ್‌ಷಾಪ್, ಪೌರ ಜೀವನಕ್ಕೆ ಏನೇನು ಅವಶ್ಯಕತೆಗಳು ಇವೆ ಅವುಗಳನ್ನೆಲ್ಲಾ ಮಾಡಿಕೆದಡಬೇಕಾಗುತ್ತದೆ, ತಾವು ಒಂದು ವರ್ಷಕ್ಕೆ ಎರಡೆರಡು ಸ್ಲಮ್‌ಗಳನ್ನು ಇಂಪ್ರೂವ್ ಮಾಡಿ ನಗರದ ಗುಂಪಿಗೆ ಸೇರಿಸಿಕೊಳ್ಳುವ ಏರ್ಪಾಡು ಮಾಡಿ. ಈಗ ಬಿ. ಡಿ. ಎ. ಅವರು ಒಂದು ಏರಿಯಾವನ್ನು ಯದ್ವಾತದ್ವ ಮಾಡಿದರೆ ಕಾರ್ಪೊರೇಷನ್ನಿನವರು not yet handed over ಅಂತ ಹೇಳುವುದಿಲ್ಲವೆ. You apply the same principles to slum clearnce.

ನೀವು ಅದನ್ನೇ ಹೇಳಿ. ಇವೊತ್ತು ಪೌರಮಟ್ಟಕ್ಕೆ ಸೇರಿಸಿಕೊಳ್ಳಬೇಕು ಎಂದರೆ ಅದಕ್ಕೆ ಒಂದು ಟೈಮ್ ಬೌಂಡ್ ಪ್ರೋಗ್ರಾಂ ಹಾಕಿಕೊಳ್ಳಬೇಕು. ಸ್ಲಮ್ ಅಂದರೆ ಡಿಕ್ಷನರಿಯಲ್ಲಿ ಹೊಲಗೇರಿ ಅಂತ ಬರೆದಿದ್ದಿರು. ಈಗ ಅದನ್ನು ಬಿಟ್ಟು ಸ್ಲಮ್ ಅಂದರೆ ಕೊಳಚೆ ಪ್ರದೇಶ ಅಂತ ಹೇಳಿರುವುದರಿಂದ ಅಲ್ಲಿ ಇಮಾಮ್, ನರಸಿಂಹಶಾಸ್ತ್ರಿಗಳು, ಗುಂಡಮ್ಮನವರು, ಎಲ್ಲಾ ಜಾತಿಯವರು ಸೇರಿಬಿಟ್ಟಿದ್ದಾರೆ. ಈಗ ಹೊಲಗೇರಿ ಎನ್ನತಕ್ಕಂತಹ ಒಂದು ದೋಷ ನಿವಾವರಣೆಯಾಗಿದೆ. ಇವೊತ್ತು ಅಲ್ಲಿ ಒಂದು ಸರ್ವೋದಯ ಕೇಂದ್ರ ಅಂತ ಕಟ್ಟಡ ಮಾಡಿ. ಈ ಕಮ್ಯುನಿಟಿ ಸೆಂಟರ್ ಅಂತ ಏನು ಕಟ್ಟುತ್ತೀರಾ ಅಲ್ಲಿ ಅವರಿಗೆ ಒಂದು ಟ್ರೈನಿಂಗ್ ಕೊಡಿ. ಒಂದು ಬಳಪದ ಕಲ್ಲಿನಲ್ಲಿ ಬಸವಣ್ಣನನ್ನು ಮಾಡುವುದು ಸಾಧ್ಯ, ಅದೇ ಬೆಣಚು ಕಲ್ಲಿನಲ್ಲಿ ಹೇಗೆ ಮಾಡಲಿಕ್ಕೆ ಸಾಧ್ಯ. ಬೆಣಚುಕಲ್ಲಿನಲ್ಲಿ ಮೂಗು ಕೊರೆಯಲಿಕ್ಕೆ ಹೋದರೆ ಮುಂಸಡಿ ಆಗುತ್ತದೆ. ಕಿವಿ ಕೊರೆಯಲಿಕ್ಕೆ ಹೋದರೆ ಮತ್ತೊಂದು ಆಗುತ್ತದೆ. ಬೆಣಚುಕಲ್ಲಿನಲ್ಲಿ ಅಷ್ಟೊಂದು ಸುಲಭವಾಗಿ ಮಾಡಲಿಕ್ಕೆ ಆಗುವುದಿಲ್ಲ. ಈ ತರಹ ಇರುವುದರಿಂದ ಸರ್ವೋದಯ ಕೇಂದ್ರಗಳನ್ನು ಮೊದಲು ಸ್ಥಾಪನೆ ಮಾಡಿ, ಅದು ಹೇಗೆ ಮಾಡಬೇಕು ಎನ್ನುವುದಾದರೆ ನಮ್ಮನ್ನು ಕೇಳಿ ಹೇಳುತ್ತೇವೆ. ಇಲ್ಲ ನೀವು ಮಾಡಿ ಆಗ ನೀವು ಮಾಡುವುದು ಸರಿಯೋ ತಪ್ಪೋ ನಾವು ಹೇಳುತ್ತೇವೆ. ಇಷ್ಟನ್ನು ಹೇಳಿ, ಇಷ್ಟು ಕಾಲ ಮಾತನಾಡಲು ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

೧೨.೩೦ ಪಿ.ಎಂ.

† ಶ್ರೀ ಧರ್ಮಸಿಂಗ್ (ನಗರಾಡಳಿತ ಸಚಿವರು).—ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ಈ ಸದನದಲ್ಲಿ ಮಾನ್ಯ ಸದಸ್ಯರಾದ ಶ್ರೀಮಾನ್ ಪಿ. ರಾಮದೇವ್‌ರವರು ತಂದಿರತಕ್ಕಂತಹ ಈ ಒಂದು ನಿರ್ಣಯದ ಬಗ್ಗೆ ಎಲ್ಲ ಮಾನ್ಯ ಸದಸ್ಯರುಗಳು ಬಹಳ ವಿವರವಾಗಿ ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ. ಈ ಕೊಳಚೆ ಪ್ರದೇಶದಲ್ಲಿರತಕ್ಕಂತಹ ಜನರ ಸಮಸ್ಯೆಗಳ ವಿಚಾರವಾಗಿ ನನಗೂ ಕೂಡ ಇವತ್ತಿನ ದಿವಸ ಸಾಕಷ್ಟು ಮಾನ್ಯ ಸದಸ್ಯರು ಹೇಳಿದಂತಹ ವಿಚಾರಗಳನ್ನು ಕೇಳಿ ನನಗೆ ಮನವರಿಕೆ ಯಾಗಿದೆ ಆದರೂ ಕೂಡ ಸರ್ಕಾರದವರು ಈಗಾಗಲೇ ಪ್ರಸ್ತಾಪ ಮಾಡಿದ ಹಾಗೆ ಈ ಸಮಸ್ಯೆ ವಿಶೇಷವಾಗಿ ಬೆಂಗಳೂರು ನಗರದಲ್ಲಿ ಬೃಹದಾಕಾರವಾಗಿ ಬೆಳೆಯುತ್ತಿದೆ. ಈ ಸಮಸ್ಯೆ ಬಗ್ಗೆ ಸರ್ಕಾರ ಬಹಳ ತೀವ್ರಗತಿಯಿಂದ ಗಮನ ಕೊಡಬೇಕು ಎಂಬುದಾಗಿ ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯವನ್ನು ವ್ಯಕ್ತಮಾಡಿದ್ದಾರೆ ಮಾನ್ಯ ರಾಮ್‌ದೇವ್‌ರವರ ನಿರ್ಣಯದ ಪ್ರಸ್ತಾವನೆ ಏನಿದೆ ಅಂದರೆ ಅದು ಕೇವಲ ಬೆಂಗಳೂರು ನಗರಕ್ಕೆ ಸಂಬಂಧಪಟ್ಟಿರತಕ್ಕಂತಹದ್ದು. ವಿಶೇಷವಾಗಿ ಅದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಕೆಲವು ಮಾನ್ಯ ಸದಸ್ಯರು ಕರ್ನಾಟಕ ರಾಜ್ಯದಲ್ಲಿರತಕ್ಕಂತಹ ಎಲ್ಲ ಕೊಳಚೆ ಪ್ರದೇಶಗಳ ಬಗ್ಗೆ ಕೂಡ ಪ್ರಸ್ತಾಪ ಮಾಡಿದ್ದಾರೆ. ಆದರೆ ನಾನು ಕರ್ನಾಟಕ ರಾಜ್ಯದಲ್ಲಿರತಕ್ಕಂತಹ ಎಲ್ಲ ಕೊಳಚೆ ಪ್ರದೇಶಗಳಲ್ಲಿರುವ ಸಮಸ್ಯೆಗಳ ಬಗ್ಗೆ ಪ್ರಸ್ತಾಪ ಮಾಡದೆ, ಬೆಂಗಳೂರು ನಗರಕ್ಕೆ ಸೀಮಿತವಾಗಿ ಈ ಒಂದು ನಿರ್ಣಯವನ್ನು ತಂದಿರುವುದರಿಂದ ಬೆಂಗಳೂರು ನಗರದಲ್ಲಿ ಈ ಕೊಳಚೆ ಪ್ರದೇಶಗಳು ಬೃಹದಾಕಾರವಾಗಿ ಬೆಳೆಯುತ್ತಿರುವುದರ ಬಗ್ಗೆ ಸರ್ಕಾರ ಏನೇನು ಕ್ರಮಗಳನ್ನು ತೆಗೆದುಕೊಂಡಿದೆ ಎಂಬುದನ್ನು ಹೇಳುವುದಕ್ಕೆ ಬಯಸುತ್ತೇನೆ. ಬೆಂಗಳೂರು ನಗರದಲ್ಲಿರುವ ಕೊಳಚೆ ಪ್ರದೇಶಗಳನ್ನು ನಿರ್ಮೂಲನ ಮಾಡುವುದರ ಬಗ್ಗೆ ವಿಶೇಷವಾಗಿ ಮಾನ್ಯ ಸದಸ್ಯರುಗಳಾದ ಶ್ರೀಮಾನ್ ಬಸವಲಿಂಗಪ್ಪನವರು, ಶ್ರೀಮಾನ್ ಪ್ರಭಾಕರ್‌ರವರು, ಪ್ರಸ್ತಾಪ ಮಾಡಿದ್ದಾರೆ. ಶ್ರೀಮಾನ್ ಐ.ಪಿ.ಡಿ. ಸಾಲಪ್ಪನವರು, ಶ್ರೀ ಲಕ್ಷ್ಮೀಸಾಗರ್‌ರವರು ಹಾಗೂ ಶ್ರೀ ರಾಮ್‌ದೇವ್‌ರವರು ನಗರ ಸಭೆಯ ಸದಸ್ಯರಾಗಿ ಕೆಲಸ ಮಾಡಿದವರಾಗಿರುತ್ತಾರೆ. ಅವರಿಗೆ ಸಾಕಷ್ಟು ಅನುಭವ ಇದೆ. ಮತ್ತು ಅವರ ಅನುಭವದ ಬಗ್ಗೆ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ ಇವತ್ತು ಬೆಂಗಳೂರು ನಗರದಲ್ಲಿ ಈ ಕೊಳಚೆ ಪ್ರದೇಶದಲ್ಲಿ ಜೀವನ ಮಾಡುತ್ತಿರತಕ್ಕಂತಹ ಜನರ ಸಂಖ್ಯೆ ೫ ಲಕ್ಷ. ನಾನು ಈ ಖಾತೆಯ ಮಂತ್ರಿಯಾಗಿ ಕೇವಲ ೪ ತಿಂಗಳು ಆಯಿತು. ಈ ೪ ತಿಂಗಳ ಅವಧಿಯಲ್ಲಿ ಸಾಕಷ್ಟು ಕೊಚೆ ಪ್ರದೇಶಗಳಲ್ಲಿರುವ ಸಮಸ್ಯೆಗಳು ಏನಿವೆ ಅವುಗಳನ್ನು ನಿವಾರಣೆ ಮಾಡುವುದಕ್ಕೋಸ್ಕರ ಯಾವ ರೀತಿ ಮಾಡಬೇಕು ಎನ್ನತಕ್ಕಂತಹ ದೃಷ್ಟಿಯಿಂದ ಪ್ರಾಮಾಣಿಕವಾಗಿ ನಿಷ್ಠೆಯಿಂದ ಅದರ ಬಗ್ಗೆ ತೀವ್ರ ರೀತಿಯಾದ ಗಮನವನ್ನು ಹರಿಸಿ ಅದರ ಬಗ್ಗೆ ಸಾಕಷ್ಟು ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೇನೆ. ಆದರೂ ಕೂಡ ಈ ಒಂದು ಪರಿಸ್ಥಿತಿ ಏನಿದೆ ಈಗಿನ ನಮ್ಮ ಸರ್ಕಾರ ಏನಿದೆ ಇಲ್ಲಿಯವರೆವಿಗೂ ಯಾವುದೇ ರೀತಿಯ ಹೊಸದಾದ ಕೊಳಚೆ ಪ್ರದೇಶಗಳು ನಿರ್ಮಾಣ ಮಾಡುವುದಕ್ಕೆ

ಅವಕಾಶ ಕೊಡದೆ, ಇರತಕ್ಕಂತಹ ಕೊಳಚೆ ಪ್ರದೇಶಗಳಲ್ಲಿರುವಂತಹ ಸಮಸ್ಯೆಗಳನ್ನು ಈ ೪ ತಿಂಗಳ ಅವಧಿಯಲ್ಲಿ ಎಲ್ಲವನ್ನು ಪರಿಹರಿಸುವುದಕ್ಕಾಗುವುದಿಲ್ಲ. ಏಕೆಂದರೆ ಕೊಳಚೆ ಪ್ರದೇಶ ಬೆಳೆಯಲು ಕೆಲವು ಪಕ್ಷದವರು ಹೆಚ್ಚು ಸಹಕಾರ ಮಾಡುತ್ತಿದ್ದಾರೆ. ಕೆಲವು ಪಕ್ಷ ಅವುಗಳನ್ನು ತಡೆಗಟ್ಟಬೇಕೆಂದು ಹೇಳುತ್ತಿದ್ದಾರೆ. ಆದರೂ ಕೂಡ ಇವತ್ತಿನ ದಿವಸ ಈ ಕೊಳಚೆ ಪ್ರದೇಶಗಳು ಒಂದು ಚಾಲೆಂಜ್ ಆಗಿವೆ. ಬೆಂಗಳೂರು ನಗರ ಸೌಂದರ್ಯಕ್ಕೆ ದಕ್ಕೆ ತರುವಂತಹ ರೀತಿಯಲ್ಲಿ ಇವುಗಳು ಬೆಳೆಯುತ್ತಿವೆ. ಅವುಗಳನ್ನು ತಡೆಗಟ್ಟಬೇಕಾಗಿದೆ. ನಿಯಂತ್ರಣ ಮಾಡಬೇಕಾಗಿದೆ. ಮುಂದೆ ಈ ರೀತಿಯ ಕೊಳಚೆ ಪ್ರದೇಶಗಳು ಬೆಳೆಯದಂತೆ ಮಾಡಬೇಕೆಂದು ಎಲ್ಲ ಸದಸ್ಯರು ಹೇಳಿದ್ದಾರೆ. ಅದರಬಗ್ಗೆ ಸಾಕಷ್ಟು ಗಮನವನ್ನು ತೆಗೆದುಕೊಳ್ಳಬೇಕೆಂತಲೂ ಹೇಳಿದ್ದಾರೆ. ಮತ್ತೆ ಈ ಕೊಳಚೆ ಪ್ರದೇಶಗಳನ್ನು ನಿರ್ಮೂಲನ ಮಾಡುವುದರ ಜೊತೆಗೆ ಮುಂದೆ ಈ ನಗರಕ್ಕೆ ಬರತಕ್ಕಂತಹ ಜನರು ಏನಿದ್ದಾರೆ ಅವರುಗಳನ್ನೂ ತಡೆಗಟ್ಟಬೇಕೆಂದು ಪ್ರಸ್ತಾಪ ಮಾಡಿದ್ದಾರೆ. ಇವತ್ತು ಬೆಂಗಳೂರು ನಗರದಲ್ಲಿ ೩೦೬ ಕೊಳಚೆ ಪ್ರದೇಶಗಳು ಇವೆ. ಇನ್ನೂ ಬಹಳಷ್ಟು ಜನರು ನಗರಕ್ಕೆ ಬರುತ್ತದ್ದಾರೆ ಎನ್ನುವ ಮಾತನ್ನೂ ಪ್ರಸ್ತಾಪ ಮಾಡಿದ್ದಾರೆ.

ಶ್ರೀ ಪಿ. ರಾಮದೇವ್.—ಮಂತ್ರಿಗಳನ್ನು ನಾನು ಕೇಳುವುದೇನೆಂದರೆ ನಗರದಲ್ಲಿರತಕ್ಕಂತ ಒಟ್ಟು ಕೊಳಚೆ ಪ್ರದೇಶಗಳ ಸಂಖ್ಯೆ ಎಷ್ಟು? ಏಕೆಂದರೆ ನಮಗೆ ಒಂದೊಂದು ಕಡೆ ಒಂದೊಂದು ರೀತಿಯ ಅಂಕಿ ಸಂಖ್ಯೆಗಳನ್ನು ಕೊಟ್ಟಿದ್ದಾರೆ. ಆದರೆ ನಮಗೆ ತಿಳಿದಿರುವ ಪ್ರಕಾರ ೪೩೪ ಕೊಳಚೆ ಪ್ರದೇಶಗಳು ಇವೆ ಎಂಬುದಾಗಿ ತಿಳಿದು ಬಂದಿದೆ, ಆದರೆ ತಾವು ಈಗ ಹೇಳುತ್ತಿದ್ದೀರಿ ೩೦೬ ಕೊಳಚೆ ಪ್ರದೇಶಗಳಿವೆ ಎಂದು. ಇದರಿಂದ ನಿರ್ಧಿಷ್ಟವಾಗಿ ಒಟ್ಟು ನಗರದಲ್ಲಿರುವ ಕೊಳಚೆ ಪ್ರದೇಶಗಳ ಸಂಖ್ಯೆ ಎಷ್ಟು ಎಂಬುದನ್ನು ತಿಳಿಸಿದರೆ ಉಪಕಾರವಾಗುತ್ತದೆ.

ಶ್ರೀಮತಿ ಎಸ್. ಪ್ರಮೀಳ.—ಈ ನಿರ್ಣಯವನ್ನು ಕೊಟ್ಟ ಮೇಲೆ ಎಷ್ಟು ಕೊಳಚೆ ಪ್ರದೇಶಗಳು ಹೊಸದಾಗಿ ಬಂದಿವೆ ಎಂಬುದನ್ನೂ ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಧರ್ಮಸಿಂಗ್.—ನನ್ನಲ್ಲಿರುವ ಮಾಹಿತಿ ಪ್ರಕಾರ ಕಾರ್ಪೊರೇಷನ್‌ರವರು ೧೮೨ ಕೊಳಚೆ ಪ್ರದೇಶಗಳನ್ನು ಗುರುತು ಮಾಡಿದ್ದಾರೆ. ಮತ್ತೆ ಕರ್ನಾಟಕ ಕೊಳಚೆ ಪ್ರದೇಶ ನಿರ್ಮೂಲನಾ ಮಂಡಲಿಯವರು ೬೨ ಕೊಳಚೆ ಪ್ರದೇಶಗಳನ್ನು ಗುರುತು ಮಾಡಿದ್ದಾರೆ. ಮತ್ತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ೬೨ ಕೊಳಚೆ ಪ್ರದೇಶಗಳನ್ನು ಗುರುತು ಮಾಡಿದ್ದಾರೆ ಒಟ್ಟು ೩೦೬ ಕೊಳಚೆ ಪ್ರದೇಶಗಳು ಬೆಂಗಳೂರು ನಗರದಲ್ಲಿವೆ. ಆದರೆ ಮಾನ್ಯ ಸದಸ್ಯರಾದ ಶ್ರೀ ಪಿ. ರಾಮದೇವ್‌ರವರು ಇನ್ನೂ ಹೆಚ್ಚಿಗೆ ಇವೆ ಎಂಬುದಾಗಿ ಹೇಳುತ್ತಿದ್ದಾರೆ. ಅದನ್ನು ಪರಿಶೀಲನೆ ಮಾಡಿ ಬೇಕಾದರೆ ಮತ್ತೊಮ್ಮೆ ವಿವರಗಳನ್ನು ತರಿಸಿ ಕೊಡುತ್ತೇನೆ. ಮತ್ತೆ ಈಗ ಈ ನಿರ್ಣಯ ತಂದ ನಂತರವೂ ಬಹಳಷ್ಟು ಕೊಳಚೆ ಪ್ರದೇಶಗಳು ಬರುತ್ತಿವೆ ಎಂಬುದಾಗಿ ಹೇಳುತ್ತಿದ್ದಾರೆ. ಬೆಂಗಳೂರು ನಗರ ಕೈಗಾರಿಕಾ ಕೇಂದ್ರವಾಗಿರುವುದರಿಂದ ಸಾಕಷ್ಟು ಜನ ಕೂಲಿಗೋಸ್ಕರ ಬರತಕ್ಕಂತಹ ಜನ ಇದ್ದಾರೆ. ಬೆಂಗಳೂರು ನಗರಕ್ಕೆ ಎಲ್ಲ ಕಡೆಯಿಂದ ಬರುತ್ತಿದ್ದಾರೆ. ಮತ್ತೆ ಇಲ್ಲಿದ್ದವರು ಹೊರಗಿನವರನ್ನೂ ಕರೆದುಕೊಂಡು ಬರುತ್ತಿದ್ದಾರೆ. ನಮ್ಮ ಬೆಂಗಳೂರು ನಗರಕ್ಕೆ ತಮಿಳುನಾಡಿನಿಂದ ಬರುತ್ತಿದ್ದಾರೆ. ಬೇರೆ ರಾಜ್ಯಗಳಿಂದ ಬರುತ್ತಿದ್ದಾರೆ. ಇವರೆಲ್ಲ ಸೇರಿ ಒಟ್ಟು ೫ ಲಕ್ಷ ಜನರು ನಮ್ಮ ಬೆಂಗಳೂರು ನಗರದಲ್ಲಿದ್ದಾರೆ ಎಂಬುದಾಗಿ ನನ್ನಲ್ಲಿರುವ ಅಂಕಿ ಅಂಶಗಳು ತಿಳಿಸುತ್ತಿವೆ. ತಮಿಳುನಾಡಿನಿಂದ ಎಷ್ಟು ಜನ ಬಂದಿದ್ದಾರೆ, ಬೇರೆ ರಾಜ್ಯಗಳಿಂದ ಎಷ್ಟು ಜನ ಬಂದಿದ್ದಾರೆಂಬುದರ ಬಗ್ಗೆ ವಿವರಗಳನ್ನು ಸಂಗ್ರಹಿಸುತ್ತಿದ್ದೇನೆ. ಈ ರೀತಿಯ ಕೊಳಚೆ ಪ್ರದೇಶಗಳು ಬೆಳೆಯುತ್ತಿವೆ. ಇದರ ಬಗ್ಗೆ ನಾವು ಯಾವ ರೀತಿ ಮಾಡಿದರೆ ಈ ಕೊಳಚೆ ಪ್ರದೇಶಗಳನ್ನು ನಿರ್ಮೂಲನ ಮಾಡಬಹುದು. ಮತ್ತೆ ಈ ಕೊಳಚೆ ಪ್ರದೇಶಗಳಲ್ಲಿರತಕ್ಕಂತಹ ಜನರಿಗೆ ಏನೇನು ಮಾಡಬೇಕು? ಎಂಬುದರ ಬಗ್ಗೆ ವಿಚಾರ ಮಾಡುತ್ತಿದ್ದೇವೆ. ಈ ಕೊಳಚೆ ಪ್ರದೇಶಗಳಲ್ಲಿ ಕೂಲಿಕಾರರಿರುತ್ತಾರೆ. ಹರಿಜನ–ಗಿರಿಜನರಿದ್ದಾರೆ, ಅವರ ಬಗ್ಗೆ ನಿರ್ಲಕ್ಷ್ಯ ತೋರುವುದು ಸರ್ಕಾರದ ಉದ್ದೇಶ ಅಲ್ಲ. ಅವರಿಗೆ ಅವಶ್ಯಕವಾದ ಅನುಕೂಲಗಳನ್ನು ಮಾಡಿಕೊಡುವುದು ಒಂದು. ಮತ್ತೊಂದು ಬೆಂಗಳೂರು ನಗರದಲ್ಲಿ ಕೊಳಚೆ ಪ್ರದೇಶಗಳ ನಿರ್ಮಾಣಕ್ಕೆ ಅವಕಾಶ ಮಾಡಿಕೊಡಬಾರದೆಂಬುದು ಮತ್ತೊಂದು. ಇದರ ಬಗ್ಗೆ ಏನು ಮಾಡಿದ್ದೇವೆಂದರೆ ಈಗಾಗಲೇ ಶ್ರೀಮಾನ್ ಬಸವಲಿಂಗಪ್ಪನವರು ಪ್ರಸ್ತಾಪ ಮಾಡಿದ ಹಾಗೆ ೧೯೭೫ರಲ್ಲಿ ಕೊಳಚೆ ಪ್ರದೇಶ ನಿರ್ಮೂಲನಾ ಮಂಡಲಿ ನಿರ್ಮಾಣವಾಯಿತು. ೧೯೮೦ರಲ್ಲಿ ನಾವು ಅಧಿಕಾರಕ್ಕೆ ಬಂದಿದ್ದೇವೆ. ನಾನು ಕಳೆದ ೪ ತಿಂಗಳಿಂದ ಈ ಖಾತೆಯ ಮಂತ್ರಿಯಾಗಿ ಕೆಲಸ ಮಾಡುತ್ತಿದ್ದೇನೆ. ಬಹಳ ತೀವ್ರ ರೀತಿ

ಯಾಗಿ ಕೆಲಸ ಮಾಡುತ್ತಿದ್ದೇವೆ. ಮಾನ್ಯ ಬಸವಲಿಂಗಪ್ಪನವರು ಪ್ರಸ್ತಾಪ ಮಾಡುತ್ತಾ ಕಮಿಟೆಡ್ ಫಿಗರ್ಸ್ ಅಂತ ಪ್ರಸ್ತಾಪ ಮಾಡಿ ಅಧಿಕಾರದಲ್ಲಿರುವವರು ಕೆಲಸ ಮಾಡತಕ್ಕಂತಹ ಮನಸ್ಸು ಇರಬೇಕು. ಈ ಕೊಳಚೆ ಪ್ರದೇಶದಲ್ಲಿರುವ ಜನರ ಕಲ್ಯಾಣಕ್ಕಾಗಿ ಕೆಲಸ ಮಾಡಬೇಕೆಂಬ ಮನಸ್ಸು ಎಲ್ಲಿಯವರಿಗೆ ಅಧಿಕಾರದಲ್ಲಿರುವವರಿಗೆ ಬರುವುದಿಲ್ಲವೋ ಅಲ್ಲಿಯವರೆಗೆ ಪರಿಣಾಮಕಾರಿಯಾಗಿ ಕೆಲಸಗಳಾಗುವುದಿಲ್ಲ ಎಂಬುದಾಗಿ ಹೇಳಿದರು. ಆದರೆ ನಾನು ಬಂದ ನಂತರ ಈಗಿನ ಸರ್ಕಾರ ಏನೇನು ಕ್ರಮ ಕೈಗೊಂಡಿದೆ. ಎನ್ನತಕ್ಕಂತಹ ಮಾತನ್ನು ಹೇಳುವುದಾದರೆ, ೩ ತಿಂಗಳ ಅವಧಿಯಲ್ಲಿ ಎಲ್ಲೆಲ್ಲಿ ಕಾರ್ಪೊರೇಷನ್ ಏರಿಯಾಗಳಲ್ಲಿ ಕೊಳಚೆ ಪ್ರದೇಶಗಳು ಬಂದಿವೆ, ನಾವು ಅವುಗಳು ಬೆಳೆಯುವುದಕ್ಕೆ ಅವಕಾಶ ಕೊಡಬಾರದು ಎಂಬುದರ ಬಗ್ಗೆ ಅಧಿಕಾರಿಗಳ ಜೊತೆ ಸಮಾಲೋಚನೆ ನಡೆಸಿ ನಿರ್ದಿಷ್ಟವಾದ ಆದೇಶವನ್ನು ಕೊಟ್ಟಿದ್ದೇನೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಿಗಳಿಗೂ ಆದೇಶವನ್ನು ಕೊಟ್ಟಿದ್ದೇನೆ. ಕೊಳಚೆ ಪ್ರದೇಶದಲ್ಲಿ ಹೆಚ್ಚಾಗಿ ಬಡವರೇ ಇರುವವರು. ಆ ಜನರ ಕಲ್ಯಾಣಕ್ಕಾಗಿ ಸರ್ಕಾರ ಸಾಕಷ್ಟು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ.

(ಅಧ್ಯಕ್ಷರವರು ಪೀಠವನ್ನಲಂಕರಿಸಿದರು)

ಈಗಾಗಲೇ ಪರಿಣಾಮಕಾರಿಯಾದ ಕ್ರಮಗಳನ್ನು ತೆಗೆದುಕೊಂಡಿದ್ದೇನೆ. ನಾನು ಮಂತ್ರಿಯಾದ ನಂತರ ದೆಹಲಿಯಲ್ಲಿರುವ ಹುಡ್ಕೋ ಯೋಜನೆಯ ಚೇರ್ಮನ್‌ರವರಾದಂತಹ ಶ್ರೀ ಫಜಲಾಲಿಯವರ ಜೊತೆ ಮಾತುಕತೆ ನಡೆಸಿ ಹಿಂದೆ ೧೯೭೫ನೇ ಇಸವಿಯಲ್ಲಿ ಕರ್ನಾಟಕ ರಾಜ್ಯದ ಕೊಳಚೆ ಪ್ರದೇಶ ನಿರ್ಮೂಲನೆಗಾಗಿ ಮೂರು ಯೋಜನೆಗಳನ್ನು ಕಳುಹಿಸಿದ್ದೆವು. ಅದಕ್ಕೆ ಮಂಜೂರಾತಿ ನೀಡಿದೆ ಎಂಬುದಾಗಿ ಕೇಳಿದೆ. ಈಗ ನಮ್ಮಲ್ಲಿ ಬಹಳಷ್ಟು ತೊಂದರೆ ಇವೆ. ಹೆಚ್ಚು ಹಣವನ್ನು ಈ ಬಗ್ಗೆ ಕೊಡಬೇಕೆಂದು ಕೇಳಿದಾಗ ಅವರು ಈ ಬಗ್ಗೆ ಯಾವುದೇ ರೀತಿಯ ಯೋಜನೆಗಳನ್ನು ಕಳುಹಿಸಿ ನಾನು ಹಣವನ್ನು ಮಂಜೂರು ಮಾಡುತ್ತೇನೆ ಎಂಬದಾಗಿ ಹೇಳಿದರು. ನಾನು ಅಲ್ಲಿಂದ ಬಂದು ಇಲ್ಲಿಯ ನಮ್ಮ ಅಧಿಕಾರಿಗಳ ಜೊತೆ ಮಾತನಾಡಿ ಹೆಚ್ಚಾಗಿ ಎಲ್ಲ ಕಾರ್ಪೊರೇಷನ್‌ಗಳು, ಬಿ.ಡಿ.ಎ.ಹಾಗೂ ಕರ್ನಾಟಕ ರಾಜ್ಯದ ಎಲ್ಲ ಕಡೆ ಪರಿಣಾಮಕಾರಿಯಾಗಿ ಕೆಲಸ ಮಾಡಬೇಕೆಂಬ ಆದೇಶವನ್ನು ಕೊಟ್ಟು, ಎಲ್ಲ ವಿಭಾಗ ಹಾಗೂ ಉಪ ವಿಭಾಗಗಳ ಮಟ್ಟಗಳಲ್ಲೂ ಒಂದೊಂದು ಕಛೇರಿಗಳನ್ನು ಪ್ರಪ್ರಥಮವಾಗಿ ತೆರೆದಿದ್ದೇವೆ.

ಆದ್ದರಿಂದ ಈ ಸ್ಲಮ್‌ಗಳನ್ನು ಒಂದು ಹತೋಟಿಗೆ ತರಬೇಕೆಂದು ಎಲ್ಲಾ ಸಬ್ ಡಿವಿಜನ್ ಹಂತದಲ್ಲೂ ಸಬ್‌ಡಿವಿಜನ್ ಕಛೇರಿಗಳನ್ನು ತೆಗೆದಿದ್ದೇವೆ. ಗುಲ್ಬರ್ಗಾದಲ್ಲಿ, ಹುಬ್ಬಳ್ಳಿಯಲ್ಲಿ, ಹಾಸನದಲ್ಲಿ, ಮೈಸೂರಿನಲ್ಲೆಲ್ಲಾ ಸಬ್‌ಡಿವಿಜನ್ ಕಛೇರಿಗಳನ್ನು ತೆಗೆದಿದ್ದೇವೆ. ಅಲ್ಲಿಯ ಅಧಿಕಾರಿಗಳು ಯಾವ ಯಾವ ರೀತಿ ಕೊಳಚೆ ಪ್ರದೇಶಗಳ ನಿರ್ಮೂಲನಗಳ ಬಗ್ಗೆ ಏನೇನು ಸ್ಕೀಮ್‌ಗಳನ್ನು ಮಾಡಬಹುದು, ಅದಕೆ ಎಷ್ಟು ಎಸ್ಟಿಮೇಟ್ ಆಗಬಹುದು ಎಂಬುದನ್ನೆಲ್ಲಾ ಕಂಡುಹಿಡಿಯುತ್ತಾರೆ. ಎಲ್ಲಾ ಕಡೆಯೂ ಒಂದು ಸಮಾಧಾನಕರವಾದ ಕೆಲಸವಾಗಬೇಕೆಂದು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಇನ್ನು ಬೆಂಗಳೂರಿನ ಬಗ್ಗೆ ಹೇಳುವುದಾದರೆ, ಈಗಾಗಲೇ ನಾವು ಅಧಿಕಾರಕ್ಕೆ ಬಂದ ನಂತರ ಕೋರಮಂಗಲದಲ್ಲಿ ಏನು ಒಂದು ಸೆಕೆಂಡ್ ಸ್ಟೇಜಿನ ಯೋಜನೆ ಇದೆ ಅದಕ್ಕೆ ಒಂದು ಕೋಟಿ ೩೫ ಲಕ್ಷ ರೂಪಾಯಿಗಳ ಸಾಲವನ್ನು ಕೊಡಲು ಹುಡ್ಕೋನವರು ಮುಂದೆ ಬಂದಿದ್ದಾರೆ. ಈ ಬಗ್ಗೆ ಕೊಡಗನಹಳ್ಳಿಗೆ ೨೧ ಲಕ್ಷ ರೂಪಾಯಿಯನ್ನು ಕೊಡಲಾಗಿದೆ. ಮತ್ತು ಇವತ್ತು ೧೬೨ ಸ್ಲಂಸ್‌ಗಳು ಏನಿವೆಯೋ ಅವುಗಳ ಒಂದು ನಿರ್ಮೂಲನಕ್ಕಾಗಿ ಮೂರು ತಿಂಗಳಿಂದ ೧೮ ಸ್ಕೀಮ್‌ಗಳನ್ನು ಪ್ರಿಪೇರ್ ಮಾಡಿ ೩ ಕೋಟಿ ರೂಪಾಯಿಗಳ ನೆರವನ್ನು ಪಡೆದುಕೊಳ್ಳುವುದಕ್ಕೆ ಕಳುಹಿಸಿದ್ದೇವೆ. ಈ ಬಗ್ಗೆ ದೆಹಲಿಯ ಪ್ರಾಜೆಕ್ಟ್ ಅಪ್ರೈಸಿಂಗ್ ಅಧಿಕಾರಿಗಳ ಜೊತೆ ಸಮಾಲೋಚನೆ ಮಾಡಲಾಗಿದೆ. ಕೊಳಚೆ ಪ್ರದೇಶ ಬೆಳೆಯುತ್ತಿರತಕ್ಕದ್ದು ಬಹಳ ಗಂಭೀರವಾದ ಪರಿಸ್ಥಿತಿಯನ್ನು ತಳೆದಿದೆ. ಇದೇ ರೀತಿ ಕೊಳಚೆ ಪ್ರದೇಶಗಳು ಬೆಳೆದರೆ ಬಹಳ ಕಷ್ಟವಾಗುತ್ತದೆ. ಇದನ್ನು ತಡೆಗಟ್ಟಲು ಶಾಶ್ವತವಾದ ನೆರವು ಬೇಕೆಂದು ಕೇಳಿಕೊಂಡಾಗ ಅವರು ಬಂದು ಕಾರ್ಪೊರೇಸನ್ ಅಧಿಕಾರಿಗಳ ಸ್ಲಮ್ ಬೋರ್ಡ್ ಅಧಿಕಾರಿಗಳ ಜೊತೆ, ಹಾಗೂ ನಮ್ಮ ಜೊತೆ ಮಾತನಾಡಿ ನೀವು ಎಷ್ಟೇ ಸ್ಕೀಮ್‌ಗಳನ್ನು ಹಾಕಿ ನಾವು ಮಾಡಿಕೊಡುತ್ತೇವೆಂದು ಹೇಳಿದ್ದಾರೆ. ಹಿಂದೆ ಸ್ಕೀಮ್ ಆದಮೇಲೆ ನಂತರ ಎಸ್ಟಿಮೇಟ್ ಆಗಬೇಕಾಗಿತ್ತು, ಆದರೆ ಇವೆರಡನ್ನೂ ಒಟ್ಟಿಗೇ ಕಳುಹಿಸಿಕೊಡಿ ನಾವು ಮಾಡಿಕೊಡುತ್ತೇವೆಂದು ಹೇಳಿದ್ದಾರೆ. ಈ ಬಗ್ಗೆ ಪರಿಣಾಮಕಾರಿಯಾದ ಮಾತುಕತೆಗಳಾಗಿವೆ. ೧೮ ಸ್ಕೀಮ್‌ಗಳು ಕಾರ್ಪೊರೇಷನ್ ಸ್ಕೀಮ್‌ಗಳಾಗಿದ್ದು ಇದರಲ್ಲಿ ಒಂದೂವರೆ ಕೋಟಿ ರೂಪಾಯಿ ಬಿ.ಡಿ.ಎ. ಗೆ ಸೇರಿದೆ. ಮತ್ತೆ ೨ಕೋಟಿ ೯೦ ಲಕ್ಷ ರೂಪಾಯಿಯ ೧೨ ಸ್ಕೀಮ್‌ಗಳು ಕೊಳಚೆ ಪ್ರದೇಶ ನಿರ್ಮೂಲನ ಮಂಡಲಿಗೆ ಸೇರಿದ್ದಾಗಿದೆ. ಇನ್ನು ಬೆಂಗಳೂರು ನಗರಕ್ಕೆ ೪ ಕೋಟಿಯ ಸ್ಕೀಮನ್ನು ನಾವು

ರೆಡಿ ಮಾಡಿ ೨೪ ಪ್ರಾಜೆಕ್ಟ್ ರಿಪೋರ್ಟ್‌ಗಳನ್ನು ಕಳುಹಿಸಿದ್ದೇವೆ. ಈ ರೀತಿಯ ಒಂದು ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ. ನಮ್ಮ ಸರ್ಕಾರ ಆಡಳಿತಕ್ಕೆ ಬಂದ ನಂತರ ಕೊಳಚೆ ಪ್ರದೇಶದಲ್ಲಿ ಇರತಕ್ಕ ಜನರ ಸಲುವಾಗಿ, ಅವರಿಗೆ ಎಲ್ಲಾ ಸೌಕರ್ಯಗಳು ಸಿಗಬೇಕು ಎನ್ನುವ ಸಲುವಾಗಿ ಒಂದು ರೀತಿ ಮಾಡಬೇಕೆಂದು ಮನಸ್ಸಿನಲ್ಲಿಟ್ಟುಕೊಂಡು ಯಾವುದನ್ನು ನಾವು ಮಾಡಬೇಕು, ಅದನ್ನು ಮಾಡುತ್ತಿದ್ದೇವೆ. ಸುಮ್ಮನೇ ನಾವೇನೂ ಕುಳಿತುಕೊಂಡಿಲ್ಲ. ನಾವು ಗೆದ್ದು ಬರುವುದಕ್ಕೆ ಮುಂಚೆ ನಾವು ಏನು ಆಶ್ವಾಸನೆಗಳನ್ನು ಜನತೆಗೆ ಕೊಟ್ಟಿದ್ದೆವು, ಕೊಳಚೆ ಪ್ರದೇಶದ ಜನತೆಗೆ ಏನು ವಚನವನ್ನು ಕೊಟ್ಟಿದ್ದೆವು ಅದೇ ರೀತಿಯ ಕೆಲಸ ಕಾರ್ಯಗಳನ್ನು ನಾವು ಇಂದು ಮಾಡುತ್ತಿದ್ದೇವೆ. ಹಿಂದೆಂದೂ ಆಗಲಾರದಂತಹ ಕೆಲಸವನ್ನು ನಾವು ಇಂದು ಪರಿಣಾಮಕಾರಿಯಾಗಿ ಮಾಡಿದ್ದೇವೆಂದು ನಾನು ಅಧ್ಯಕ್ಷರ ಮೂಲಕ ಸಭೆಯ ಸದಸ್ಯರ ಗಮನಕ್ಕೆ ನಮ್ರವಾಗಿ ವಿನಂತಿಸಿಕೊಳ್ಳುತ್ತೇನೆ. ಈ ದಿನ ಶ್ರೀ ಬೊಮ್ಮಾಯಿಯವರು ಹಾಗೂ ಇನ್ನಿತರ ಸದಸ್ಯರು ಈ ಬಗ್ಗೆ ಒಂದು ಶಾಸಕರ ಸಮಿತಿಯನ್ನು ಮಾಡಿ ಎಂದು ಹೇಳಿದರು. ಆ ನಂತರ ಆ ಸಮಿತಿಯ ಸಲಹೆಯನ್ನು ಪಡೆಯಬೇಕೆಂದರು. ನಾವು ಈಗಾಗಲೇ ನರಸಿಂಹಮೂರ್ತಿಯವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ಮಾಡಿದ್ದೆವು. ಮೊನ್ನೆ ೧೭ನೇ ತಾರೀಖು ಅವರು ಒಂದು ರಿಪೋರ್ಟನ್ನು ಕೊಟ್ಟಿದ್ದಾರೆ. ಅದರಲ್ಲಿ ಅವರು ೧೨ ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ. ಅದನ್ನೂ ಕೂಡ ನಾವು ನೋಡುತ್ತಿದ್ದೇವೆ. ಆ ಸಲಹೆ ಸೂಚನೆಗಳನ್ನು ನೋಡಿ ಇವತ್ತಿನ ದಿವಸ ಈ ಬಗ್ಗೆ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆನ್ನುವ ದೃಷ್ಟಿಯಿಂದ ಇದನ್ನು ಸರ್ಕಾರ ತನ್ನ ಗಮನಕ್ಕೆ ತೆಗೆದುಕೊಂಡಿದೆ. ಇವತ್ತಿನ ದಿವಸ ಈ ಒಂದು ಕೊಳಚೆ ಪ್ರದೇಶದ ಒಂದು ಪ್ರಾಬ್ಲಮ್ ಏನಿದೆ ಇದನ್ನು ನಿವಾರಿಸಲು ದುಡ್ಡು ಬೇಕಾಗುತ್ತದೆ. ದುಡ್ಡಿನ ಕೊರತೆ ಈಗ ಇದೆ ಇದನ್ನು ಯಶಸ್ವಿಯಾಗಿ ನಿರ್ವಹಿಸಬೇಕಾದರೆ ಬಹಳ ಕಷ್ಟ ಇರುವುದರಿಂದ ಈ ಬಗ್ಗೆ ವಿಶ್ವ ಬ್ಯಾಂಕ್‌ನವರನ್ನು ಅಪ್ರೋಚ್ ಮಾಡಬೇಕೆಂದು ಯೋಜನೆ ಹಾಕಿಕೊಂಡಿದ್ದೇವೆ. ಈ ದಿನ ವಿಶ್ವ ಬ್ಯಾಂಕ್ ಅಂತರ್‌ರಾಷ್ಟ್ರೀಯ ಅಭಿವೃದ್ಧಿ ಕಾರ್ಯಗಳಲ್ಲಿ ಸಾಕಷ್ಟು ಸಹಾಯವನ್ನು ಮಾಡುತ್ತಿದೆ. ಇನ್ನು ಶ್ರೀ ಪ್ರಭಾಕರ್ ಅವರು ಹೇಳಿದ ಪ್ರಕಾರ ೧೯೬೪ರಲ್ಲಿ ಯಾವ ಒಂದು ೩೨ ಹಳ್ಳಿಗಳು ಹಾಗೂ ೬೯ ಹ್ಯಾಮ್ಲೆಟ್‌ಗಳು ಏನು ನಗರ ಸಭೆಗೆ ವಿಲೀನಗೊಂಡಿದ್ದವು ಅಲ್ಲಿ ಬಹಳ ದಿವಸಗಳಿಂದ ನೀರಿನ ಸಮಸ್ಯೆ ಇತ್ತು ನಮ್ಮ ಸರ್ಕಾರ ಬಂದ ನಂತರ ಅಲ್ಲೂ ಕೂಡ ೧ ಕೋಟಿ ೩೬ ಲಕ್ಷ ರೂಪಾಯಿ ಕೊಟ್ಟಿದೆ ಇವತ್ತಿನ ದಿವಸ ೧೯೮೧ರಿಂದ ೧೯೯೦ರವರೆಗೆ ಒಂದು ಇಂಟರ್‌ನ್ಯಾಷನಲ್ ಡೀಕೇಡ್ ಮಾಡುವವರಿದ್ದೇವೆ. ಹಣವನ್ನು ಪಡೆದುಕೊಂಡು ಕೊಳಚೆ ಪ್ರದೇಶದಲ್ಲಿ ಪರಿಣಾಮಕಾರಿಯಾದ ಕೆಲಸವನ್ನು ಮಾಡತಕ್ಕ ಯೋಜನೆಯನ್ನು ಹಾಕಿಕೊಂಡಿದ್ದೇವೆ. ಇನ್ನು ಮಾನ್ಯ ಸದಸ್ಯರು ಮದ್ರಾಸ್, ಬಾಂಬೆಯಲ್ಲಿ ಕೊಳಚೆ ಪ್ರದೇಶಗಳ ಬಗ್ಗೆ ಹಾಕಿಕೊಂಡಿರತಕ್ಕ ಕಾರ್ಯಕ್ರಮಗಳ ಬಗ್ಗೆ ಹೇಳಿದರು. ಇದರ ಬಗ್ಗೆಯೂ ಕೂಡ ಸರ್ಕಾರ ವಿಶೇಷ ಗಮನ ಕೊಟ್ಟಿದೆ. ಯಾವ ರೀತಿ ಮದ್ರಾಸ್‌ನಲ್ಲಿ, ಬೊಂಬಾಯಿಯಲ್ಲಿ ಈ ಸ್ಲಮ್ಸ್ ಪ್ರಿವೆನ್‌ಷನ್ ಆಕ್ಟನ್ನು ತಂದು ಯಾವ ರೀತಿ ಅದನ್ನು ಅಲ್ಲಿ ಕಾರ್ಯಗತಗೊಳಿಸಿದ್ದಾರೆ ಎನ್ನುವ ದೃಷ್ಟಿಯಿಂದ ನಾವೂ ಕೂಡ ನಮ್ಮ ಹಿರಿಯ ಅಧಿಕಾರಿಗಳ ಜೊತೆ ಅಲ್ಲಿಗೆ ಹೋಗಿ ಅಲ್ಲಿನ ಆಕ್ಟನ್ನು ನೋಡಿ, ಅಲ್ಲಿನ ಅಧಿಕಾರಿಗಳ ಜೊತೆ ಸಮಾಲೋಚನೆ ಮಾಡಿಕೊಂಡು ಬರಬೇಕು ಎನ್ನುವ ದೃಷ್ಟಿಯನ್ನು ನಾವು ಇಟ್ಟುಕೊಂಡಿದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ.— ಅಲ್ಲಿಂದ ನೋಡಿಕೊಂಡು ಬರುವವರೆಗೂ ಈ ಸ್ಲಮ್ಸ್ ಬೆಳೆಯುತ್ತಿರಬೇಕು.

ಶ್ರೀ ಧರ್ಮಸಿಂಗ್.— ಇದಕ್ಕೆ ಎಷ್ಟೋ ಕಾರಣಗಳು ಇರುತ್ತವೆ. ಇದಕ್ಕೆ ಒಂದೇ ಕಾರಣವಲ್ಲ. ಈ ಸ್ಲಮ್ಸ್ ಬೆಳೆಯಬಾರದೂ ಎಂಬ ದೃಷ್ಟಿಯಿಂದ ಮೊನ್ನೆ ತಾನೆ ಒಂದು ಮೆರವಣಿಗೆ ಸಹಾ ಬಂದಿತ್ತು ಸ್ಲಮ್ಸ್‌ಗಳಿಂದ ಇರತಕ್ಕ ಸಮಸ್ಯೆ ಒಗ್ಗೆ ೩-೪ ಸಾವಿರ ಜನ ಬಂದಿದ್ದರು. ಇದಕ್ಕೆ ಸಂಬಂಧಪಟ್ಟವರ ಜೊತೆ ಅದರಲ್ಲೂ ವಿಶೇಷವಾಗಿ ಪೋಲೀಸ್ ಅಧಿಕಾರಿಗಳ ಜೊತೆ ಈ ಬಗ್ಗೆ ಸಮಾಲೋಚಿನೆ ಮಾಡಿದ್ದೇನೆ. ರೈಲಿನಲ್ಲಿ ಬೆಂಗಳೂರಿಗೆ ಎಷ್ಟೋ ಜನ ಬರುತ್ತಾರೆ. ಅವರಲ್ಲಿ ಎಷ್ಟೋ ಜನ ವಾಪಸ್ ಹೋಗುವುದಿಲ್ಲ. ಇದರ ಬಗ್ಗೆಯೂ ಕೂಡ ವಿಚಾರ ಮಾಡಲಾಗುತ್ತಿದೆ. ಎಲ್ಲಿಯವರೆಗೆ ನಾವು ಸ್ಲಮ್‌ಗಳಲ್ಲಿ ವಾಸಿಸುವುದಕ್ಕೆ ಜನರನ್ನು ತಡೆಗಟ್ಟುವುದಿಲ್ಲವೋ ಅಲ್ಲಿಯವರೆಗೂ ಗಂಭೀರ ಪರಿಸ್ಥಿತಿ ಇದ್ದೇ ಇರುತ್ತದೆ. ಹೀಗೇ ಬಿಟ್ಟರೆ ಇದು ಇನ್ನೂ ಹೆಚ್ಚಾಗುತ್ತದೆ. ಇದು ಒಂದು ಗಂಭೀರವಾದ ಪ್ರಶ್ನೆ ಈ ಬಗ್ಗೆಯೂ ಕೂಡ ವಿಚಾರ ಮಾಡುತ್ತಿದ್ದೇನೆ. ನಾವು ಈ ಬಗ್ಗೆ ಸುಮ್ಮನೆ ಕುಳಿತಿಲ್ಲ. ಇದಕ್ಕೆಲ್ಲಾ ಕಾಲ ಬೇಕಾಗುತ್ತದೆ. ಈಗಾಗಲೇ ಸಾಕಷ್ಟು ಕಾರ್ಯಕ್ರಮಗಳನ್ನು ತೆಗೆದುಕೊಂಡು ಎಲ್ಲೆಲ್ಲಿ ಯಾವ ಯಾವ ರೀತಿ ಮಾಡಬೇಕೋ ಆ ಬಗ್ಗೆ ಪ್ರಸ್ತಾಪ ಮಾಡಿದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಮಂತ್ರಿಗಳು ತಾವು ಸುಮ್ಮನೆ ಕುಳಿತುಕೊಂಡಿಲ್ಲವೆಂದು ಹೇಳುತ್ತಿದ್ದಾರೆ. ಒಂದೂವರೆ ತಿಂಗಳ ಹಿಂದೆ ಬಿನ್ನಿಮಿಲ್ "ಪ್ರದೇಶದಲ್ಲಿ ೩೦೧ ಗುಡಿಸಲುಗಳು ನಿರ್ಮೂಲನವಾಗಿವೆ. ಇವರು ಸುಮ್ಮನೆ ಕುಳಿತುಕೊಳ್ಳದೆ ಈ ಬಗ್ಗೆ ಏನು ಕೆಲಸವನ್ನು ಮಾಡಿದ್ದಾರೆ. ದಯಮಾಡಿ ಈ ಬಗ್ಗೆ ಉತ್ತರ ಕೊಡಬೇಕು. ಹಾಗೂ ಹಲವಾರು ಕೋಟಿ ರೂಪಾಯಿಯ ಯೋಜನೆಯನ್ನು ರೂಪಿಸಿದ್ದೇವೆ. ಎಂದು ಮಾನ್ಯ ಮಂತ್ರಿಗಳು ಹೇಳಿದರು. ಈ ಯೋಜನೆಗೆ ಹುಡ್ಕೋನವರು ಸಹಾಯ ಮಾಡುತ್ತಾರೆಂದು ಹೇಳಿದರು. ಅದು ಬೇರೆ ವಿಚಾರವಾಯಿತು. ಈಗ ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಅದು ಮಾಡಿದೆ ಇದು ಮಾಡಿದೆ ಎಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಜನವರಿಯಿಂದ ಈಚೆಗೆ ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಎಷ್ಟು ಹಣವನ್ನು ಈ ಬಗ್ಗೆ ಖರ್ಚು ಮಾಡಿದೆಯೆಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಎಸ್. ಪ್ರಮೀಳ.—ಬಿನ್ನಿಮಿಲ್ ಪ್ರದೇಶದ ಬಳಿ ಗುಡಿಸಲುಗಳು ನಿರ್ಮೂಲನ ಆದ ಮಾರನೇದಿನವೇ ಹಿಂದಿನ ದಿನ ರಾತ್ರಿ ಗುಡಿಸಲುಗಳು ನಿರ್ಮೂಲನವಾಗಿವೆಯೆಂದು ನಾನು ಟೆಲಿಫೋನ್ ಮಾಡಿ ತಿಳಿಸಿದೆ ಈ ಬಗ್ಗೆ ಏನೂ ಆಗಲಿಲ್ಲ. ಇದೇ ರೀತಿ ಕರಿತಿಮ್ಮನಹಳ್ಳಿಯಲ್ಲೂ ಕೂಡ ಗುಡಿಸಲುಗಳು ನಿರ್ಮೂಲನವಾದ ಬಗ್ಗೆ ಅಲ್ಲಿನ ನಾಗರೀಕರು ದೂರನ್ನು ಕೊಟ್ಟಿದ್ದಾರೆ. ಕಾರ್ಪೊರೇಷನ್ ಅಧಿಕಾರಿಗಳಿಗೆ ಹಾಗೂ ಪೋಲೀಸ್‌ನವರಿಗೆ ಈ ಬಗ್ಗೆ ಗುಡಿಸಲುಗಳನ್ನು ತೆಗೆದುಹಾಕಬೇಕೆಂದು ದೂರು ಕೊಟ್ಟರೂ ಆ ಬಗ್ಗೆ ಏನೂ ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲ. ಈ ಬಗ್ಗೆ ಮಂತ್ರಿಗಳು ಹೇಳಿಕೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಪ್ರಭಾಕರ್.— ಮಾನ್ಯ ಮಂತ್ರಿಗಳು ಕಳೆದ ೪ ತಿಂಗಳುಗಳಲ್ಲಿ ಹಿಂದೆ ಯಾವಾಗಲೂ, ಯಾರೂ ಹಾಕಿಕೊಳ್ಳದಂತಹ ಕಾರ್ಯಕ್ರಮಗಳನ್ನು, ಯೋಜನೆಗಳನ್ನು ಹಾಕಿಕೊಂಡಿದ್ದೇವೆಂದು ಹೇಳಿದರು. ಹೀಗೆ ಬರೀ ಬಾಯಿನೀರು ಬರತಕ್ಕ ವಿಚಾರವನ್ನು ಹೇಳಿಬಿಟ್ಟರೆ ಸಾಲದು, ಮುಂದಿನ ಕಥೆ ನೋಡಿ ಕೆಲಸವನ್ನು ಮಾಡಬೇಕು.

ಶ್ರೀ ಧರ್ಮಸಿಂಗ್.— ಅಧ್ಯಕ್ಷರೆ, ೧೯೭೫ರಿಂದ ೧೯೮೦ರವರೆಗೆ ಕೇವಲ ೫ ಲಕ್ಷ ರೂಪಾಯಿ ಖರ್ಚು ಆಗಿದೆ. ಈ ಮೊದಲು ೪೦ ಕೊಳಚೆ ಪ್ರದೇಶಗಳಲ್ಲಿ ಒಂದು ಕೋಟಿ ೮೨ ಲಕ್ಷ ರೂಪಾಯಿ ಖರ್ಚಾಗಿದೆ ಈ ವರ್ಷ ೧ ಕೋಟಿ ೧೯ ಲಕ್ಷ ರೂಪಾಯಿಯನ್ನು ಈ ಬಾಬಿಗಾಗಿ ಬಜೆಟ್ಟಿನಲ್ಲಿ ಇರಿಸಿದ್ದೇವೆ. ೪೧ ಲಕ್ಷ. ರೂಪಾಯಿಗಳನ್ನು ಬೆಂಗಳೂರು ನಗರಕ್ಕೆ ಕೊಡಬೇಕೆಂದು ನಾವು ಹಣವನ್ನು ಒದಗಿಸಿಕೊಟ್ಟಿದ್ದೇವೆ.

ಈಗಾಗಲೇ ಮದ್ರಾಸ್‌ನಲ್ಲಿ ಯಾವ ರೀತಿ ಮಲ್ಟಿಸ್ಟೋರೀಡ್ ಬಿಲ್ಡಿಂಗ್‌ಗಳನ್ನು ಕಟ್ಟಿರುತ್ತಾರೋ ಅದೇ ರೀತಿಯಲ್ಲಿ ಇಲ್ಲಿಯೂ ಕಟ್ಟಬೇಕೆಂದು ಮಾನ್ಯ ಸದಸ್ಯರನೇಕರು ಹೇಳಿರುತ್ತಾರೆ. ಅದನ್ನು ಗಮನದಲ್ಲಿಟ್ಟುಕೊಂಡಿರುತ್ತೇನೆ. ಅಲ್ಲಿಗೆ ಹೋಗಿ ನೋಡಿಕೊಂಡು ಬಂದು ಯಾವ ರೀತಿ ಕ್ರಮ ಕೈಗೊಳ್ಳಬೇಕೋ ಆ ರೀತಿ ಕ್ರಮ ಕೈಗೊಳ್ಳುವ ಪ್ರಯತ್ನ ಮಾಡುತ್ತೇನೆ.

ಶ್ರೀ ಐ.ಪಿ.ಡಿ. ಸಾಲಪ್ಪ.— ಹಿಂದೆ ಇಪ್ಪತ್ತು ಅಂಶಗಳ ಆರ್ಥಿಕ ಕಾರ್ಯಕ್ರಮಗಳ ಮೇರೆಗೆ ಕೊಳಚೆ ಪ್ರದೇಶದ ನಿರ್ಮೂಲನೆಗಾಗಿ ಅಲ್ಲಿ ವಾಸಮಾಡತಕ್ಕಂಥ ಜನರಿಗೆ ನಾಮಿನಲ್ ರೇಟ್ ಎಂದು ಕೇವಲ ೨೦-೨೫ ರೂಪಾಯಿಗಳಿಗೆ ನಿವೇಶನಗಳನ್ನು ಕೊಟ್ಟಿದ್ದರು. ಜಗಜೀವನರಾಮ್ ನಗರ ಮತ್ತು ವೆಂಕಟಸ್ವಾಮಿ ಗಾರ್ಡನ್ ಇವೇ ಮುಂತಾದ ಪ್ರದೇಶಗಳಲ್ಲಿ ಮಧ್ಯವರ್ತಿಗಳು ಸೇರಿಕೊಂಡು ೧೦ ರಿಂದ ೧೫ ಸಾವಿರ ರೂಪಾಯಿಗಳಿಗೆ ಈ ನಿವೇಶನಗಳನ್ನು ಮಾರಾಟ ಮಾಡುತ್ತಿರುತ್ತಾರೆ. ಆದ್ದರಿಂದ ಇದನ್ನು ತಪ್ಪಿಸುವುದಕ್ಕೆ ತಕ್ಷಣ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಪಿ. ರಾಮ್‌ದೇವ್.— ಶ್ರೀ ಕೆ. ಎಸ್. ಹೆಗಡೆಯವರು ಎಂ. ಪಿ. ಆಗಿ ಸ್ಪೀಕರ್ ಆದರು. ಆ ಸಮಯದಲ್ಲಿ ಕೇಂದ್ರ ಸಚಿವರಾಗಿದ್ದ ಸಿಕಂದರ್ ಬಖ್ತ್‌ರವರು ಕೊಳಚೇ ಪ್ರದೇಶಗಳ ನಿರ್ಮೂಲನೆಗಾಗಿ ಮೂರು ಕೋಟಿ ರೂಪಾಯಿಗಳನ್ನು ಕೊಟ್ಟಿರುತ್ತೇವೆಂದು ಹೇಳಿದರು. ಈ ದುಡ್ಡನ್ನು ಏನು ಮಾಡಿದಿರಿ. ಕೊಳಚೇ ಪ್ರದೇಶದ ಜನರಿಗೆ ಈ ಹಣವನ್ನು ಉಪಯೋಗಿಸಿಕೊಂಡು ಏನೇನು ಸೌಲಭ್ಯಗಳನ್ನು ಒದಗಿಸಿ ಕೊಟ್ಟಿರುತ್ತೀರಿ ಎಂಬುದನ್ನು ತಿಳಿಸಬೇಕು.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.— ಮಾನ್ಯ ಸದಸ್ಯರು ಮೂರು ಕೋಟಿ ರೂಪಾಯಿಗಳು ಕೇಂದ್ರ ಸರ್ಕಾರದಿಂದ ಬಂದಿದೆ ಎಂದು ತಿಳಿಸಿರುತ್ತಾರೆ. ಅದರ ಬಗ್ಗೆ ವಿಚಾರಿಸುತ್ತೇನೆ. ಮದ್ರಾಸ್‌ನಲ್ಲಿ ಬಹು ಅಂತಸ್ತಿನ ಕಟ್ಟಡಗಳನ್ನು ಕಟ್ಟಿ ಕೊಳಚೆ ಪ್ರದೇಶದ ನಿವಾಸಿಗಳಿಗೆ ಅಲ್ಲಿ ಖಾಯಂ ಆಗಿ ನೆಲೆಸಲು ಎಲ್ಲ

ವಿಧವಾದ ಸಿವಿಕ್ ಅಮಿನೆಟೀಸ್ ಕೊಟ್ಟಿರುತ್ತಾರೆ, ಮತ್ತು ಅಲ್ಲಿ ಬಹಳ ಚೆನ್ನಾಗಿ ಕೆಲಸ ಮಾಡಿದ್ದಾರೆಂದೆಲ್ಲ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಅದೇ ರೀತಿ ಇಲ್ಲಿಯೂ ಮೂರು ಸ್ಕೀಮ್‌ಗಳನ್ನು ತೆಗೆದು ಕೊಂಡಿದ್ದೇವೆ. ೪೬ ಲಕ್ಷ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ಬಹು ಅಂತಸ್ತು ಕಟ್ಟಡವನ್ನು ಕಟ್ಟಲು ಶಂಕುಸ್ಥಾಪನೆಯನ್ನೂ ಕೂಡ ಮಾಡಿರುತ್ತೇವೆ. ಈವತ್ತು ಬಹು ಅಂತಸ್ಥಿತ ಕಟ್ಟಡಗಳನ್ನು ಬಹಳ ದೂರದಲ್ಲಿ ಕಟ್ಟಿರುವುದರಿಂದ ಅಲ್ಲಿಗೆ ಜನರು ಹೋಗಿ ನೆಲೆಸಲು ಇಷ್ಟಪಡುವುದಿಲ್ಲ. ಮದ್ರಾಸ್‌ನಲ್ಲಿ ಈ ರೀತಿ ಮಾಡಿದ್ದರೂ ಅದು ಫಲಕಾರಿಯಾಗಿಲ್ಲವೆಂದೆಲ್ಲ ಮಾನ್ಯ ಸದಸ್ಯರು ಹೇಳಿದರು. ಅದನ್ನು ನಾನು ಒಪ್ಪುವುದಕ್ಕೆ ಆಗುವುದಿಲ್ಲ. ಜೋಪಡಿಯಲ್ಲಿ ವಾಸಮಾಡತಕ್ಕಂಥ ಜನರಿಗೆ ಸರ್ಕಾರದವರು ವಸತಿ ಸೌಲಭ್ಯವನ್ನು ಕಲ್ಪಿಸಿಕೊಟ್ಟರೆ ಅಲ್ಲಿಗೆ ಹೋಗಿ ನೆಲೆಸಲು ನಿರಾಕರಿಸಿದರೆ ಅದು ಬಹಳ ತಪ್ಪು. ಅದಕ್ಕೆ ಯಾರೂ ಸಹಕಾರವನ್ನು ಕೊಡಬಾರದು. ಸರ್ಕಾರದ ಒಂದು ಸೆಂಟಿಮೆಂಟ್ಸ್‌ಗೆ ಆ ಜನರು ಹೊಂದಿಕೊಂಡು ಹೋಗಬೇಕು. ಇದಕ್ಕೆ ಎಲ್ಲ ಸಂಘ ಸಂಸ್ಥೆಗಳು ಅಲ್ಲಿ ಅವರುಗಳು ಹೋಗಿ ಇರುವುದಕ್ಕೆ ಪ್ರೋತ್ಸಾಹ ಕೊಡಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ. ನಗರಗಳಲ್ಲಿ ಬೆಲೆಬಾಳತಕ್ಕಂಥ ಪ್ರದೇಶಗಳಲ್ಲಿ, ಮುನಿಸಿಪಾಲಿಟಿಗಳಿಗೆ ಸೇರಿರತಕ್ಕಂಥ ಜಾಗಗಳಲ್ಲಿ ೧೦–೨೦ ಗುಡಿಸಲುಗಳನ್ನು ಹಾಕಿಕೊಂಡಿರುವಂಥವರನ್ನು ತೆಗೆಯಬಾರದು ಎಂದು ಬೇರೆ ಬೇರೆ ಸಂಘ ಸಂಸ್ಥೆಗಳವರು ಪ್ರಶ್ನೆ ಮಾಡಿದ್ದಾರೆ. ನಾನು ಸಚಿವನಾದಮೇಲೆ ಕೋಲಾರ, ಶಿವಮೊಗ್ಗ ನಾರ್ತ್ ಕೆನರಾ ಬಿಟ್ಟು ಎಲ್ಲ ಜಿಲ್ಲೆಗಳಿಗೂ ಭೇಟಿಯನ್ನು ಕೊಟ್ಟಿರುತ್ತೇನೆ. ವಾಸ್ತವವಾಗಿ ಅಲ್ಲಲ್ಲಿ ಹೋಗಿ ಅಲ್ಲಿಯ ಸಮಸ್ಯೆಗಳು ಏನಿದೆ ಅದರ ಬಗ್ಗೆ ಗಮನಕೊಟ್ಟು ಕಾರ್ಪೊರೇಷನ್ ಲ್ಯಾಂಡ್, ಮುನಿಸಿಪಾಲಿಟಿ ಲ್ಯಾಂಡ್‌ಗಳಲ್ಲಿ ಎಲ್ಲೆಲ್ಲಿ ೫–೧೦–೨೦–೩೦–೧೦೦ ಗುಡಿಸಲುಗಳು ಇವೆಯೋ ಅವೆಲ್ಲವನ್ನು ಒಂದು ಕಡೆ ಸೇರಿಸಿ, ಅಲ್ಲಿ ವಾಸಿಸತಕ್ಕಂಥವರಿಗೆ ಬಹು ಅಂತಸ್ತಿನ ಕಟ್ಟಡವನ್ನು ಕಟ್ಟಿಸಿ ಎಲ್ಲ ಸೌಲಭ್ಯಗಳನ್ನು ಕೊಟ್ಟು ವಾಸಮಾಡಲಿಕ್ಕೆ ಅವಕಾಶ ಮಾಡಿಕೊಡಲು ಪ್ರಯತ್ನಪಟ್ಟಿದ್ದೇವೆ. ಈಗಾಗಲೇ ಬೆಂಗಳೂರು ಕಾರ್ಪೊರೇಷನ್ ಸ್ಲಮ್ಸ್ ತೆಗೆದುಕೊಂಡು ೧೭೮೦ ಪರಿವಾರದವರಿಗೆ ಮನೆಗಳನ್ನು ಕೊಡಬೇಕೆಂದು ತೀರ್ಮಾನಿಸಿದ್ದೇವೆ. ಬಿ.ಡಿ.ಎ. ಅವರು ಹಿಂದೆ ೧೦ ಸ್ಕೀಮ್‌ಗಳನ್ನು ತೆಗೆದುಕೊಂಡು ಹತ್ತೊಂಬತ್ತು ನೂರು ಫ್ಯಾಮಿಲಿಗೆ ನೆರವಾಗುವಂತೆ ವ್ಯವಸ್ಥೆಯನ್ನು ಮಾಡಿರುತ್ತಾರೆ. ಹಂತ ಹಂತವಾಗಿ ಒಂದು ವಿಶೇಷವಾದ ರೀತಿಯಲ್ಲಿ ಕೆಲಸ ಮಾಡಬೇಕೆಂದು ನಿಶ್ಚಯಿಸಿ ಕೊಳಚೇ ಪ್ರದೇಶದಲ್ಲಿರತಕ್ಕಂಥ ಜನರಿಗೆ ಸರ್ಕಾರ ನೆರವನ್ನು ನೀಡಬೇಕೆಂಬುದೇ ಉದ್ದೇಶ ಇಟ್ಟುಕೊಂಡು ನಿರ್ಣಯಗಳನ್ನು ಮಾಡಿದ್ದಾರೆ. ಅಧಿಕಾರದಲ್ಲಿದ್ದವರು ಯಾವ ರೀತಿಯಲ್ಲಿ ಕೆಲಸ ಮಾಡಬೇಕು, ಕೊಳಚೇ ಪ್ರದೇಶದಲ್ಲಿರತಕ್ಕಂಥ ಜನರ ಕಲ್ಯಾಣಕ್ಕಾಗಿ ಯಾವ ರೀತಿ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು ಎಂಬುದರ ಬಗ್ಗೆ ಮಾನ್ಯ ಸದಸ್ಯರು ಚೆನ್ನಾಗಿ ಹೇಳಿರುತ್ತಾರೆ. ಮಾನ್ಯ ಲಕ್ಷ್ಮೀಸಾಗರ್‌ರವರು ಪ್ರಸ್ತಾಪ ಮಾಡುತ್ತಾ ಕೊಳಚೇ ಪ್ರದೇಶಗಳಲ್ಲಿ ಸೋಷಿಯಲ್ ಪ್ರಾಬ್ಲಮ್ಸ್ ಯಾವರೀತಿ ಇರುತ್ತದೆ ಎಂಬುದನ್ನು ಪ್ರಸ್ತಾಪ ಮಾಡಿರುತ್ತಾರೆ ಇನ್ನೂ ಅನೇಕ ಸಮಸ್ಯೆಗಳು ಹೊಸ ಹೊಸದಾಗಿ ಹುಟ್ಟಿಕೊಳ್ಳುವುದರ ಬಗ್ಗೆಯೂ ಪ್ರಸ್ತಾಪ ಮಾಡಿರುತ್ತಾರೆ. ಒಬ್ಬೊಬ್ಬರೂ ನಾಲ್ಕು ನಾಲ್ಕು ಗುಡಿಸಲುಗಳನ್ನು ಹಾಕಿಕೊಂಡು ವ್ಯಾಪಾರ ಕೂಡ ಮಾಡುತ್ತಾರೆಂದು ಕೂಡ ಪ್ರಸ್ತಾಪ ಮಾಡಿರುತ್ತಾರೆ. ಅದೆಲ್ಲ ವಿಷಯಗಳನ್ನು ನಾವು ನೀವು ಕುಳಿತು ಡಿಸ್‌ಕಸ್ ಮಾಡಬೇಕಾಗಿರುತ್ತದೆ. ಬೆಂಗಳೂರು ನಗರದಲ್ಲಿ ಕೊಳಚೇ ಪ್ರದೇಶಗಳು ಬೆಳೆಯುತ್ತಿರುವುದರ ಬಗ್ಗೆ ಮತ್ತು ಅದರ ಪರಿಹಾರದ ಬಗ್ಗೆ ತಮ್ಮ ಮನಸ್ಸಿನಲ್ಲಿ ಏನು ಒಂದು ಕಳವಳ ಉಂಟಾಗಿರುತ್ತದೆ ಅದನ್ನು ತಿಳಿದುಕೊಂಡು ಪರಿಣಾಮಕಾರಿಯಾಗಿ ಕೆಲಸ ಮಾಡುವುದಕ್ಕೋಸ್ಕರವಾಗಿ ಬೆಂಗಳೂರು ನಗರದ ಶಾಸಕರನ್ನು ಕರೆದು ಸಲಹೆ ಸೂಚನೆಗಳನ್ನು ಕೇಳುತ್ತೇನೆ. ಬೆಂಗಳೂರು ನಗರವನ್ನು ಒಂದು ಸುಂದರ ನಗರವಾಗಿರಿಸಿಕೊಳ್ಳ ಪ್ರಯತ್ನ ಪಡುತ್ತೇನೆ. ಬೆಂಗಳೂರು ನಗರ ಈಗ ಎಷ್ಟು ಏರಿಯಾ ಆವರಿಸಿದೆ, ಮುಂದೆ ಇದೇ ರೀತಿಯಲ್ಲಿ ಬೆಳೆದುಕೊಂಡು ಹೋದರೆ ಏನಾಗಬಹುದೆಂಬ ಶಂಕೆ ಜನರಲ್ಲಿ ಉಂಟಾಗಿರುತ್ತದೆ. ಮುಂದೆ ಇನ್ನು ಬೆಂಗಳೂರು ನಗರವು ಬೆಳೆಯಲು ಅವಕಾಶ ಕೊಡದಂತೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತಿದ್ದೇನೆ. ಮಾನ್ಯ ಪ್ರಭಾಕರ್‌ರವರು ಅವರು ಹೇಳಿದ ವಿಚಾರದಲ್ಲಿ ಸರ್ಕಾರದವರು ವಿಚಾರ ಮಾಡುತ್ತದೆಂದು ಹೇಳುತ್ತೇನೆ. ಬೆಂಗಳೂರು ನಗರ ರೂರಲ್‌ಗೆ ಸಂಬಂಧಪಟ್ಟ ಹಾಗೆ ಇದು ಸಾಕಷ್ಟು ಗಂಭೀರವಾದ ವಿಚಾರವಾಗಿರುತ್ತದೆ. ಉತ್ತರ ಕೊಡಬೇಕು ಎನ್ನುವ ದೃಷ್ಟಿಯಿಂದ ಹೇಳುತ್ತಾ ಇಲ್ಲ. ಈವತ್ತಿನ ದಿವಸ ಎಲ್ಲ ಸದಸ್ಯರು ಕೊಟ್ಟಿರತಕ್ಕಂಥ ಸಲಹೆ ಸೂಚನೆಗಳನ್ನು ಗಮನದಲ್ಲಿಟ್ಟುಕೊಂಡು ಅದರ ಬಗ್ಗೆ ವಿಚಾರ ಮಾಡುತ್ತಾ ಇದ್ದೇನೆ. ಈವತ್ತಿನ ದಿವಸ ಮಾನ್ಯ ರಾಮ್‌ದೇವ್‌ರವರು ಕೊಳಚೇ ಪ್ರದೇಶದಲ್ಲಿರತಕ್ಕಂಥ ಜನರಿಗೆ ಏನೇನು ಅನಾನುಕೂಲತೆಗಳಿವೆ ಅದರ ಬಗ್ಗೆ ಸರ್ಕಾರದವರು ಲಕ್ಷ್ಯ ಕೊಟ್ಟಿಲ್ಲ, ಸರ್ಕಾರದವರು ತೀವ್ರತರವಾದ ಗಮನಕೊಟ್ಟು ಕೆಲಸ

ಮಾಡಬೇಕೆಂದು ಹೇಳಿದ ಕಾರಣ ಅದಕ್ಕೆ ಉತ್ತರವನ್ನು ಕೊಡುತ್ತಾ ಸಾಕಷ್ಟು ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆನ್ನುವ ಮಾತನ್ನು ಹೇಳುತ್ತಾ ಅವರು ತಂದಿರುವ ರೆಸಲ್ಯೂಷನ್ ಏನು ಇರುತ್ತದೆ ಅದನ್ನು ವಾಪಸ್ ಪಡೆಯಬೇಕೆಂದು ಹೇಳುತ್ತೇವೆ.

೧-೦೦ ಪಿ.ಎಂ.

ಇವತ್ತಿನ ದಿವಸ ಈ ಕೊಳಚೆ ಪ್ರದೇಶಗಳಿಗೆ ಸಂಬಂಧಪಟ್ಟ ಸಮಸ್ಯೆಗಳ ಬಗ್ಗೆ ಬಹಳ ಪರಿಣಾಮ ಕಾರಿಯಾಗಿ ಫೋಕಸ್ ಮಾಡುವ ರೀತಿಯಲ್ಲಿ ಮಾನ್ಯ ಸದಸ್ಯರುಗಳು, ಮಾಜಿ ಮಂತ್ರಿಗಳು, ಹಿರಿಯ ಅನುಭವೀ ಸದಸ್ಯರುಗಳು ಏನೇನು ಉಪಯುಕ್ತ ಸಲಹೆ ಸೂಚನೆಗಳನ್ನು ಹೇಳಿದ್ದೀರಿ ಅವುಗಳನ್ನೆಲ್ಲಾ ನಾನು ಬರೆದುಕೊಂಡಿದ್ದೇನೆ, ಮತ್ತು ಇವುಗಳನ್ನು ಯಾವರೀತಿ ಪರಿಹರಿಸಬಹುದೆಂಬ ಬಗ್ಗೆ ಯೋಚನೆ ಮಾಡಿ ಕ್ರಮ ಕೈಗೊಳ್ಳುತ್ತೇನೆ. ಇದರ ಬಗ್ಗೆ ಯಾವ ಸದಸ್ಯರಿಗೂ ಮನಸ್ಸಿನಲ್ಲಿ ಯಾವುದೇ ರೀತಿಯ ಶಂಕೆಯೂ ಬೇಡವೆಂದು ಹೇಳಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಪೌರಾಡಳಿತ ಸಚಿವರು ಉತ್ತರ ಕೊಟ್ಟಿರುವ ಬಗ್ಗೆ ನಾನು ಕೇವಲ ಎರಡು ಕ್ಲಾರಿಫಿಕೇಷನ್‌ಗಳನ್ನು ಮಾತ್ರ ಕೇಳಬಯಸುತ್ತೇನೆ. ಮಾನ್ಯ ಸಚಿವರು ಬಹಳ ನೇರವಾಗಿ ಉತ್ತರ ಕೊಡುತ್ತಾ ಕೇವಲ ೩ ತಿಂಗಳಲ್ಲಿ ಯಾವುದನ್ನೂ ಪರಿಣಾಮಕಾರಿಯಾಗಿ ಮಾಡುವುದಕ್ಕಾಗುವುದಿಲ್ಲ ಆದರೂ ನಾನು ಇದರ ಬಗ್ಗೆ ಸೂಕ್ತ ಗಮನ ಹರಿಸಿ ಸಾಕಷ್ಟು ಪ್ರಯತ್ನ ಮಾಡಿದ್ದೇನೆ ಎಂದು ಅವರು ಹೇಳಿದ್ದನ್ನು ನಾನು ತಾತ್ಕಾಲಿಕವಾಗಿ ಒಪ್ಪಿಕೊಳ್ಳುತ್ತೇನೆ. ಆದರೆ ಮಾನ್ಯ ಸದಸ್ಯರಾದ ಶ್ರೀಮಾನ್ ಬಸವಲಿಂಗಪ್ಪನವರು ಎತ್ತಿದ ಪ್ರಶ್ನೆಗೆ ಮಾತ್ರ ಮಾನ್ಯ ಸಚಿವರು ಸೂಕ್ತ ಉತ್ತರವನ್ನು ಕೊಡಲಿಲ್ಲ. ಹೊಸದಾಗಿ ನಿರ್ಮಾಣವಾಗತಕ್ಕಂಥ ಕೊಳಚೆ ಪ್ರದೇಶಗಳನ್ನು ತಡೆಯುವು ದಕ್ಕೆ ತಕ್ಷಣ ಕ್ರಮ ತೆಗೆದುಕೊಂಡಿಲ್ಲ, ಇದರಲ್ಲಿ ವಿಫಲರಾಗಿದ್ದೀರಿ, ಇದನ್ನು ಹೇಗೆ ತಡೆಯುತ್ತೀರಿ ಎಂಬುದನ್ನು ಹೇಳಬೇಕು. ಇವತ್ತು ಸಿನಿಮಾಮಂದಿರಗಳು ತಯಾರಾಗುವುದು ನಿಧಾನವಾದರೂ ಈ ಗುಡಿಸಿಲುಗಳು ಮಾತ್ರ ಬಹಳ ಬೇಗ ತಯಾರಾಗಿಬಿಡುತ್ತಿವೆ. ಸರ್ಕಾರದ ಜಮೀನಿನಲ್ಲಾಗಲಿ, ಬಿ.ಡಿ.ಎ. ಜಮೀನಿನಲ್ಲಾಗಲಿ, ಅಥವಾ ಖಾಸಗಿಯವರ ಜಮೀನಿನಲ್ಲಾಗಲಿ, ಒಟ್ಟಿನಲ್ಲಿ ಖಾಲಿ ಜಾಗ ಇರುವ ಕಡೆಗಳಲ್ಲೆಲ್ಲಾ ಈ ಕೊಳಚೆ ಪ್ರದೇಶಗಳು ಬಹಳ ಬೇಗ ಹುಟ್ಟಿಕೊಳ್ಳುತ್ತಿವೆ, ಇವುಗಳನ್ನು ನಿಲ್ಲಿಸುತ್ತೀರಾ?

ಇನ್ನು ಎರಡನೆಯದಾಗಿ, ಬೊಂಬಾಯಿ ಮತ್ತು ಮದ್ರಾಸ್ ನಗರಗಳಲ್ಲಿ ಕೊಳಚೆ ಪ್ರದೇಶಗಳನ್ನು ತಡೆಯಲು ಅಲ್ಲಿಯ ಸರ್ಕಾರ ಯಾವರೀತಿ ಕ್ರಮಗಳನ್ನು ಕೈಗೊಳ್ಳುತ್ತಿವೆ ಎಂಬುದನ್ನು ನೋಡಿಕೊಂಡು ಬರಲು ಸರ್ಕಾರದ ಅಧಿಕಾರಿಗಳನ್ನು ಕಳಿಸಿಕೊಡುವ ಸಲುವಾಗಿ ಒಂದು ಆಜ್ಞೆಯನ್ನು ಹೊರಡಿಸಿರುವು ದಾಗಿ ತಿಳಿಸಿದ್ದೀರಿ. ಇದರ ಬಗ್ಗೆ ನಮ್ಮ ಅಭ್ಯಂತರವಿಲ್ಲ. ಒಟ್ಟಿನಲ್ಲಿ ಈ ಬಡ್ಜೆಟ್ ಅಧಿವೇಶನ ಮುಗಿಯುವುದರೊಳಗಾಗಿ ಒಂದು ಸುಗ್ರೀವಾಜ್ಞೆಯನ್ನು ತಾವು ಹೊರಡಿಸಿ ಈ ಸ್ಲಂಗಳು ಹೊಸದಾಗಿ ಬೆಳೆಯದಂತೆ ಕ್ರಮ ತೆಗೆದುಕೊಳ್ಳಬೇಕು. You take the penal powers for the prevention of new Slums comming up. ಇದನ್ನು ತಾವು ಯಾವಾಗ ಮಾಡುತ್ತೀರಿ?

ಶ್ರೀ ಧರ್ಮಸಿಂಗ್.—ಮಾನ್ಯ ಬಸವಲಿಂಗಪ್ಪನವರ ಪ್ರಶ್ನೆಗೆ ನಾನು ಏತಕ್ಕೆ ಉತ್ತರ ಕೊಡಲಿಲ್ಲ ಎಂದರೆ, ಬಿನ್ನಿ ಮಿಲ್ ಹತ್ತಿರ ದಿನೇ ದಿನೇ ಹೊಸದಾಗಿ ಗುಡಿಸಲುಗಳು ಬರುತ್ತಿರುವುದನ್ನು ನಾನು ತಿಳಿದಿದ್ದೇನೆ. ಈ ವಿಚಾರವನ್ನು ನಾನು ಸೂಕ್ಷ್ಮವಾಗಿ ಗಮನಿಸುತ್ತೇನೆಂದು ಆಗಲೇ ಹೇಳಿದ್ದೇನೆ.

ಇನ್ನು ಎರಡನೆಯದಾಗಿ, ಹೊಸದಾಗಿ ಸ್ಲಂ ಹುಟ್ಟಿಕೊಳ್ಳುತ್ತಿರುವುದನ್ನು ತಡೆಗಟ್ಟುವ ಬಗ್ಗೆ ತಾವು ಏನು ಸಲಹೆ ಮಾಡಿದ್ದೀರಿ ಅದನ್ನೂ ಕೂಡ ನಾನು ಗಮನದಲ್ಲಿ ಇಟ್ಟುಕೊಂಡಿದ್ದೇನೆ. ಮದ್ರಾಸ್ ಮತ್ತು ಬೊಂಬಾಯಿಗಳಲ್ಲಿ ಯಾವರೀತಿ ಈ ಸಮಸ್ಯೆಗಳನ್ನು ಬಗೆಹರಿಸುತ್ತಿದ್ದಾರೆಂಬುದನ್ನು ನಮ್ಮ ಅಧಿಕಾರಿಗಳು ಹೋಗಿ ನೋಡಿಕೊಂಡು ಬಂದಿದ್ದಾರೆ. ಈ ವಿಚಾರ ನನ್ನ ಪರಿಶೀಲನೆಯಲ್ಲಿದೆ. ಇದಕ್ಕೆ ಉತ್ತರವನ್ನು ಮುಂದಿನಸಾರಿ ಕೊಡುತ್ತೇನೆ.

ಶ್ರೀ ಪಿ. ರಾಂದೇವ್.—ಮಾನ್ಯ ಅಧ್ಯಕ್ಷರೆ, ನನ್ನ ಒಂದು ಮನವಿ ಏನೆಂದರೆ, ಈ ಸ್ಲಂ ವಿಚಾರ ಕಳೆದ ೨ ವರ್ಷಗಳಿಂದ ಬಂದರೆ ೧೯೭೮ರಿಂದ ಈ ಎರಡೂ ಸದನಗಳಲ್ಲೂ ಚರ್ಚೆಯಾಗುತ್ತಲೇ ಬಂದಿದೆ. ಇದು ದುರ್ಬಲವರ್ಗದ ಜನಾಂಗಕ್ಕೆ ಸೇರಿದಂಥ ವಿಚಾರ. ಇದು ಬಹಳ ಗಹನವಾದ ವಿಚಾರವಾದ್ದರಿಂದ

ನನಗೆ ೧೫-೨೦ ನಿಮಿಷಗಳ ಕಾಲಾವಕಾಶವನ್ನು ನನಗೆ ತಾವು ಕೊಟ್ಟರೆ ಮಾನ್ಯ ಸಚಿವರಿಗೆ ವಿಷಯ ಏನು ಎಂಬುದನ್ನು ಚೆನ್ನಾಗಿ ಮನವರಿಕೆ ಮಾಡಿಕೊಡುತ್ತೇನೆ. ಈ ನಿಲುವಳಿ ಸೂಚನೆಯನ್ನು ಮಂಡಿಸಿರುವವನು ನಾನೇ ಆಗಿರುವುದರಿಂದ ತಾವು ನನಗೆ ಕಾಲಾವಕಾಶವನ್ನು ಕೊಟ್ಟೇಕೊಡಬೇಕು. ಈಗ ತಾವು ಕೊಡಲು ಸಾಧ್ಯವಿಲ್ಲದಿದ್ದರೆ ಮುಂದಿನ ಶನಿವಾರದ ದಿವಸವಾದರೂ ಇದಕ್ಕೆ ಅವಕಾಶ ಕೊಡಬೇಕು.

ಅಧ್ಯಕ್ಷರು.—ತಮ್ಮ ಕಳಕಳಿ ಏನು ಎಂಬುದು ನನ್ನಗೆ ಗೊತ್ತಿದೆ. ಆದರೆ ಈಗಾಗಲೇ ಒಂದು ಗಂಟೆಯಾಗಿರುವುದರಿಂದ ಸಭೆಯನ್ನು ಮುಂದಕ್ಕೆ ಹಾಕಬೇಕೆಂದು ಅನೇಕ ಮಾನ್ಯ ಸದಸ್ಯರು ಒತ್ತಾಯ ಮಾಡುತ್ತಿದ್ದಾರೆ. ಮಾನ್ಯ ಸಚಿವರು ಉತ್ತರ ಕೊಟ್ಟಮೇಲೆ, ತಾವೂ ಕೂಡ ಮಾತನಾಡಲು ಅಧಿಕಾರವಿದೆ. ಅದನ್ನು ನಾನು ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಆದರೆ ಈ ವಿಚಾರದಲ್ಲಿ ಸಭೆ ಏನು ಹೇಳುತ್ತದೋ ಆರೀತಿ ನಾನು ಮಾಡುತ್ತೇನೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ಈಗಾಗಲೇ ಸಾಕಷ್ಟು ಸಮಯವಾಗಿರುವುದರಿಂದ ಈ ವಿಚಾರವನ್ನು ಇಲ್ಲಿಗೆ ಬಿಟ್ಟು ಮತ್ತೆ ಮುಂದಿನ ಶನಿವಾರ ತೆಗೆದುಕೊಳ್ಳೋಣ.

ಶ್ರೀ ಎಂ. ಸಿ. ನಾಣಯ್ಯ.—ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ಸಾಕಷ್ಟು ಚರ್ಚೆಯಾಗಿದೆ. ಇದನ್ನು ಮುಂದಕ್ಕೆ ಹಾಕಿದರೆ ರೆಸಲ್ಯೂಷನ್ ಬಿದ್ದು ಹೋಗುತ್ತದೆಂದು ತಮಗೆ ಮನಸ್ಸಿನಲ್ಲಿರಬಹುದು. ಈ ವಿಚಾರ ಬೆಂಗಳೂರು ನಗರದ ದೃಷ್ಟಿಯಿಂದ ಮತ್ತು ನಾಗರೀಕರ ದೃಷ್ಟಿಯಿಂದ ಬಹಳ ಮುಖ್ಯವಾದುದು. ಈ ದಿವಸ ಇದು ಚರ್ಚೆಯಾಗಿರುವುದರಿಂದ ಇವತ್ತೇ ಇದು ಪಾಸ್ ಆಗಬೇಕೆಂಬ ಹಠ ನಮಗೆ ಇಲ್ಲ. ಆದರೆ ಇದನ್ನು ಮುಂದಕ್ಕೆ ಹಾಕಿ ಎಂದು ಹೇಳುವುದೂ ಸರಿಯಲ್ಲ. ತಾವು ಇದನ್ನು ಮುಂದಕ್ಕೆ ಹಾಕುವುದಾದರೆ ಇನ್ನೊಂದು ದಿನಸ ನಾವು ಮಾತನಾಡಬೇಕಾಗುತ್ತದೆ. ಮಾನ್ಯ ಸದಸ್ಯರಾದ ಶ್ರೀಮಾನ್ ರಾಮದೇವ್‌ರವರು ೪-೫ ಸಲಹೆಗಳನ್ನು ಮಾತ್ರ ಕೊಡುವವರಿದ್ದಾರೆ. ಅವು ಏನು ಎಂಬುದನ್ನು ತಾವು ಕೇಳಬೇಕು. ಮಾನ್ಯ ಸದಸ್ಯರನ್ನು ತಮ್ಮ ಕಛೇರಿಗೆ ಬರಮಾಡಿಕೊಂಡು ವಿಚಾರ ವಿನಿಮಯ ಮಾಡುವುದಾಗಿ ಮಾನ್ಯ ಸಚಿವರು ಹೇಳಿದ್ದಾರೆ. ಆದರೆ ನಾನಾದರೂ ಒಂದು ಮಾತನ್ನು ಹೇಳುವುದೇನೆಂದರೆ, ನಮ್ಮ ಸಹಕಾರ ತಮಗೆ ಬೇಕೆಂದಿದ್ದರೆ.. ....

ಶ್ರೀ ಎಸ್. ಬಂಗಾರಪ್ಪ.—ತಾವು ಮೊದಲು ಹೇಳಿದ ಪ್ರಶ್ನೆ ಬಗ್ಗೆ ನನ್ನ ಅಭ್ಯಂತರ ಇಲ್ಲ. ಈ ವಿಷಯವನ್ನು ಓಟಿಗೆ ಹಾಕಬೇಕು, ಇವತ್ತೇ ಪಾಸ್ ಮಾಡಬೇಕೆಂಬ ಬಗ್ಗೆ ನಮ್ಮ ಅಭಿಪ್ರಾಯ ಇಲ್ಲವೆಂದು ಮಾನ್ಯ ಕಾನೂನು ಸಚಿವರು ಈಗಾಗಲೇ ಹೇಳಿದ್ದಾರೆ. ಆದರೆ ತಾವು ಹೇಳಿದ ಇನ್ನೊಂದು ಮಾತು ಎಂದರೆ "ನಮ್ಮ ಸಹಕಾರ ತಮಗೆ ಬೇಕೆಂದಿದ್ದರೆ" ಎಂದು ಏನು ಹೇಳಿದಿರಿ ಅದರ ಬಗ್ಗೆ ಹೇಳುವುದಾದರೆ ನಿಮ್ಮ ಸಹಾಯ, ಸಹಕಾರ ನಮಗೆ ಯಾವಾಗಲೂ ಬೇಕಾಗಿದೆ. ಹಿಂದೆ ನಾವೂ ನಿಮಗೆ ಸಹಕಾರ ನೀಡಿದ್ದೇವೆ, ಅದೇರೀತಿ ತಾವೂ ಕೂಡ ನಮಗೆ ಸಹಕಾರವನ್ನು ನೀಡಿದ್ದೀರಿ, ಇದರಲ್ಲಿ ಭಿನ್ನಾಭಿಪ್ರಾಯವಿಲ್ಲ.......

ಅಧ್ಯಕ್ಷರು.—ಈ ವಿಷಯವನ್ನು ಇವತ್ತೇ ಪಾಸ್ ಮಾಡಬೇಕೆಂದಾಗಲಿ ಅಥವಾ ಓಟಿಗೆ ಹಾಕಬೇಕೆಂದಾಗಲಿ ಮಾನ್ಯ ಕಾನೂನು ಸಚಿವರು ನಮಗೇನೂ ಹೇಳಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರಾದ ಶ್ರೀ ರಾಮದೇವ್‌ರವರು ಉತ್ತರ ಕೊಡತಕ ಹಕ್ಕನ್ನು ಹೊಂದಿದ್ದಾರೆ. ಇದನ್ನು ಇಲ್ಲವೆಂದು ಯಾರೂ ಹೇಳುವಂತಿಲ್ಲ. ಆದರೆ ಇದನ್ನು ಇವತ್ತೇ ಹೇಳಬೇಕೋ ಅಥವಾ ಮುಂದಿನವಾರ ಹೇಳಬೇಕೋ ಎಂಬುದನ್ನು ಸದನಕ್ಕೆ ತಿಳಿಸಬೇಕು.

ಶ್ರೀ ವೈ. ರಾಮಕೃಷ್ಣ.—ಇದನ್ನು ಮುಂದಿನವಾರ ತೆಗೆದುಕೊಳ್ಳಬಹುದು.

ಅಧ್ಯಕ್ಷರು.—ಈ ವಿಚಾರವನ್ನು ಮುಂದಿನವಾರ ತೆಗೆದುಕೊಳ್ಳಬಹುದೆಂದು ಸರ್ಕಾರದ ವತಿಯಿಂದ ಉತ್ತರ ಬಂದಿರುವುದರಿಂದ ಈ ಸಭೆಯನ್ನು ಇಲ್ಲಿಗೇ ಮುಕ್ತಾಯಮಾಡಲಾಗಿದೆ.

The House adjourned at Ten Minutes Past One of the clock to Meet again at Twelve of the Clock on Monday 30th June 1980.

W D 2748